ಪ್ರಜಾವಾಣಿ ಶನಿವಾರ • ಫೆಬ್ರುವರಿ 22, 2025

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಗುಂಡಿ ಮುಚ್ಚುವ ಯೋಗ್ಯತೆ ಇಲ್ಲ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇನ್ನು ಎರಡು–ಮೂರು ವರ್ಷ ಭಗವಂತನೇ ಭೂಮಿಗೆ ಅವತರಿಸಿ ಬಂದರೂ ಬೆಂಗಳೂರು ಉದ್ಧಾರ ಮಾಡಲು ಆಗುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಇದು ಕಾಂಗ್ರೆಸ್ ನೇತೃತ್ವದ ಸರ್ಕಾರದ ಯೋಗ್ಯತೆಗೆ ಹಿಡಿದ ಕನ್ನಡಿ' ಎಂದು ಬಿ.ಜೆ.ಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಕಿಡಿ ಕಾರಿದರು.

ಶುಕ್ರವಾರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕಾಂಗ್ರೆಸ್ ಪಕ್ಷದವರು, ಬೆಂಗಳೂರನ್ನು ಸಿಂಗಪುರ ಮಾಡುವುದಾಗಿ ಹೇಳಿ ಅಧಿಕಾರಕ್ಕೆ ಬಂದವರು. ಇವರ ಯೋಗ್ಯತೆಗೆ ಬೆಂಗಳೂರಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಸಾಧ್ಯ ಆಗುತ್ತಿಲ್ಲ' ಎಂದರು.

ಬೆಂಗಳೂರಿನಲ್ಲಿ ಭ್ರಷ್ಟಾಚಾರ ಹೆಚ್ಚಳ: ಉದ್ಯಮಿ ಟಿ.ವಿ.ಮೋಹನದಾಸ ಪೈ ಆಕ್ರೋಶ

'ಸಚಿವರು ಹೇಳಿದರೂ ಕೆಲಸ ಆಗುತ್ತಿಲ್ಲ'

ಪ್ರಜಾವಾಣಿ ವಾರ್ತೆ

ಮೋಹನದಾಸ ಪೈ

ಮುಖ್ಯಾಂಶಗಳು

- ಬೆಂಗಳೂರಿಗರು ಅತಿ ಹೆಚ್ಚು ತೆರಿಗೆ ಕಟ್ಟುತ್ತಾರೆ
- ಸ್ಥಳೀಯರಿಗೆ ಸಿಗುತ್ತಿರುವುದು ಕಡಿಮೆ
- ಎಲ್ಲವನ್ನೂ ಉಚಿತವಾಗಿ ಕೊಟ್ಟರೆ ಮೂಲಸೌಕರ್ಯಕ್ಕೆ ಹಣವೆಲ್ಲಿ?

ನವದೆಹಲಿ: 'ಬೇರೆ ರಾಜ್ಯಗಳಲ್ಲೂ ಭ್ರಷ್ಟಾಚಾರ ಇದೆ. ಅಲ್ಲಿನ ಸಚಿವರು ಸೂಚಿಸಿದರೆ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಆದರೆ, ನಮ್ಮ ಕರ್ನಾಟಕದಲ್ಲಿ ಸಚಿವರು ತಾಕೀತು ಮಾಡಿದರೂ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ' ಎಂದು ಉದ್ಯಮಿ ಟಿ.ವಿ.ಮೋಹನದಾಸ ಪೈ ಕಿಡಿಕಾರಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿದೆ. ಈಗ ದರ ಪಟ್ಟಿ ಹಾಕಿದ್ದಾರೆ. ದುಡ್ಡು ಕೊಟ್ಟು ಕೆಲಸ ಮಾಡಿಸಿಕೊಳ್ಳಬೇಕು. ಹುದ್ದೆಗಳಿಗೆ ಕೋಟ್ಯಂತರ ರೂಪಾಯಿ ಕೊಟ್ಟು ಅಧಿಕಾರಿಗಳು ಬರುತ್ತಿದ್ದಾರೆ. ಹುದ್ದೆಗೆ ಬಂದ ಬಳಿಕ ಲಂಚದ ಮೂಲಕ ಹಣ ಗಳಿಸುತ್ತಾರೆ. ಮನೆ ಕಟ್ಟಲು ಅನುಮತಿ ಕೇಳಿದರೆ ಹಣ ಕೇಳುತ್ತಾರೆ. ಯಾವುದೇ ಕೆಲಸಗಳು ಆಗುತ್ತಿಲ್ಲ' ಎಂದು ದೂರಿದರು.

ಬೆಂಗಳೂರಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಶೀಘ್ರದಲ್ಲಿ ಮುಗಿಸುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿದ್ದೆವು. ಯಾವುದೇ ಕೆಲಸ ವೇಗವಾಗಿ ನಡೆಯುತ್ತಿಲ್ಲ. ಸಾರ್ವಜನಿಕ ಸಾರಿಗೆ ಬಲಪಡಿಸಲು ಬಸ್‌ಗಳ ಖರೀದಿ ಮಾಡಬೇಕಿತ್ತು. ಆ ಕೆಲಸವೂ ಆಗಿಲ್ಲ. ಟೆಕ್ ಪಾರ್ಕ್‌ಗಳ ಮುಂದಿರುವ ರಸ್ತೆಗಳನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇದನ್ನೆಲ್ಲ ಡಿ.ಕೆ. ಶಿವಕುಮಾರ್ ಅವರಿಂದ ಸರಿ ಮಾಡಲು ಸಾಧ್ಯವಾಗುತ್ತಿಲ್ಲ. ಏಕೆ' ಎಂದು ಅವರು ಪ್ರಶ್ನಿಸಿದರು.

'ಸುರಂಗ ರಸ್ತೆ ಯೋಜನೆ ಪೂರ್ಣಗೊಳ್ಳಲು 10 ವರ್ಷಗಳು ಬೇಕು. ಅಲ್ಲಿಯವರೆಗೆ ಬೆಂಗಳೂರಿನ ಕಥೆ ಏನು? ಭ್ರಷ್ಟಾಚಾರ ಕಡಿಮೆ ಮಾಡಿ. ಅನುಮತಿಗಳನ್ನು ಬೇಗ ಕೊಡಿ' ಎಂದು ಅವರು ಮನವಿ ಮಾಡಿದರು.

'ಬೆಂಗಳೂರಿನ ಜನರು ಅತಿ ಹೆಚ್ಚು ತೆರಿಗೆ ಕೊಡುತ್ತಿದ್ದಾರೆ. ಆದರೆ, ಅವರಿಗೆ ಸಿಗುತ್ತಿರುವುದು ಕಡಿಮೆ. ಬ್ರ್ಯಾಂಡ್ ಬೆಂಗಳೂರು ಹೆಸರು ಹಾಳಾಗುತ್ತಿದೆ. ನಗರದಲ್ಲಿ ಸಂಚಾರ ದಟ್ಟಣೆ ಹೆಚ್ಚಾಗುತ್ತಿರುವುದು ಏಕೆ ಎಂದು ಅಮೆರಿಕದ ಸ್ನೇಹಿತರು ಕೇಳುತ್ತಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಪರಿಸ್ಥಿತಿ ಇನ್ನಷ್ಟು ಹಾಳಾಗಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿ ಆಗಿದ್ದಾಗ ಸಾಮಾಜಿಕ ನ್ಯಾಯ ಇರಲಿಲ್ಲವೇ ಎಂದು ಪ್ರಶ್ನಿಸಿದ ಅವರು, 'ನನ್ನ ಸ್ನೇಹಿತರು ಉಚಿತ ವಿದ್ಯುತ್ ಪಡೆಯುತ್ತಿದ್ದಾರೆ. ಹೀಗೆ ಎಲ್ಲ ಉಚಿತವಾಗಿ ನೀಡಿದರೆ ಮೂಲಸೌಕರ್ಯ ಯೋಜನೆಗಳಿಗೆ ಹಣ ಎಲ್ಲಿದೆ? ಶಿಕ್ಷಣ ಹಾಗೂ ವೈದ್ಯಕೀಯ ಕ್ಷೇತ್ರ ಬಲಪಡಿಸಲು ಹಣ ಬೇಕು. ಸಿದ್ದರಾಮಯ್ಯ ಅವರು ಅತ್ಯುತ್ತಮ ಹಣಕಾಸು ಸಚಿವರು. ಆದರೆ, ಅವರ ಬಳಿ ಹಣವಿಲ್ಲ. ಶಾಸಕರಿಗೆ ಅನುದಾನ ಕೊಡಲು ಸಾಧ್ಯವಾಗದಂತಹ ಸ್ಥಿತಿ ಇದೆ' ಎಂದರು.

'ಬಿಬಿಎಂಪಿ ಚುನಾವಣೆ ನಡೆಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಷ್ಟು ಬೇಗ ಬಿಬಿಎಂಪಿ ಚುನಾವಣೆ ನಡೆಸಬೇಕು. ಚುನಾವಣೆಗೆ ಒತ್ತಾಯಿಸಿ ನ್ಯಾಯಾಲಯ ದಲ್ಲಿ ವಾದ ಮಂಡಿಸಲು 15 ಮಂದಿ ಕಾನೂನು ಪರಿಣತರ ತಂಡ ರಚಿಸಲಾಗಿದೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ತಿಳಿಸಿದರು.

ಬಿಬಿಎಂಪಿ ಚುನಾವಣೆ ಮತ್ತು ಬೆಂಗಳೂರು ಅಭಿವೃದ್ಧಿ ಕುರಿತು ಶುಕ್ರವಾರ ನಡೆದ ಬಿಜೆಪಿ ಶಾಸಕರು ಮತ್ತು ಮುಖಂಡರ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಬಿಬಿಎಂಪಿಗೆ ಚುನಾವಣೆ ನಡೆಸುವ ಮನಸ್ಸಿಲ್ಲದ ಸರ್ಕಾರ 'ಗ್ರೇಟರ್ ಬೆಂಗಳೂರು ರಚಿಸುತ್ತೇವೆ. ಇನ್ನಷ್ಟು ಪ್ರದೇಶಗಳನ್ನು ಬೆಂಗಳೂರಿಗೆ ಸೇರಿಸುತ್ತೇವೆ' ಎಂದು ಹೇಳುತ್ತಿದೆ. ಇರುವ ನಗರವನ್ನೇ ಸುಧಾರಣೆ ಮಾಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಇನ್ನು ಹೊಸ ಪ್ರದೇಶಗಳ ಅಭಿವೃದ್ಧಿ ಹೇಗೆ ಸಾಧ್ಯ? ಬೆಂಗಳೂರನ್ನು ಒಡೆದರೆ ನಾಡಪ್ರಭು ಕೆಂಪೇಗೌಡರಿಗೆ ಅಪಮಾನ ಮಾಡಿದಂತಾಗುತ್ತದೆ. ಕೆಂಪೇಗೌಡರನ್ನು ನಂಬುವ ಜನರ ಮನಸ್ಸಿಗೆ ನೋವಾಗುತ್ತದೆ ಎಂದರು.

150 ಅಡಿ ಆಳದಲ್ಲಿ ಸುರಂಗ ಕೊರೆದು ರಸ್ತೆ ಮಾಡಲು ಹೊರಟಿದ್ದಾರೆ. ಡಿ.ಕೆ. ಶಿವಕುಮಾರ್ ಅವರ ಹೇಳಿಕೆಗಳಿಂದ ಜನ ರೊಚ್ಚಿಗೆದ್ದಿದ್ದಾರೆ. ಬೆಂಗಳೂರಿಗೆ ಬೆಂಗಳೂರಿನವರೇ ಆದ ಸಚಿವರಿಲ್ಲ. ಬೇರೆ ಜಿಲ್ಲೆಯ ಸಚಿವರಿಗೆ ನಗರದ ಬಗ್ಗೆ ಆಸಕ್ತಿ ಇಲ್ಲ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನ ಜವಾಬ್ದಾರಿ ವಹಿಸಿಲ್ಲ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೇವರ ಮೊರೆಹೋಗಿ, ನಗರವನ್ನು ದೇವರಿಗೆ ಅರ್ಪಣೆ ಮಾಡಿದ್ದಾರೆ. ರಾಜಧಾನಿಯನ್ನು ದೇವರೇ ಕಾಪಾಡಬೇಕಿದೆ ಎಂದು ಹೇಳಿದರು.

ಹೊಸಕೆರೆಹಳ್ಳಿ ರಾಜಕಾಲುವೆ ಅತಿಕ್ರಮಣ

ಬಹುಮಹಡಿ ಕಟ್ಟಡ, 63 ಮನೆಗಳ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಹೊಸಕೆರೆಹಳ್ಳಿ ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆಯ ಮೀಸಲು ಪ್ರದೇಶದ ಅತಿಕ್ರಮಣದಾರರನ್ನು ತೆರವುಗೊಳಿಸಲು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಆದೇಶ ನೀಡಿದೆ. ಇದರಿಂದಾಗಿ, ಎರಡು ಬಹುಮಹಡಿ ಕಟ್ಟಡಗಳು ಹಾಗೂ 63 ಮನೆಗಳನ್ನು ಬಿಬಿಎಂಪಿ ತೆರವುಗೊಳಿಸಬೇಕಿದೆ.

ರಾಜಕಾಲುವೆ ಒತ್ತುವರಿಯಾಗಿದೆ ಎಂದು ಆರೋಪಿಸಿ 'ನೈಬರ್‌ಹುಡ್ ವಾಚ್ ಕಮಿಟಿ'ಯು ಎನ್‌ಜಿಟಿಯಲ್ಲಿ ಪ್ರಕರಣ ದಾಖಲಿಸಿತ್ತು. ಈ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಅವರಿಗೆ ಎನ್‌ಜಿಟಿ ಚೆನ್ನೈ ಪೀಠವು ಸೂಚಿಸಿತ್ತು.

ಜಿಲ್ಲಾಧಿಕಾರಿ ಸೂಚನೆ ಮೇರೆಗೆ ಬೆಂಗಳೂರು ದಕ್ಷಿಣ ತಹಶೀಲ್ದಾರ್ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದರು. ಸರ್ವೆ ಸಂಖ್ಯೆ 90ರಲ್ಲಿನ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಎರಡು ಕಟ್ಟಡಗಳು, 30 ತಾತ್ಕಾಲಿಕ ಶೆಡ್‌ಗಳು ಹಾಗೂ ಬಿಡಿಎಗೆ ಸ್ವಾಧೀನವಾಗಿರುವ ಪ್ರದೇಶದಲ್ಲಿ 33 ಆರ್‌ಸಿಸಿ ಮನೆಗಳು ನಿರ್ಮಾಣವಾಗಿರುವುದು ಕಂಡುಬಂದಿದೆ. ಈ ಕಟ್ಟಡಗಳು ರಾಜಕಾಲುವೆಯ 15 ಮೀಟರ್ ಮೀಸಲು ಪ್ರದೇಶದಲ್ಲಿವೆ ಎಂದು ಅವರು ವರದಿಯಲ್ಲಿ ಉಲ್ಲೇಖಿಸಿದ್ದರು. ನಗರ ಜಿಲ್ಲಾಧಿಕಾರಿ ಕೆ.ಜಗದೀಶ್ ಅವರು ಎನ್‌ಜಿಟಿಗೆ ಇದೇ 13ರಂದು ವರದಿ ಸಲ್ಲಿಸಿದ್ದರು.

ಹೀಗಾಗಿ, ನ್ಯಾಯಮೂರ್ತಿ ಪುಷ್ಪಾ ಸತ್ಯನಾರಾಯಣ ಮತ್ತು ತಜ್ಞ ಸದಸ್ಯ ಸತ್ಯಗೋಪಾಲ್ ಕೊರ್ಲಪಾಟಿ ಅವರಿದ್ದ ಪೀಠವು ಒತ್ತುವರಿ ತೆರವುಗೊಳಿಸುವಂತೆ ಬಿಬಿಎಂಪಿಗೆ ನಿರ್ದೇಶನ ನೀಡಿದೆ.

ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಸೇರಿದ ಬಹುಮಹಡಿ ಕಟ್ಟಡ

ಬಹುಮಹಡಿ ಕಟ್ಟಡಗಳು ಸಹ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಸೇರಿವೆ ಎಂದು ಸ್ಥಳ ತನಿಖೆಯಿಂದ ಗೊತ್ತಾಗಿದೆ. ಕೊಳಚೆ ಪ್ರದೇಶಗಳ ನಿವಾಸಿಗಳನ್ನು ಸ್ಥಳಾಂತರಿಸಲು ಪರ್ಯಾಯ ಸ್ಥಳವನ್ನು ಗುರುತಿಸಲು ಕನಿಷ್ಠ ಎರಡು ಎರಡು ತಿಂಗಳು ಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿ ಅವರು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಆದಾಗ್ಯೂ, ಅತಿಕ್ರಮಣ ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಪೀಠವು ಅಧಿಕಾರಿಗಳಿಗೆ ಆದೇಶಿಸಿತು. 'ಅತಿಕ್ರಮಣ ತೆರವುಗೊಳಿಸಲು ಬಿಬಿಎಂಪಿಯು ಒತ್ತುವರಿದಾರರಿಗೆ ಸಹಜ ನ್ಯಾಯ ಪ್ರಕ್ರಿಯೆಯಡಿ ನೋಟಿಸ್ ನೀಡಿ ತೆರವುಗೊಳಿಸಬೇಕು. ಜತೆಗೆ, ಈ ಬಗ್ಗೆ ಕೈಗೊಂಡಿರುವ ಕ್ರಮಗಳ ವರದಿಯನ್ನು ಮುಂದಿನ ವಿಚಾರಣೆಯ ದಿನದಂದು ಸಲ್ಲಿಸಬೇಕು' ಎಂದು ಸೂಚಿಸಿತು. ವಿಚಾರಣೆಯನ್ನು ಏಪ್ರಿಲ್ 16ಕ್ಕೆ ಮುಂದೂಡಲಾಗಿದೆ.

ರಾಜ್ಯದಲ್ಲಿ ನೂತನ ಜೈವಿಕ ಇಂಧನ ನೀತಿ ರಚನೆ ಸಂಬಂಧ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ನೇತೃತ್ವದಲ್ಲಿ ಶುಕ್ರವಾರ ತಜ್ಞರ ಸಭೆ ನಡೆಯಿತು. ಜೈವಿಕ ಇಂಧನ ಉತ್ಪಾದನೆ ಹೆಚ್ಚಳ, ರೈತರ ಒಳಗೊಳ್ಳುವಿಕೆ, ಸಮುದಾಯ ಪಾಲ್ಗೊಳ್ಳುವಿಕೆ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ರಾಜ್ಯ ಜೈವಿಕ ಇಂಧನ ಮಂಡಳಿ ಅಧಿಕಾರಿಗಳು, ವಿಷಯ ಪರಿಣತರು, ಉದ್ಯಮಿಗಳು ಸಭೆಯಲ್ಲಿ ಭಾಗಿಯಾಗಿದ್ದರು

ಬಿಡಿಎ ಅಧಿಕಾರಿಗಳ ಹೇಳಿಕೆಗೆ ಖಂಡನೆ

ಬೆಂಗಳೂರು: ವಿಧಾನಸಭೆ ಅರ್ಜಿ ಸಮಿತಿಯ ಸಭೆಯಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆ (ಎನ್‌ಕೆಪಿಎಲ್) ಕುರಿತ ದೂರಿನ ವಿಚಾರಣೆ ವೇಳೆ 20x30 ಅಳತೆಯ ನಿವೇಶನ ಮಾಲೀಕರ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ದ ಅಧಿಕಾರಿಗಳು ನೀಡಿರುವ ಹೇಳಿಕೆಯನ್ನು ಎನ್‌ಕೆಪಿಎಲ್ ಮುಕ್ತ ವೇದಿಕೆ ಖಂಡಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ವೇದಿಕೆ ಅಧ್ಯಕ್ಷ ಚನ್ನಬಸವ ರಾಜ, 'ಸಭೆಯಲ್ಲಿ ಬಿಡಿಎ ಆಯುಕ್ತರು ತಮ್ಮ ಇಲಾಖೆಯ ವೈಫಲ್ಯ ಮುಚ್ಚಿಕೊಳ್ಳಲು 20X30 ಅಳತೆಯ ನಿವೇಶನ ಖರೀದಿಸಿದವರಿಂದ ಮೂಲಸೌಕರ್ಯಗಳ ಬಗ್ಗೆ ಅಪಪ್ರಚಾರ ನಡೆಯುತ್ತಿದೆ ಎಂದು ಹೇಳಿದ್ದಾರೆ. ಈ ಅಳತೆಯ ನಿವೇಶನಗಳು ಆರ್ಥಿಕವಾಗಿ ದುರ್ಬಲ ವರ್ಗದ ಮತ್ತು ಸಮಾಜದ ಹಿಂದುಳಿದ ವರ್ಗಗಳಿಗೆ ಮೀಸಲಾಗಿವೆ' ಎಂದು ತಿಳಿಸಿದ್ದಾರೆ.

'ಈ ಹೇಳಿಕೆ ಸಮಾಜದಲ್ಲಿ ಬಡವರ ಬಗ್ಗೆ ಅವರ ದೃಷ್ಟಿಕೋನ ಪ್ರತಿಬಿಂಬಿಸುತ್ತದೆ ಹಾಗೂ ಸಮುದಾಯವನ್ನು ಅವಮಾನಿಸಿದಂತಾಗಿದೆ. ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಬಿಡಿಎ ಆಯುಕ್ತರು ಹಾಗೂ ಅಧಿಕಾರಿಗಳನ್ನು ತಕ್ಷಣವೇ ಬದಲಿಸಬೇಕು' ಎಂದು ಮನವಿ ಮಾಡಿದ್ದಾರೆ.

'ಕೊನೆತಾಣದ ಸಂಪರ್ಕ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರತಿ ನಾಗರಿಕರು ಸಾರ್ವಜನಿಕ ಸಾರಿಗೆ ಬಳಸಬೇಕಿದ್ದರೂ, ಅದಕ್ಕೆ ಅಗತ್ಯವಿರುವ ಕೊನೆತಾಣದ ಸಂಪರ್ಕ (ಲಾಸ್ಟ್ ಮೈಲ್ ಕನೆಕ್ಟಿವಿಟಿ) ವ್ಯವಸ್ಥೆ ಇಲ್ಲ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದರು.

'ನಮ್ಮ ರಸ್ತೆ–2025'ಯಲ್ಲಿ 'ಪಾಲಿಕೆಯ ಎಂಜಿನಿಯರ್‌ಗಳ ಸಾಮರ್ಥ್ಯ ವೃದ್ಧಿ' ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಸಾರ್ವಜನಿಕ ಸಾರಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ಎಲೆಕ್ಟ್ರಿಕ್ ವಾಹನಗಳು, ಸಹ ಪ್ರಯಾಣ ಸೇರಿದಂತೆ ಇನ್ನಿತರೆ ವಾಹನಗಳನ್ನು ಸಂಪರ್ಕಕೊಂಡಿಯ ವ್ಯವಸ್ಥೆಯನ್ನಾಗಿ ಮಾಡಿದರೆ ಸಮಸ್ಯೆ ಬಗೆಹರಿಸಬಹುದಾಗಿದೆ. ಸರ್ಕಾರದ ಜೊತೆಗೆ ನಾಗರಿಕರು ಕೈಜೋಡಿಸಿದರೆ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಸಾಧ್ಯ ಎಂದರು.

ನಗರದಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ನಾಗರಿಕರಾದವರು, ಇದು 'ನಮ್ಮ ಬೆಂಗಳೂರು - ನಮ್ಮ ರಸ್ತೆ, ನಮ್ಮದೇ ಸಮಸ್ಯೆ - ನಮ್ಮದೇ ಪರಿಹಾರ' ಎಂದು ಯೋಚಿಸಿ ಎಲ್ಲರೂ ಒಟ್ಟಾಗಿ ಶ್ರಮಿಸಬೇಕು. ಆಗ ಸಮಸ್ಯೆಗೆ ಪರಿಹಾರ ಕಂಡುಕೊಂಡು ಉತ್ತಮ ಫಲಿತಾಂಶ ಯಶಸ್ವಿಯಾಗಲು ಸಾಧ್ಯ ಎಂದು ಹೇಳಿದರು.

'ಬೆಂಗಳೂರಿನ ಹವಾಮಾನದ ಬಗ್ಗೆ ಎಲ್ಲರೂ ಸಂತಸ ವ್ಯಕ್ತಪಡಿಸುತ್ತಾರೆ. ಹಾಗೆಯೇ, ನಗರದ ರಸ್ತೆಗಳ ಬಗ್ಗೆ ಅಷ್ಟೇ ಬೇಸರ ವ್ಯಕ್ತಪಡಿಸುತ್ತಾರೆ. ನಾವು ಜನಸಂಖ್ಯೆಗೆ ಅನುಗುಣವಾಗಿ ಯೋಜನೆ ರೂಪಿಸಿದರೆ ಅದಕ್ಕಿಂತ ಹೆಚ್ಚಾಗಿ ಜನಸಂಖ್ಯೆ ಹಾಗೂ ಸಂಚಾರ ದಟ್ಟಣೆ ನಿಯಂತ್ರಣ ಮೀರಿ ಹೆಚ್ಚುತ್ತಲೇ ಇದೆ. ಅದನ್ನು ನಾವು ಹೇಗೆ ನಿಯಂತ್ರಣ ಮಾಡಬೇಕೆಂಬುದರ ಬಗ್ಗೆ ಕೂಲಂಕಷವಾಗಿ ಅಧ್ಯಯನ ನಡೆಸಬೇಕಿದೆ' ಎಂದು ತಿಳಿಸಿದರು.

ಶಾಲೆಯಿಂದ ಹೊರಗುಳಿದ ಮಕ್ಕಳ ಗುರುತಿಸಲು ನೋಡಲ್ ಅಧಿಕಾರಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಸಮೀಕ್ಷೆ ನಡೆಸಲು ಜಂಟಿ ಆಯುಕ್ತರನ್ನು ನೋಡಲ್ ಅಧಿಕಾರಿಗಳನ್ನಾಗಿ ನಿಯೋಜಿಸಲಾಗಿದೆ ಎಂದು ಶಿಕ್ಷಣ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ತಿಳಿಸಿದರು.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು, ಶಾಲೆಯಿಂದ ಹೊರಗುಳಿದ ಮಕ್ಕಳು ಹಾಗೂ ಶಾಲೆಗೆ ದಾಖಲಾಗದ ಮಕ್ಕಳ ಬಗ್ಗೆ ವಿಚಾರಣೆ ನಡೆಸುತ್ತಿರುವ ಹೈಕೋರ್ಟ್‌ಗೆ, ಶಾಲೆಯಿಂದ ಹೊರಗುಳಿದ ಮಕ್ಕಳ ನಿಖರ ಸಂಖ್ಯೆ ಗುರುತಿಸುವುದು ಅವಶ್ಯಕವಾಗಿದೆ ಎಂದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಫೆಬ್ರುವರಿ 24ರಿಂದ ಮನೆ ಮನೆ ಸಮೀಕ್ಷೆಯ ಮಾಡಬೇಕು. ಅದಕ್ಕಾಗಿ ಪ್ರತಿ ವಾರ್ಡ್‌ಗೆ ಸುಮಾರು 10 ಗಣತಿದಾರರನ್ನು ನೇಮಿಸಲಾಗಿದ್ದು, ಮನೆಗೆ ಭೇಟಿ ನೀಡಿ 6ರಿಂದ 18 ವರ್ಷದ ವಯಸ್ಸಿನ ಎಲ್ಲರನ್ನೂ ಸಮೀಕ್ಷೆ ಮಾಡಲಾಗುತ್ತದೆ ಎಂದರು.

'ನಿರುದ್ಯೋಗಿಗಳಿಗೆ ಅನುಕೂಲ'

ಬೆಂಗಳೂರು: 'ಉದ್ಯೋಗ ಮೇಳಗಳು ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ನಿರುದ್ಯೋಗಿ ಯುವಕ- ಯುವತಿಯರಿಗೆ ಭವಿಷ್ಯ ರೂಪಿಸಿಕೊಳ್ಳಲು ನೆರವಾಗುತ್ತಿದೆ' ಎಂದು ವಿಧಾನ ಪರಿಷತ್‌ನ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹಮದ್ ಹೇಳಿದರು.

ನಗರದ ಖುದ್ದೂಸ್ ಈದ್ಗಾ ಮೈದಾನದಲ್ಲಿ ಆಲ್ ಇಂಡಿಯಾ ಕೇರಳ ಮುಸ್ಲಿಂ ಕಲ್ಚರಲ್ ಸೆಂಟರ್ ಹಾಗೂ ಶಿಹಾಬ್ ತಂಗಳ್ ಸೆಂಟರ್ ಫಾರ್ ಹ್ಯೂಮಾನಿಟಿ ವತಿಯಿಂದ ಹಮ್ಮಿಕೊಂಡಿದ್ದ ಉದ್ಯೋಗ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

100ಕ್ಕೂ ಹೆಚ್ಚು ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದವು. ಐದು ಸಾವಿರಕ್ಕೂ ಹೆಚ್ಚು ಉದ್ಯೋಗ ಆಕಾಂಕ್ಷಿಗಳು ತಮ್ಮ ಹೆಸರು ನೋಂದಣಿ ಮಾಡಿಕೊಂಡರು.

Advertorial

ಹುಣಸೂರು ನಗರದಾದ್ಯಂತ ಪ್ರತಿ ಬಡಾವಣೆಯಲ್ಲಿ ಬಿ–ಖಾತಾ ಆಂದೋಲನ ಆಯೋಜಿಸಿ, ಮನೆ ಬಾಗಿಲಿಗೆ ಖಾತಾಪತ್ರ ನೀಡಲು ಕ್ರಮ ವಹಿಸುವುದಾಗಿ ಶಾಸಕ ಜಿ.ಡಿ. ಹರೀಶ್‌ಗೌಡ ತಿಳಿಸಿದರು. ರಾಜ್ಯಾದ್ಯಂತ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಅನಧಿಕೃತ ಬಡಾವಣೆಗಳಲ್ಲಿ ನಿವೇಶನ, ಕಟ್ಟಡಗಳಿಗೆ ಇ ಆಸ್ತಿ ತಂತ್ರಾಂಶದ ಮೂಲಕ ಬಿ ಖಾತೆ ಪಡೆಯಲು ರಾಜ್ಯ ಸರ್ಕಾರ ಎರಡು ದಿನಗಳ ಹಿಂದೆ ಅವಕಾಶ ಮಾಡಿಕೊಟ್ಟಿದೆ. 2023ರಲ್ಲಿ ಈ ಕುರಿತು ನಾನು ವಿಧಾನಸಭೆ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆದಿದ್ದೆ. ಇದೀಗ ಸರ್ಕಾರ ರಾಜ್ಯಾದ್ಯಂತ ಲಕ್ಷಾಂತರ ಬಡ, ಮಧ್ಯಮ ವರ್ಗದ ಜನರ ಬಹು ವರ್ಷಗಳ ಕನಸನ್ನು ಈಡೇರಿಸಿದೆ. ಇದಕ್ಕಾಗಿ ನಾನು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪೌರಾಡಳಿತ ಸಚಿವ ರಹೀಂ ಖಾನ್ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಅವರು ಹೇಳಿದರು.

ಬಿ–ಖಾತಾ ಆದೇಶ ದಶಕಗಳ ಸಮಸ್ಯೆಗೆ ಸ್ಪಂದನೆ

ಸರ್ಕಾರಕ್ಕೆ ಶಾಸಕ ಜಿ.ಡಿ.ಹರೀಶ್ ಗೌಡ ಅಭಿನಂದನೆ

47 ವರ್ಷಗಳ ಬವಣೆಗೆ ಪರಿಹಾರ

ಹುಣಸೂರು ತಾಲೂಕಿನಲ್ಲಿ 1975ರಿಂದಲೂ ಅನಧಿಕೃತ ಬಡಾವಣೆಗಳ ಸಮಸ್ಯೆ ನಾಗರಿಕರನ್ನು ಕಾಡುತ್ತಿತ್ತು. ಇದೀಗ ಈ ಸಮಸ್ಯೆಗೆ ಶಾಶ್ವತ ಪರಿಹಾರ ಸಿಕ್ಕಿದೆ. ನನ್ನಿಂದಾಗಿ ರಾಜ್ಯಾದ್ಯಂತ ಸಮಸ್ಯೆ ಪರಿಹಾರವಾಯಿತಲ್ಲ ಎನ್ನುವ ಹೆಮ್ಮೆಗಿಂತ, ನನ್ನ ತಾಲೂಕಿನ ಜನರ ಬವಣೆಗೆ ಶಾಶ್ವತ ಪರಿಹಾರ ಸಿಕ್ಕಿತಲ್ಲ ಎನ್ನುವುದೇ ನನಗೆ ಸಂತಸ ಮತ್ತು ಸಮಾಧಾನ ತಂದ ವಿಷಯವಾಗಿದೆ ಎಂದು ಶಾಸಕರು ಹೇಳಿದರು.

ಸದುಪಯೋಗ ಪಡೆಯುವಂತೆ ನಾಗರಿಕರಲ್ಲಿ ಮನವಿ

ಹುಣಸೂರು ತಾಲೂಕಿನಲ್ಲಿ 81 ಅನಧಿಕೃತ ಬಡಾವಣೆಗಳಿದ್ದು, ಇವರೆಲ್ಲರೂ ನಿವೇಶನ ಅಥವಾ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಆದರೆ ಇವರಿಗೆ ನಗರಸಭೆಯಿಂದ ನಮೂನೆ 3 ಯಾವುದೇ ರೂಪದಲ್ಲೂ ಸಿಕ್ಕಿಲ್ಲ. ಇದರಿಂದ ಮನೆ ಮಾರಾಟ, ಬ್ಯಾಂಕ್ ಸಾಲ ಇನ್ನಿತರ ಸೌಲಭ್ಯಗಳಿಂದ ವಂಚಿತರಾಗಿದ್ದರು ಎಂದು ಶಾಸಕರು ತಿಳಿಸಿದರು. ಹುಣಸೂರು ನಗರ ವ್ಯಾಪ್ತಿಯ ಎಲ್ಲ 31 ವಾರ್ಡ್ ಗಳಲ್ಲಿ ಇನ್ನೆರಡು ದಿನಗಳಲ್ಲಿ ನಗರಸಭೆ ಅಧಿಕಾರಿಗಳು ಮತ್ತು ಕೌನ್ಸಿಲರ್‌ಗಳನ್ನೊಳಗೊಂಡು ಬಿ ಖಾತಾ ಆಂದೋಲನ ಆಯೋಜಿಸಿ ನಾಗರಿಕರಲ್ಲಿ ಅರಿವು ಮೂಡಿಸಲಾಗು ವುದು. ಮಾತ್ರವಲ್ಲದೆ, ಎಲ್ಲ ಬಡಾವಣೆಗಳಲ್ಲಿ ನಗರಸಭೆ ಅಧಿಕಾರಿಗಳು ಮೊಕ್ಕಾಂ ಹೂಡಿ, ನಾಗರಿಕರಿಂದ ದಾಖಲೆಗಳನ್ನು ಪಡೆದು ಸ್ಥಳದಲ್ಲೇ ಬಿ ಖಾತೆ ನೀಡುವ ಉದ್ದೇಶ ಹೊಂದಲಾಗಿದೆ. ಈ ಕುರಿತು ತಂತ್ರಾಂಶಗಳ ಬಗ್ಗೆ ಮಾಹಿತಿ ಪಡೆಯಲಿದ್ದೇನೆ ಎಂದು ಅವರು ಹೇಳಿದರು. ಹುಣಸೂರು ನಗರದಲ್ಲಿ 31 ವಾರ್ಡ್‌ಗಳಿಂದ ಸರಿಸುಮಾರು 2ರಿಂದ 3 ಸಾವಿರಕ್ಕೂ ಹೆಚ್ಚು ಮಂದಿ ಯೋಜನೆಯ ಫಲಾನುಭವಿಗಳಾಗಲಿದ್ದು, ಇದಕ್ಕಾಗಿ ಸರ್ಕಾರ ಮೂರು ತಿಂಗಳ ಗಡುವು ನೀಡಿದೆ. ಹೀಗಾಗಿ, ಸಿಬ್ಬಂದಿ ಕೊರತೆ ಕಾಡಬಹು ದಾಗಿದೆ. ಅದನ್ನು ನೀಗಿಸಲು ಜಿಲ್ಲಾಧಿಕಾರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಅವಶ್ಯವಿರುವ ಸಿಬ್ಬಂದಿ ಮತ್ತು ಸೌಲಭ್ಯಗಳನ್ನು ಒದಗಿಸುವುದಾಗಿ ಅವರು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು. ಈ ಎಲ್ಲ ಜವಾಬ್ದಾರಿಗಳನ್ನು ನಗರಸಭೆ ಸದಸ್ಯರೊಡನೆ ನಾನೇ ತೆಗೆದುಕೊಳ್ಳುತ್ತೇನೆ. ಆಂದೋಲನದಲ್ಲೂ ಪಾಲ್ಗೊಂಡು ನಾಗರಿಕರಿಗೆ ಅರಿವು ಮೂಡಿಸುವ ಕಾರ್ಯ ನಡೆಸುತ್ತೇನೆ. ಹಾಗಾಗಿ, ಸರ್ಕಾರ ನೀಡಿರುವ ಅವಕಾಶವನ್ನು ಯಾರೊಬ್ಬರೂ ತಪ್ಪಿಸಿಕೊಳ್ಳದೆ, ಸದುಪಯೋಗ ಪಡೆದುಕೊಳ್ಳಬೇಕೆಂದು ಶಾಸಕ ಹರೀಶ್ ಗೌಡ ಅವರು, ನಾಗರಿಕರಲ್ಲಿ ಮನವಿ ಮಾಡಿದರು.

ಹುಣಸೂರಿನ ಶಾಸಕರ ಕಚೇರಿಯಲ್ಲಿ ಶಾಸಕ ಜಿ.ಡಿ. ಹರೀಶ್‌ಗೌಡ ಮಾತನಾಡಿದರು. ನಗರಸಭಾಧ್ಯಕ್ಷ ಎಸ್.ಶರವಣ, ಮುಖಂಡ ಹರವೆ ಶ್ರೀಧರ್ ಇದ್ದರು.

ಸೇವೆ ಮಾಡುವ ಉತ್ಸಾಹ ಹೆಚ್ಚಳ

ಹುಣಸೂರು ಕ್ಷೇತ್ರದ ಶಾಸಕನಾಗಿ ನಾನು ನನ್ನ ಕ್ಷೇತ್ರದ ಜನರ ಹಿತದೃಷ್ಟಿಯಿಂದ ಅಕ್ರಮ ಆಸ್ತಿಯನ್ನು ಸಕ್ರಮಗೊಳಿಸುವ ಪ್ರಸ್ತಾಪವನ್ನು ಸರ್ಕಾರದ ಮುಂದೆ ಪದೇ ಪದೆ ಮಂಡಿಸಿರುತ್ತೇನೆ. ಇದೊಂದು ಗಂಭೀರ ವಿಚಾರ ಎಂಬುದನ್ನು ಸರ್ಕಾರಕ್ಕೆ ಮನದಟ್ಟು ಮಾಡಿಕೊಡುವಲ್ಲಿ ಯಶಸ್ವಿಯಾಗಿದ್ದೇನೆ. ನನ್ನ ಕ್ಷೇತ್ರದ ಜನತೆಯ ಜತೆಗೆ ಇಡೀ ರಾಜ್ಯದ ಜನತೆಗೆ ಇದರಿಂದ ಅನುಕೂಲವಾಗಿರುವುದು ನನ್ನ ಸಾರ್ವಜನಿಕ ಜೀವನದಲ್ಲಿ ಸಂತಸದ ಕ್ಷಣವೆಂದು ಭಾವಿಸುತ್ತೇನೆ. ಇದರಿಂದ ಜನರ ಸೇವೆ ಮಾಡುವ ಉತ್ಸಾಹ ಇನ್ನೂ ಹೆಚ್ಚಾಗಿದೆ. ಅದಕ್ಕಾಗಿ ಕ್ಷೇತ್ರದ ಜನತೆಗೆ ನಾನು ಋಣಿಯಾಗಿರುತ್ತೇನೆ. ಇದರಿಂದ ಹಲವಾರು ದಶಕಗಳಿಂದ ಹುಣಸೂರು ಪಟ್ಟಣದ ಜನತೆಯನ್ನು ಕಾಡುತ್ತಿದ್ದ ಸಮಸ್ಯೆಯೊಂದು ಬಗೆಹರಿದಂತಾಗಿದೆ.

◀ ಜಿ.ಡಿ.ಹರೀಶ್ ಗೌಡ
ಶಾಸಕರು, ಹುಣಸೂರು ಕ್ಷೇತ್ರ

ಆಶ್ರಯ ಫಲಾನುಭವಿಗಳಿಗೆ ವಸತಿ ಸೌಲಭ್ಯ

25 ವರ್ಷಗಳ ಹಿಂದೆ ನಗರದ ರತ್ನಪುರಿ ರಸ್ತೆಯಲ್ಲಿ ಆಶ್ರಯ ಯೋಜನೆಯಡಿ ನಿವೇಶನಗಳನ್ನು ಗುರುತಿಸಿ, 786 ಫಲಾನುಭವಿಗಳನ್ನು ಆಯ್ಕೆ ಮಾಡಿ ಹಕ್ಕುಪತ್ರ ನೀಡಲಾಗಿತ್ತು. ಈ ಪೈಕಿ 106 ಮಂದಿ ಮಾತ್ರ ಮನೆಯಲ್ಲಿ ವಾಸವಿದ್ದು, ಮಿಕ್ಕವರು ಪಡೆದಿಲ್ಲ. ಹಲವು ಕಾರಣಗಳಿಂದ ಸಮಸ್ಯೆ ಪರಿಹಾರವಾಗದೇ ಉಳಿದಿದೆ. ನಾನು ಶಾಸಕನಾದ ಮೇಲೆ, ಫಲಾನುಭವಿಗಳು ತಮ್ಮ ಹಕ್ಕುಪತ್ರವನ್ನು ನಗರಸಭೆಗೆ ಸಲ್ಲಿಸಿದಲ್ಲಿ ಅದರ ಪರಿಶೀಲನೆಯ ನಂತರ ವಸತಿ ಸೌಲಭ್ಯ ಒದಗಿಸಲು ಸೂಚಿಸಲಾಗಿತ್ತು. ಅದಕ್ಕಾಗಿ ಒಂದು ತಿಂಗಳ ಕಾಲಾವಕಾಶವನ್ನೂ ನೀಡಲಾಗಿತ್ತು. ಆದರೆ 250 ಮಂದಿ ಮಾತ್ರ ಹಕ್ಕುಪತ್ರ ಸಲ್ಲಿಸಿದ್ದಾರೆ. ಹಾಗಾಗಿ, ಮತ್ತೆ ಒಂದು ತಿಂಗಳು ಕಾಲಾವಕಾಶವನ್ನು ಮುಂದುವರಿಸಲಾಗಿದ್ದು, ಕೂಡಲೇ ಹಕ್ಕುಪತ್ರ ಹೊಂದಿರುವವರು ನಗರಸಭೆಯನ್ನು ಸಂಪರ್ಕಿಸಿ, ತಮ್ಮ ಹಕ್ಕುಪತ್ರವನ್ನು ನೀಡಿ ವಸತಿ ಸೌಲಭ್ಯ ಪಡೆದುಕೊಳ್ಳಲು ಶಾಸಕ ಹರೀಶ್ ಗೌಡ ಕೋರಿದರು.

ಬಡ ಜನರ ಬವಣೆಗೆ ಪರಿಹಾರ ಒದಗಿಸಿದ ಸಮಾಧಾನ

ಶಾಸಕನಾಗಿ ಪ್ರಥಮ ಅಧಿವೇಶನದಲ್ಲೇ ನಾನು ಪ್ರಸ್ತಾಪಿಸಿದ ಮೊದಲ ಪ್ರಶ್ನೆಗೆ ಸರ್ಕಾರ ಶಾಶ್ವತ ಪರಿಹಾರ ನೀಡಿರುವುದು ನನಗೆ ಸಂತಸ ಮತ್ತು ಹೆಮ್ಮೆ ತಂದಿದೆ ಎಂದು ಹುಣಸೂರು ಶಾಸಕ ಜಿ.ಡಿ. ಹರೀಶ್ ಗೌಡ ಹೇಳಿದರು. ನನ್ನ ತಾಲೂಕು ಮತ್ತು ರಾಜ್ಯಾದ್ಯಂತ ಲಕ್ಷಾಂತರ ಬಡ, ಮಧ್ಯಮ ವರ್ಗದ ಜನರ ಬವಣೆಗೆ ಶಾಶ್ವತ ಪರಿಹಾರ ಒದಗಿಸಿದ ಸಮಾಧಾನ ನನ್ನದಾಗಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಅನಧಿಕೃತ ಬಡಾವಣೆಗಳಲ್ಲಿ ಬಿ ಖಾತೆ ನೀಡಲು ನಿರ್ಧಾರ ತೆಗೆದು ಕೊಂಡಿರುವ ಕುರಿತು ಮಾತನಾಡಿದ ಅವರು, 2023ರ ಸಾರ್ವತ್ರಿಕ ಚುನಾ ವಣೆಯ ವೇಳೆ ಹುಣಸೂರಿನಾದ್ಯಂತ ಮತಯಾಚಿಸುವ ವೇಳೆ ನನಗೆ ಈ ಸಮಸ್ಯೆ ಕುರಿತಾಗಿ ಮಾಹಿತಿ ದೊರಕಿತ್ತು. ಶಾಸಕನಾಗಿ ಆಯ್ಕೆಯಾದ ನಂತರ 2023ರ ಜುಲೈ 14ರಂದು ಪ್ರಥಮ ಅಧಿವೇಶನದಲ್ಲಿ ನಾನು ಮಾತನಾಡಿದ್ದೆ. ಆ ವೇಳೆ ಹುಣಸೂರಿನಲ್ಲಿ ಅನಧಿಕೃತ ಬಡಾವಣೆಗಳ ಸಂಖ್ಯೆ ಎಷ್ಟು ಮತ್ತು ನಮೂನೆ 3 ನೀಡುವಲ್ಲಿ ಕೈಗೊಂಡಿರುವ ಕ್ರಮಗಳ ಕುರಿತು ಸರ್ಕಾರವನ್ನು ಪ್ರಶ್ನಿಸಿದ್ದೆ. ಆ ಸಂದರ್ಭದಲ್ಲಿ ಅರ್ಧ ತಾಸಿಗೂ ಹೆಚ್ಚು ಕಾಲ ಅನಧಿಕೃತ ಬಡಾವಣೆಗಳ ಪರಿಸ್ಥಿತಿ ಕುರಿತು ಅಧಿವೇಶನದಲ್ಲಿ ಚರ್ಚೆ ನಡೆದಿತ್ತು. ಸದನದಲ್ಲಿ ಪಕ್ಷಾತೀತವಾಗಿ ಹಿರಿಯ ಸದಸ್ಯರೂ ನನ್ನನ್ನು ಬೆಂಬಲಿಸಿ ಮಾತನಾಡಿದ್ದರು ಎಂದು ಸ್ಮರಿಸಿದರು. ಪೌರಾಡಳಿತ ಸಚಿವ ರಹೀಂಖಾನ್ ಅವರು ಈ ಕುರಿತು ಪರಿಶೀಲಿಸುವುದಾಗಿ ಭರವಸೆ ನೀಡಿದ್ದರು. ಅನಧಿಕೃತ ಬಡಾವಣೆಗಳ ಕುರಿತು ವಿವಿಧ ಸರ್ಕಾರಗಳಲ್ಲಿ ಈವರೆಗೆ ಒಟ್ಟು 17 ಬಾರಿ ನಿರ್ಣಯಗಳನ್ನು ಕೈಗೊಂಡಿದ್ದರೂ ಯಾವುದೂ ಜಾರಿಗೆ ಬಂದಿರಲಿಲ್ಲ. ಮತ್ತೆ 2023ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ಆಯೋಜನೆ ಗೊಂಡಿದ್ದ ಅಧಿವೇಶನದಲ್ಲಿ ಈ ಕುರಿತು ಸದನದ ಉಪಸಮಿತಿಯನ್ನು ನೇಮಿಸಿ, ಸಮಿತಿ ವರದಿ ಬಂದ ನಂತರ ಕ್ರಮ ವಹಿಸುವುದಾಗಿ ಸಚಿವರು ತಿಳಿಸಿದ್ದರು. ಅದರಂತೆ, ಸಚಿವರಾದ ಈಶ್ವರ ಖಂಡ್ರೆ, ಎಚ್.ಕೆ.ಪಾಟೀಲ್, ಕೃಷ್ಣ ಬೈರೇಗೌಡ, ಬೈರತಿ ಸುರೇಶ್ ಅವರನ್ನೊಳಗೊಂಡ ಸಮಿತಿ ಸಲ್ಲಿಸಿದ ವರದಿಯನ್ವಯ ಇದೀಗ ಸರ್ಕಾರದ ನಿರ್ಧಾರ ಹೊರಬಿದ್ದಿದೆ ಎಂದರು.

ಬಾಚಹಳ್ಳಿ ರಸ್ತೆಯಲ್ಲಿ 1200 ಮನೆಗಳು

ಹುಣಸೂರಿನ ಬಾಚಹಳ್ಳಿ ರಸ್ತೆಯಲ್ಲಿ ನಗರಸಭೆ 14 ಎಕರೆ ಭೂಮಿಯನ್ನು ಖರೀದಿಸಿ, ನಿವೇಶನ ಅಥವಾ ಜಿ ಪ್ಲಸ್ 2 ಯೋಜನೆ ಯಡಿ ವಸತಿ ಸಂಕೀರ್ಣ ನಿರ್ಮಿಸಲು ಉದ್ದೇಶಿಸಿತ್ತು. ಈ ಕುರಿತು ಹಿಂದೆ ಶಾಸಕರಾಗಿದ್ದ ಎಚ್.ವಿಶ್ವನಾಥ್ ಅವರು 1200 ಮಂದಿ ಫಲಾನುಭವಿಗಳ ಪಟ್ಟಿ ಯನ್ನೂ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿ ದ್ದರು. ಆದರೆ ಅವರ ಅಧಿಕಾರಾವಧಿ ಪೂರ್ಣಗೊಂಡ ನಂತರ ಫಾಲೋಅಪ್ ಆಗದೇ ಯೋಜನೆ ನನೆಗುದಿಗೆ ಬಿದ್ದಿತ್ತು. ಇದೀಗ ನಾನು ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರೊಡನೆ ಈ ಕುರಿತು ಚರ್ಚಿಸಿದ್ದು, ಕಾಲಾವಕಾಶ ಕೋರಿದ್ದಾರೆ. ಈ ಯೋಜನೆ ಜಾರಿಗೆ ಕ್ರಮ ವಹಿಸಲಿದ್ದೇನೆ ಎಂದು ಶಾಸಕ ಜಿ.ಡಿ. ಹರೀಶ್ ಗೌಡ ಹೇಳಿದರು. ನಗರಸಭಾಧ್ಯಕ್ಷ ಎಸ್.ಶರವಣ, ಜೆಡಿಎಸ್ ಮುಖಂಡ ಹರವೆ ಶ್ರೀಧರ್ ಇದ್ದರು.

ಬಿ ಖಾತೆ ನೀಡುವ ಕುರಿತು ರಾಜ್ಯ ಸರ್ಕಾರ ನಿರ್ಧರಿಸಿರುವುದು ಸ್ವಾಗತಾರ್ಹ. ಅದರಲ್ಲೂ ಸಮಸ್ಯೆಯನ್ನು ನಮ್ಮ ಶಾಸಕ ಜಿ.ಡಿ. ಹರೀಶ್ ಗೌಡ ಅಧಿವೇಶನದಲ್ಲಿ ಸಮರ್ಥವಾಗಿ ಮಂಡಿಸಿ ಇಡೀ ರಾಜ್ಯಾದ್ಯಂತ ಬಡ, ಮಧ್ಯಮವರ್ಗದ ಕುಟುಂಬಗಳಿಗೆ ಸಂತಸ ತಂದಿದ್ದಾರೆ. ಸೂಕ್ಷ್ಮ ಸಮುದಾಯದ ನನ್ನನ್ನು ನಗರಸಭೆ ಅಧ್ಯಕ್ಷರಾಗಿ ಆಯ್ಕೆ ಮಾಡುವ ಮೂಲಕ ಸಾಮಾಜಿಕ ನ್ಯಾಯ ನೀಡುವಲ್ಲಿ ಮೊದಲಿಗರಾಗಿದ್ದಾರೆ. ಅವರಿಗೆ ನಗರದ ಜನತೆಯ ಪರವಾಗಿ ನನ್ನ ಅಭಿನಂದನೆಗಳು

◀ ಎಸ್. ಶರವಣ
ಅಧ್ಯಕ್ಷ, ಹುಣಸೂರು ನಗರಸಭೆ

ಮೊದಲ ಬಾರಿ ಶಾಸಕರಾಗಿ ಪ್ರಥಮ ಅಧಿವೇಶನದಲ್ಲೇ ಸಮಸ್ಯೆ ಕುರಿತಾಗಿ ಸದನದಲ್ಲಿ ಅತ್ಯುತ್ತಮವಾಗಿ ವಿಚಾರ ಮಂಡಿಸಿ ಸರ್ಕಾರದಿಂದ ಶಾಶ್ವತ ಪರಿಹಾರ ದೊರಕಿಸಿಕೊಡುವಲ್ಲಿ ಹರೀಶ್‌ಗೌಡ ಅವರು ಯಶಸ್ವಿಯಾಗಿದ್ದಾರೆ. ಇದು ಅವರ ಜನಪರ ಕಾರ್ಯಕ್ಕೆ ಮತ್ತೊಂದು ಉದಾಹರಣೆ. ನಮ್ಮೆಲ್ಲರ ನೆಚ್ಚಿನ ನಾಯಕ, ಶಾಸಕ ಜಿ.ಡಿ. ಹರೀಶ್‌ಗೌಡ ಅವರಿಗೆ ಅಭಿನಂದನೆಗಳು.

◀ ಹರವೆ ಶ್ರೀಧರ್
ಜೆಡಿಎಸ್ ಮುಖಂಡರು, ಹುಣಸೂರು

ಅನುವಾದ ಕಾರ್ಯಾಗಾರ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಸಹಯೋಗದಲ್ಲಿ ಜೈನ್ ಡೀಮ್ಡ್ ವಿಶ್ವವಿದ್ಯಾಲಯದ ದೂರ ಮತ್ತು ಆನ್‌ಲೈನ್ ಕಲಿಕಾ ಶಿಕ್ಷಣ ಕೇಂದ್ರವು ಇದೇ ಶನಿವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ಮಾತೃಭಾಷಾ ದಿವಸ್ ಆಚರಣೆ ಮತ್ತು ಅನುವಾದ ಕಾರ್ಯಾಗಾರ ಹಮ್ಮಿಕೊಂಡಿದೆ.

ಜೆ.ಪಿ.ನಗರದ ಆರನೇ ಹಂತದಲ್ಲಿರುವ ಜೈನ್ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಈ ಕಾರ್ಯಾಗಾರ ನಡೆಯಲಿದೆ. ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ ಅವರು ಕಾರ್ಯಾಗಾರ ಉದ್ಘಾಟಿಸುತ್ತಾರೆ. ಕೆ.ಎಸ್. ನರಸಿಂಹಸ್ವಾಮಿ ಅವರ ಆಯ್ದ ಕನ್ನಡ ಕವನಗಳನ್ನು ವಿವಿಧ ಭಾಷೆಗೆ ಅನುವಾದಿಸುವ ಕಾರ್ಯಾಗಾರ ಇದಾಗಿದೆ. ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನವನ್ನೂ ಕಾರ್ಯಾಗಾರದಲ್ಲಿ ನೀಡಲಾಗುತ್ತದೆ. ಅನುವಾದಿತ ಕವನಗಳ ಸಂಕಲನವನ್ನು ಪುಸ್ತಕ ರೂಪವಾಗಿ ಪ್ರಕಟಿಸಲಾಗುತ್ತದೆ.

ಅನುವಾದದಲ್ಲಿ ಆಸಕ್ತಿ ಹೊಂದಿರುವವರು ಈ ಉಚಿತ ಕಾರ್ಯಾಗಾರದಲ್ಲಿ ಭಾಗವಹಿಸಬಹುದಾಗಿದೆ. ಆನ್‌ಲೈನ್ ಮೂಲಕ ಭಾಗವಹಿಸುವವರು ಟ್ರಸ್ಟ್ ಸದಸ್ಯೆ ಮೇಖಲಾ ವೆಂಕಟೇಶ್ 94490 50384 ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

‘ಜವಾಹರ್ ಬಾಲ ಮಂಚ್’ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷ ಆರಂಭಿಸಿರುವ ಜವಾಹರ್ ಬಾಲ ಮಂಚ್ ಘಟಕದ ಸಭೆಯು ಕೆ.ಆರ್. ಪುರದ ಕೇಂಬ್ರಿಜ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ (ಫೆ. 22) ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಸಚಿವರು ಸೇರಿದಂತೆ ಪಕ್ಷದ ಪ್ರಮುಖ ನಾಯಕರು ಭಾಗವಹಿಸಲಿದ್ದಾರೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘ರಜೆ ಸಂದರ್ಭದಲ್ಲಿ 7ರಿಂದ 18 ವರ್ಷದ ವರೆಗಿನ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕ ಕಾರ್ಯಕ್ರಮಗಳನ್ನು ಆಯೋಜಿಸುವುದು ಈ ಘಟಕದ ಮುಖ್ಯ ಉದ್ದೇಶ. ಬೂತ್ ಹಾಗೂ ವಾರ್ಡ್ ಮಟ್ಟದಲ್ಲಿ ಈ ಘಟಕವನ್ನು ರಚಿಸಲಾಗುವುದು. ವಾರಾಂತ್ಯಗಳಲ್ಲಿ ಮಕ್ಕಳಿಗೆ ತರಬೇತಿ ನೀಡಲಾಗುವುದು. ಶಾಲೆ ಬಿಟ್ಟಿರುವ ಮಕ್ಕಳನ್ನು ಮತ್ತೆ ಶಾಲೆಗೆ ಕರೆತರಲು ಪ್ರಯತ್ನಿಸಲಾಗುವುದು’ ಎಂದು ಅವರು ತಿಳಿಸಿದರು.

ಸಿ.ಎಂ ಸಭೆ ನಂತರ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಮಾರಾಟಗಾರರ ಸಂಘಗಳ ಪದಾಧಿಕಾರಿಗಳ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ನಡೆಸಿದ ಬಜೆಟ್‌ಪೂರ್ವಭಾವಿ ಸಭೆಯ ನಂತರ, ಪದಾಧಿಕಾರಿಗಳು ಪರಸ್ಪರ ಜಗಳವಾಡಿಕೊಂಡಿದ್ದಾರೆ.

ಮದ್ಯ ಮಾರಾಟಗಾರರರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಸಂಘಗಳ ಅಧಿಕಾರಿಗಳು ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ವಿಧಾನಸೌಧದಲ್ಲಿ ನಡೆದ ಸಭೆಯ ಮುಂದೆ ಇರಿಸಿದರು. ಅವುಗಳನ್ನು ಪರಿಶೀಲಿಸಿ, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು.

ಆನಂತರ ಸಿದ್ದರಾಮಯ್ಯ ಅವರು ಸಭೆಯಿಂದ ಹೊರಟರು. ಅವರಿಗೆ ಅಭಿನಂದನೆ ಹೇಳಿದ ಪದಾಧಿಕಾರಿಗಳು, ಅಲ್ಲಿಯೇ ಕೂಗಾಡಲು ಆರಂಭಿಸಿದರು. ಮಾತನಾಡಲು ತಮಗೆ ಅವಕಾಶ ನೀಡಲಿಲ್ಲ ಎಂದು ಕೆಲ ಸಂಘಗಳ ಮುಖ್ಯಸ್ಥರು ಜೋರು ದನಿಯಲ್ಲಿ ಕೂಗಿದರು. ಪರಸ್ಪರ ಏಕವಚನದಲ್ಲಿ ಬೈದುಕೊಂಡರು. ಒಮ್ಮೆಗೇ ಹೊಡೆದಾಟಕ್ಕೆ ಮುನ್ನುಗ್ಗಿದ ಅವರನ್ನು ಇತರರು ತಡೆದರು. ತಕ್ಷಣವೇ ಮಧ್ಯ ಪ್ರವೇಶಿಸಿದ ಪೊಲೀಸರು, ಅವರನ್ನು ಸಮಾಧಾನಪಡಿಸಿ ಕಳುಹಿಸಿದರು.

51 ಮಂದಿಗೆ ವಂಚನೆ ● ಆರೋಪಿಗಳ ಖಾತೆಗೆ ₹2.64 ಕೋಟಿ ವರ್ಗಾವಣೆ, ₹66 ಲಕ್ಷ ನಗದು ಜಪ್ತಿ

ವೀಸಾ ಹೆಸರಿನಲ್ಲಿ ವಂಚನೆ: ದಂಪತಿ ಬಂಧನ

ಪ್ರಜಾವಾಣಿ ವಾರ್ತೆ

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ನಗದು

ಸಕ್ಲೇನ್

ನಿಖಾತ್

ಬೆಂಗಳೂರು: ವೀಸಾ ಮಾಡಿಸಿಕೊಡುವುದಾಗಿ ಹಲವರನ್ನು ನಂಬಿಸಿ, ಅವರಿಂದ ಹಣ ಪಡೆದು ವಂಚಿಸಿದ್ದ ದಂಪತಿಯನ್ನು ಆಗ್ನೇಯ ವಿಭಾಗದ ಸೈಬರ್ ಅಪರಾಧ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸಕ್ಲೇನ್ ಸುಲ್ತಾನ್ ಹಾಗೂ ನಿಖಾತ್ ಸುಲ್ತಾನ್ ಬಂಧಿತರು.

ಪ್ರಕರಣದ ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದು, ಕಾರ್ಯಾಚರಣೆ ನಡೆಸಲಾಗುತ್ತಿದೆ. ಬಂಧಿತರಿಂದ ಎರಡು ಕಾರು, ಎರಡು ಬೈಕ್, 24 ಗ್ರಾಂ ಚಿನ್ನಾಭರಣ ಹಾಗೂ ₹66 ಲಕ್ಷ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಶುಕ್ರವಾರ ತಿಳಿಸಿದರು.

'51 ಮಂದಿಯನ್ನು ನಂಬಿಸಿ, ಅವರಿಂದ ₹2.64 ಕೋಟಿಯನ್ನು ತಮ್ಮ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡಿದ್ದರು. ವಂಚನೆ ಹಣದಿಂದ ಕಾರು ಹಾಗೂ ಬೈಕ್‌ಗಳನ್ನು ಖರೀದಿಸಿದ್ದರು. ₹50 ಲಕ್ಷ ನೀಡಿ ಭೋಗ್ಯಕ್ಕೆ ಮನೆ ಪಡೆದುಕೊಂಡಿದ್ದರು. ವಂಚನೆಯಿಂದ ಬಂದ ಹಣದಿಂದಲೇ ಶ್ರೀಲಂಕಾ, ದುಬೈ, ಗೋವಾ ಹಾಗೂ ಊಟಿಗೆ ಪ್ರವಾಸಕ್ಕೆ ತೆರಳುತ್ತಿದ್ದರು. ಅಲ್ಲಿ ವಿಲಾಸಿ ಜೀವನ ನಡೆಸುತ್ತಿದ್ದರು' ಎಂದು ಮಾಹಿತಿ ನೀಡಿದರು.

'ಬೆಂಗಳೂರಿನ ರೇಸ್ ಕೋರ್ಸ್‌ನಲ್ಲಿ ಆರೋಪಿ ನಿಖಾತ್ ಸುಲ್ತಾನ್ ಕುದುರೆ ಸವಾರಿ ಕಲಿಯುತ್ತಿದ್ದರು. ಆಗ ವಿದೇಶಿ ಮೂಲದ ಜಾಕಿಯ ಪರಿಚಯವಾಗಿತ್ತು. ವಿದೇಶಗಳಲ್ಲಿ ಕುದುರೆ ಜಾಕಿ ಮತ್ತು ಇತರ ಕೆಲಸ ನಿರ್ವಹಿಸಲು ಆಸಕ್ತಿ ಹೊಂದಿರುವ ವ್ಯಕ್ತಿಗಳಿಗೆ ವೀಸಾ ಮಾಡಿಸಿ ಕೊಡುತ್ತೇವೆ. ಆಸಕ್ತರನ್ನು ಪರಿಚಯಿಸಿದರೆ ಒಂದು ವೀಸಾಗೆ ₹50 ಸಾವಿರ ಕಮಿಷನ್ ನೀಡುವುದಾಗಿ ಹೇಳಿದ್ದ. ವಿದೇಶಿ ಜಾಕಿಯ ಮಾತನ್ನು ಒಪ್ಪಿದ್ದ ದಂಪತಿ, ವಿದೇಶಗಳಲ್ಲಿ ಕುದುರೆ ಜಾಕಿ ಆಗಲು ಬಯಸುವವರಿಗೆ ವೀಸಾ ಮಾಡಿಸಿಕೊಡುವುದಾಗಿ ಫೇಸ್‌ಬುಕ್ ನಲ್ಲಿ ಜಾಹೀರಾತು ನೀಡಿದ್ದರು. ಜಾಹೀರಾತು ಗಮನಿಸಿದ್ದ ವ್ಯಕ್ತಿಯೊಬ್ಬರು ಆರೋಪಿಗಳನ್ನು ಸಂಪರ್ಕಿಸಿದ್ದರು. ಆರಂಭದಲ್ಲಿ ಅವರಿಗೆ ಎರಡು ವೀಸಾ ಮಾಡಿಸಿಕೊಟ್ಟು ನಂಬಿಕೆ ಗಳಿಸಿದ್ದರು. ನಂತರ, ಒಟ್ಟು 51 ಜನರಿಗೆ ವೀಸಾ ಮಾಡಿಸಿಕೊಡುವುದಾಗಿ ನಂಬಿಸಿ ಒಟ್ಟು ₹2.64 ಕೋಟಿ ಪಡೆದುಕೊಂಡಿದ್ದರು' ಎಂದು ಮಾಹಿತಿ ನೀಡಿದರು.

'ವೀಸಾ ಕೇಳಿದಾಗ ನಕಲಿ ದಾಖಲೆಗಳನ್ನು ಆರೋಪಿಗಳು ನೀಡುತ್ತಿದ್ದರು. ಆರೋಪಿಗಳು ನೀಡಿದ ದಾಖಲೆಗಳು ನಕಲಿ ಎಂದು ತಿಳಿದ ವ್ಯಕ್ತಿಯೊಬ್ಬರು ಜ. 24ರಂದು ದೂರು ನೀಡಿದ್ದರು. ಆ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಮಾದಕ ದ್ರವ್ಯ ನಿಗ್ರಹ ದಳದಿಂದ ₹64 ಲಕ್ಷ ಮೌಲ್ಯದ ಡ್ರಗ್ಸ್ ವಶ

ಬೆಂಗಳೂರು: ಡ್ರಗ್ ಪೆಡ್ಲರ್‌ಗಳ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರು, ₹64.45 ಲಕ್ಷ ಮೌಲ್ಯದ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ಬೇಗೂರು ಪೊಲೀಸ್ ಠಾಣಾ ವ್ಯಾಪ್ತಿಯ ಬೇಗೂರು ಕೆರೆಯ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಆತನಿಂದ ₹1.20 ಲಕ್ಷ ಮೌಲ್ಯದ 3 ಕೆ.ಜಿ. ಗಾಂಜಾ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಸಿಸಿಬಿ ಪೊಲೀಸರು ತಿಳಿಸಿದರು.

ವಿಶಾಖಪಟ್ಟಣದಿಂದ ಆರೋಪಿಯು ನಗರಕ್ಕೆ ಗಾಂಜಾ ತರುತ್ತಿದ್ದ. ನಗರದಲ್ಲಿ ಗ್ರಾಹಕರಿಗೆ ಮಾರಾಟ ಮಾಡಿ ಹಣ ಗಳಿಸುತ್ತಿದ್ದ ಎಂದು ಮಾಹಿತಿ ನೀಡಿದರು.

ಎಂಡಿಎಂಎ ಕ್ರಿಸ್ಟಲ್ ವಶ: ಡಿ.ಜೆ.ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಶಾಂಪುರದ ಕಾವೇರಿ ನಗರದಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಹೊರ ರಾಜ್ಯದ ಡ್ರಗ್ಸ್ ಪೆಡ್ಲರ್‌ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ 522 ಗ್ರಾಂ ಎಂಡಿಎಂಎ ಹಾಗೂ ಎರಡು ಮೊಬೈಲ್ ವಶಕ್ಕೆ ಪಡೆದುಕೊಂಡಿದ್ದಾರೆ.

ಬೆಳ್ಳಂದೂರು ಪೊಲೀಸ್ ಠಾಣಾ ವ್ಯಾಪ್ತಿಯ ಹಿಪ್ಪಲೂರಿನ ಇಂದಿರಾ ಕ್ಯಾಂಟೀನ್ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಬಂಧಿಸಲಾಗಿದೆ.

ಬಂಧಿತನಿಂದ 3 ಕೆ.ಜಿ. ಗಾಂಜಾ ಹಾಗೂ ಒಂದು ಮೊಬೈಲ್ ಜಪ್ತಿ ಮಾಡಲಾಗಿದೆ. ಬಿಹಾರದಿಂದ ಕಡಿಮೆ ಬೆಲೆಗೆ ಗಾಂಜಾವನ್ನು ತಂದು ನಗರದ ಪರಿಚಯಸ್ಥ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದ. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ₹2.50 ಲಕ್ಷ ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

ಕೋರಮಂಗಲ ಹಾಗೂ ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇ–ಸಿಗರೇಟು ಮಾರಾಟ ಮಾಡುತ್ತಿದ್ದ ಅಂಗಡಿಗಳ ಮೇಲೆ ದಾಳಿ ನಡೆಸಿ, ₹5.50 ಲಕ್ಷ ಮೌಲ್ಯದ ಇ–ಸಿಗರೇಟು ಜಪ್ತಿ ಮಾಡಲಾಗಿದೆ ಎಂದು ತಿಳಿಸಿದರು.

ಇ–ಸಿಗರೇಟು ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ನಾಲ್ವರನ್ನು ಬಂಧಿಸಲಾಗಿದೆ.

ಮೊಬೈಲ್ ಕಸಿಯಲು ಯತ್ನಿಸಿದಾಗ ಪ್ರತಿರೋಧ: ವ್ಯಕ್ತಿ ಕೊಲೆ

ಅಪರಾಧ ಸುದ್ದಿ

ಬೆಂಗಳೂರು: ಕೆಂಪೇಗೌಡ ಬಸ್ ನಿಲ್ದಾಣದ ಬಳಿ ಮಲಗಿದ್ದ ವ್ಯಕ್ತಿಯ ಮೊಬೈಲ್ ಕಸಿಯಲು ಯತ್ನಿಸಿ, ಪ್ರತಿರೋಧ ತೋರಿದ್ದಕ್ಕೆ ಚೂರಿಯಿಂದ ಇರಿದು ಇಬ್ಬರು ಆರೋಪಿಗಳು ಕೊಲೆ ಮಾಡಿದ್ದಾರೆ.

ಕಾಮಾಕ್ಷಿಪಾಳ್ಯದ ಚಂದ್ರು (45) ಮೃತರು. ಮೈಸೂರಿನ ಚಂದ್ರು ಕಾಮಾಕ್ಷಿಪಾಳ್ಯದ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದರು. 2 ದಿನಗಳಿಂದ ಕೆಲಸಕ್ಕೆ ಹೋಗಿರಲಿಲ್ಲ. ಗುರುವಾರ ಮಧ್ಯಾಹ್ನ ಮದ್ಯ ಸೇವಿಸಿ ಬಸ್ ನಿಲ್ದಾಣದ ಬಳಿ ಮಲಗಿದ್ದರು. ಅಲ್ಲಿಗೆ ಬಂದಿದ್ದ ದರೋಡೆಕೋರರು, ಚಂದ್ರು ಬಳಿ ಜೇಬಿನಲ್ಲಿದ್ದ ಮೊಬೈಲ್ ಕಸಿಯಲು ಯತ್ನಿಸಿದ್ದರು. ಚಂದ್ರು ಪ್ರತಿರೋಧ ತೋರಿದ್ದರು. ಆಕ್ರೋಶಗೊಂಡ ದರೋಡೆಕೋರರು ಚೂರಿಯಿಂದ ಚಂದ್ರು ಅವರ ಎದೆ, ಹೊಟ್ಟೆಗೆ ಇರಿದು ಕೊಲೆ ಮಾಡಿದ್ದಾರೆ ಎನ್ನಲಾಗಿದೆ.

ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಗಿದೆ. ತಲೆಮರೆಸಿಕೊಂಡಿರುವ ಆರೋಪಿಗಳಿಗೆ ಶೋಧ ನಡೆದಿದೆ. ಕೃತ್ಯ ನಡೆದ ಸ್ಥಳದ ಸುತ್ತಮುತ್ತ ಇದ್ದ ಸಿ.ಸಿ.ಟಿ.ವಿ. ಕ್ಯಾಮೆರಾಗಳ ದೃಶ್ಯ ಪರಿಶೀಲಿಸಲಾಗಿದೆ ಎಂದು ಪೊಲೀಸರು ಹೇಳಿದರು. ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತನಿಖೆ: ಡಿಸಿಪಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಚಾರಣೆಗಾಗಿ ಕರೆತಂದ ಗರ್ಭಿಣಿಯನ್ನು ಅವಧಿ ಮೀರಿ ಕೆಂಪಾಪುರ ಠಾಣೆಯಲ್ಲಿ ಇರಿಸಿಕೊಂಡ ಆರೋಪಕ್ಕೆ ಸಂಬಂಧಿಸಿದಂತೆ ಇಲಾಖಾ ತನಿಖೆ ಕೈಗೊಂಡು ವರದಿ ನೀಡುವಂತೆ ಕೇಂದ್ರ ವಿಭಾಗದ ಡಿಸಿಪಿ ಹಾಗೂ ಎಸಿಪಿಗೆ ಸೂಚಿಸಲಾಗಿದೆ ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ತಿಳಿಸಿದ್ದಾರೆ.

'ಗುರುವಾರ ಕೆ.ಸಿ. ಜನರಲ್ ಆಸ್ಪತ್ರೆಗೆ ಇಂಜೆಕ್ಷನ್ ಪಡೆದುಕೊಳ್ಳಲು ಪತಿಯೊಂದಿಗೆ ಮಹಿಳೆಯೊಬ್ಬರು ಬಂದಿದ್ದರು. ಆಧಾರ್ ಕಾರ್ಡ್ ಪರಿಶೀಲನೆ ವೇಳೆ 18 ವರ್ಷ 1 ತಿಂಗಳು ಮತ್ತು 20 ದಿನ ಎಂಬುದು ಗೊತ್ತಾಯಿತು. ಆಕೆ 4 ತಿಂಗಳ ಗರ್ಭಿಣಿಯಾಗಿರುವುದರ ಕುರಿತು ಆಸ್ಪತ್ರೆ ಸಿಬ್ಬಂದಿ ಕೂಡಲೇ ಕೆಂಪಾಪುರ ಠಾಣೆಗೆ ಮಾಹಿತಿ ನೀಡಿದ್ದರು. ಮಧ್ಯಾಹ್ನ 2 ಗಂಟೆ ಸುಮಾರಿಗೆ ಮಹಿಳೆ ಮತ್ತು ಆಕೆಯ ಪತಿಯನ್ನು ಠಾಣೆಗೆ ಕರೆತಂದ ಪೊಲೀಸರು, ರಾತ್ರಿ 10 ಗಂಟೆವರೆಗೆ ಠಾಣೆಯಲ್ಲಿಯೇ ಇರಿಸಿಕೊಂಡಿದ್ದರು' ಎಂಬ ಆರೋಪ ಕೇಳಿಬಂದಿತ್ತು.

ವಿಕಾಸ್ ಕುಮಾರ್ ಮಾತನಾಡಿ, '18 ವರ್ಷ ತುಂಬುವ ಮುನ್ನವೇ ಗರ್ಭಿಣಿ ಆಗಿರುವುದರ ಕುರಿತು ಕೆ.ಸಿ. ಜನರಲ್ ಆಸ್ಪತ್ರೆಯಿಂದ ವರದಿ ಬಂದಿತ್ತು. ಈ ಕುರಿತು ವಿಚಾರಣೆಗಾಗಿ ಮಹಿಳೆಯನ್ನು ಠಾಣೆಗೆ ಕರೆಸಲಾಗಿತ್ತು. ಇಬ್ಬರೂ ಮದುವೆಯಾಗಿ ಒಟ್ಟಿಗೆ ವಾಸವಿದ್ದಾರೆ. ಈ ಕುರಿತು ಯಾರೂ ದೂರು ನೀಡಿಲ್ಲ. ಠಾಣೆಯಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

'ಗರ್ಭಿಣಿಯನ್ನು ಅವಧಿ ಮೀರಿ ಪೊಲೀಸ್ ಠಾಣೆಯಲ್ಲಿ ಇರಿಸಿಕೊಂಡ ಬಗ್ಗೆ ಆಂತರಿಕ ತನಿಖೆ ಕೈಗೊಂಡು, ವರದಿ ನೀಡುವಂತೆ ಸೂಚಿಸಲಾಗಿದೆ' ಎಂದು ಅವರು ತಿಳಿಸಿದರು.

₹25,000 ಲಂಚ: ಇಬ್ಬರ ಬಂಧನ

ಬೆಂಗಳೂರು: ಜಾತಿ ದೃಢೀಕರಣಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ನೀಡುವುದಕ್ಕಾಗಿ ₹25,000 ಲಂಚ ಪಡೆಯುವ ವೇಳೆ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ವ್ಯಕ್ತಿಯೊಬ್ಬರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ದೇವರಬೀಸನಹಳ್ಳಿ ನಿವಾಸಿ ಲೋಕೇಶ್ ಪಿ. ಎಂಬುವವರು ಕೊಳಗೇರಿ ಮಂಡಳಿಯಿಂದ ಮನೆಗಾಗಿ ಅರ್ಜಿ ಸಲ್ಲಿಸಿದ್ದರು. ಅದಕ್ಕೆ ಬೇಕಿದ್ದ ಕೆಲವು ದಾಖಲಾತಿಗಳಿಗಾಗಿ ಡಿಸಿಆರ್‌ಇಯಲ್ಲಿ ಅರ್ಜಿ ಹಾಕಿದ್ದರು. ಸಂಬಂಧಿತ ದಾಖಲೆಗಳನ್ನು ನೀಡಲು ನಿರ್ದೇಶನಾಲಯದ ಪೊಲೀಸ್ ಇನ್‌ಸ್ಪೆಕ್ಟರ್ ಗೀತಾ ಅವರು ₹25,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

ಈ ಸಂಬಂಧ ಲೋಕೇಶ್ ಅವರು ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ದೂರುದಾರರು ಶುಕ್ರವಾರ ಡಿಸಿಆರ್‌ಇ ಕಚೇರಿ ಬಳಿ ಗೀತಾ ಅವರ ಸಹಾಯಕ ರಿಚರ್ಡ್ ಬೈಬೇರಿಯೊ ಅವರಿಗೆ ₹15,000 ನಗದು ನೀಡಿದ್ದರು ಮತ್ತು ಫೋನ್‌ಪೇ ಮೂಲಕ ₹10,000 ವರ್ಗಾವಣೆ ಮಾಡಿದ್ದರು ಎಂದು ತಿಳಿಸಿದ್ದಾರೆ.

ಅದೇ ವೇಳೆ, ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು. ಲಂಚದ ಹಣವನ್ನು ವಶಕ್ಕೆ ಪಡೆಯಲಾಗಿದ್ದು, ತನಿಖೆ ಮುಂದುವರೆದಿದೆ ಎಂದಿದ್ದಾರೆ.

10 ಜನರಿಗೆ ಹುಚ್ಚುನಾಯಿ ಕಡಿತ

ಪೆರೇಸಂದ್ರ (ಚಿಕ್ಕಬಳ್ಳಾಪುರ): ತಾಲ್ಲೂಕಿನ ಪೆರೇಸಂದ್ರದಲ್ಲಿ ಹುಚ್ಚು ನಾಯಿಯೊಂದು ಗ್ರಾಮಸ್ಥರ ಮೇಲೆ ದಾಳಿ ನಡೆಸಿದ್ದು, 10ಕ್ಕೂ ಹೆಚ್ಚು ಜನರಿಗೆ ಕಚ್ಚಿದೆ. ಗ್ರಾಮಸ್ಥರು ತೀವ್ರ ಆತಂಕಗೊಂಡಿದ್ದಾರೆ. ಗ್ರಾಮ ಪಂಚಾಯಿತಿ ನಾಯಿ ಹಿಡಿಸಲು ಕ್ರಮವಹಿಸಿದೆ.

ಸಾಮೂಹಿಕ ಅತ್ಯಾಚಾರ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಿಲು ಮುಚ್ಚಿದ್ದ ಹೋಟೆಲ್ ಕಟ್ಟಡದ ಮಹಡಿಗೆ ಕರೆದೊಯ್ದು 32 ವರ್ಷದ ವಿವಾಹಿತ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಗಿದೆ.

ಪಶ್ಚಿಮ ಬಂಗಾಳ ಹಾಗೂ ಉತ್ತರ ಪ್ರದೇಶದ ಅಜಿತ್, ವಿಶ್ವಾಸ್, ಶಿವು ಸೇರಿದಂತೆ ನಾಲ್ವರು ಆರೋಪಿಗಳನ್ನು ಕೋರಮಂಗಲ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ದೆಹಲಿ ಮೂಲದ ಸಂತ್ರಸ್ತೆ ನಗರದ ವ್ಯಕ್ತಿಯೊಬ್ಬರನ್ನು ಮದುವೆಯಾಗಿ ಕೋರಮಂಗಲದ ಬಡಾವಣೆಯೊಂದರಲ್ಲಿ ನೆಲಸಿದ್ದರು. ಇವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಯೊಂದರ ಸ್ವಾಗತ ಕೋರುವ ವಿಭಾಗದಲ್ಲಿ ಸಂತ್ರಸ್ತೆ ಕೆಲಸ ಮಾಡುತ್ತಿದ್ದರು.

ಆರೋಪಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಪ್ರಕರಣದ ಕುರಿತು ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ತಿಳಿಸಿದರು.

'ಗುರುವಾರ ತಡರಾತ್ರಿ ಮಹಿಳೆ ಕೋರಮಂಗಲ ವ್ಯಾಪ್ತಿಯ ರಸ್ತೆಯೊಂದರಲ್ಲಿ ನಡೆದು ಹೋಗುತ್ತಿದ್ದರು. ಆಗ ಬಂದಿದ್ದ ಆರೋಪಿಗಳು, ಪರಿಚಯಸ್ಥರ ರೀತಿ ಮಾತನಾಡಿದ್ದರು. ಬಳಿಕ ಅದೇ ಮಾರ್ಗದಲ್ಲಿದ್ದ ಹೋಟೆಲ್‌ವೊಂದರ ಕಟ್ಟಡದ ಮಹಡಿಗೆ ಮಹಿಳೆಯನ್ನು ಕರೆದೊಯ್ದು ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಶುಕ್ರವಾರ ಬೆಳಿಗ್ಗೆ 5 ಗಂಟೆ ಸುಮಾರಿಗೆ ಸಂತ್ರಸ್ತೆ ಬಳಿಯಿದ್ದ ಮೊಬೈಲ್, ಪರ್ಸ್ ಕಸಿದುಕೊಂಡು ಕಳುಹಿಸಿದ್ದಾರೆ. ಅಲ್ಲಿಂದ ಸ್ವಲ್ಪ ದೂರಕ್ಕೆ ಬಂದು ಸಂತ್ರಸ್ತೆ, ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಘಟನೆ ಕುರಿತು ಮಾಹಿತಿ ನೀಡಿದ್ದರು. ತಕ್ಷಣವೇ ಸ್ಥಳಕ್ಕೆ ತೆರಳಿ ಮಹಿಳೆಯನ್ನು ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ಬೆಳಿಗ್ಗೆ ಮಾಹಿತಿ ತಿಳಿದ ತಕ್ಷಣವೇ ಮೂರು ವಿಶೇಷ ತಂಡ ರಚಿಸಿ ತನಿಖೆ ಆರಂಭಿಸಲಾಯಿತು. ಸಂತ್ರಸ್ತೆಯಿಂದ ದೂರು ಪಡೆದು ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಘಟನೆ ನಡೆದ ಕೆಲವೇ ತಾಸಿನಲ್ಲಿ ಆರೋಪಿಗಳನ್ನೂ ಬಂಧಿಸಲಾಗಿದೆ. ಸ್ನೇಹಿತೆಯನ್ನು ಮಾತನಾಡಿಸಲು ತೆರಳುತ್ತಿದ್ದಾಗ ಆರೋಪಿಗಳು ಮಹಿಳೆಯನ್ನು ಕರೆದೊಯ್ದು ಕೃತ್ಯ ಎಸಗಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಸಾರಾ ತಿಳಿಸಿದರು.

ಲಕ್ಷ್ಮೀನಾರಾಯಣ ನಾಗವಾರಗೆ ನುಡಿನಮನ ನಾಳೆ

ಬೆಂಗಳೂರು: ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ ಇದೇ ಭಾನುವಾರ ಬೆಳಿಗ್ಗೆ 11ಕ್ಕೆ ಶಿವಾನಂದ ವೃತ್ತದ ಬಳಿಯಿರುವ ಗಾಂಧಿ ಭವನದ ಬಾಪೂ ಸಭಾಂಗಣದಲ್ಲಿ ಲಕ್ಷ್ಮೀನಾರಾಯಣ ನಾಗವಾರ ಅವರಿಗೆ ನುಡಿನಮನ ಕಾರ್ಯಕ್ರಮ ಹಮ್ಮಿಕೊಂಡಿದೆ.

ಲಕ್ಷ್ಮೀನಾರಾಯಣ ನಾಗವಾರ ವಿದ್ಯಾರ್ಥಿ ದೆಸೆಯಿಂದಲೇ ದಲಿತರ ಹಕ್ಕುಗಳ ಬಗ್ಗೆ ಧ್ವನಿಎತ್ತುತ್ತಿದ್ದರು. ದಸಂಸದ ವಿವಿಧ ಹಂತಗಳಲ್ಲಿ ಕೆಲಸ ಮಾಡಿದ್ದರು. ಡಿ.31ರಂದು ನಿಧನರಾದರು.

ಕಾರ್ಯಕ್ರಮದಲ್ಲಿ ಅವರ ಕುಟುಂಬಸ್ಥರು, ಆಪ್ತರು, ಒಡನಾಡಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಒಕ್ಕೂಟ ಪ್ರಕಟಣೆಯಲ್ಲಿ ತಿಳಿಸಿದೆ.

ಮಯೂರ, ಸುಧಾ ಓದಿರಿ

ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ

(ಷೆಡ್ಯೂಲ್: 'ಎ' ಮಿನಿರತ್ನ ಕೆಟಗರಿ–1 ಸಾರ್ವಜನಿಕ ಕ್ಷೇತ್ರ ಉದ್ದಿಮೆ)
ರಾಜೀವ್‌ಗಾಂಧಿ ಭವನ, ಸಫ್ದರಜಂಗ್ ವಿಮಾನ ನಿಲ್ದಾಣ, ನವದೆಹಲಿ–110003

ಜಾಹೀರಾತು ಸಂ. 1/2025/ಸಿಎಚ್‌ಕ್ಯೂ ಅಡಿಯಲ್ಲಿ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದಲ್ಲಿನ ವಿವಿಧ ವಿಭಾಗಗಳಲ್ಲಿ ಕಿರಿಯ ಪ್ರತಿನಿಧಿಗಳ ನೇಮಕಾತಿ

ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಇವರು ಕೆಳಕಂಡ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ತಮ್ಮ www.aai.aero ವೆಬ್‌ಸೈಟ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಲು ಆಹ್ವಾನಿಸಿದ್ದಾರೆ.

(ಇನ್ನಿತರ ಯಾವುದೇ ವಿಧಾನದಲ್ಲಿ ಸಲ್ಲಿಸಲಾಗುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಹುದ್ದೆ ಸಂಕೇತ	ಹುದ್ದೆ ಹೆಸರು	ಖಾಲಿ ಹುದ್ದೆಗಳ ಸಂಖ್ಯೆ ಮತ್ತು ಮೀಸಲಾತಿ									
		ಒಟ್ಟು	ಯುಆರ್	ಇಡಬ್ಲ್ಯುಎಸ್	ಒಬಿಸಿ (ಎನ್‌ಸಿಎಲ್)	ಎಸ್‌ಸಿ	ಎಸ್‌ಟಿ	(ಸೇರ್ಪಡೆಗೊಂಡಿರುವ ಖಾಲಿ ಹುದ್ದೆಗಳು) ಪಿಡಬ್ಲ್ಯುಬಿಡಿ (ಎ)	(ಬಿ)	(ಸಿ)	(ಡಿ&ಇ)
01	ಜೂನಿಯರ್ ಎಕ್ಸಿಕ್ಯೂಟಿವ್ (ಫೈರ್ ಸರ್ವೀಸಸ್)	13	05	01	04	02	01	00	00	00	00
02	ಜ್ಯೂನಿಯರ್ ಎಕ್ಸಿಕ್ಯೂಟಿವ್ (ಮಾನವ ಸಂಪನ್ಮೂಲ)	66	30	06	17	09	04	01	00	00	01
03	ಜೂನಿಯರ್ ಎಕ್ಸಿಕ್ಯೂಟಿವ್ (ಅಧಿಕೃತ ಭಾಷೆ)	04	04	00	00	00	00	01	00	00	00

ಸದರಿ ಖಾಲಿ ಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿದ್ದು, ಪ್ರಾಧಿಕಾರದ ಸಂಪೂರ್ಣ ವಿವೇಚನೆಯ ಮೇರೆಗೆ ಇದು ಹೆಚ್ಚು ಅಥವಾ ಕಡಿಮೆ ಆಗಬಹುದಾಗಿರುತ್ತದೆ.

ಬಳಸಲಾಗಿರುವ ಸಂಕ್ಷಿಪ್ತ ಪದಗಳು:
ಯುಆರ್=ಮೀಸಲುರಹಿತ, ಇಡಬ್ಲ್ಯುಎಸ್=ಆರ್ಥಿಕ ದುರ್ಬಲ ವರ್ಗ, ಒಬಿಸಿ (ಎನ್‌ಸಿಎಲ್) = ಇತರೆ ಹಿಂದುಳಿದ ವರ್ಗಗಳು (ಕೆನೆಪದರ–ರಹಿತ), ಎಸ್‌ಸಿ=ಪರಿಶಿಷ್ಟ ಜಾತಿ, ಎಸ್‌ಟಿ=ಪರಿಶಿಷ್ಟ ಪಂಗಡ, ಪಿಡಬ್ಲ್ಯುಬಿಡಿ=ನಿಗದಿತ ವೈಕಲ್ಯತೆಯುಳ್ಳ ವ್ಯಕ್ತಿ, ಪಿಬಿಡಬ್ಲ್ಯುಡಿ ಕೆಟಗರಿ (ಎ), (ಬಿ), (ಸಿ), (ಡಿ) & (ಇ) : ವಿವರವಾದ ಜಾಹೀರಾತಿನಲ್ಲಿ ಸಂಬಂಧಿತ ಹುದ್ದೆ ಸಂಕೇತದ ಎದುರಿನಲ್ಲಿ ನೀಡಲಾಗಿರುವ ನಿಗದಿತ ವೈಕಲ್ಯತೆಗಳಲ್ಲಿನ ಸೂಕ್ತ ಪ್ರವರ್ಗವನ್ನು ಪರಿಶೀಲಿಸಿ

ಸಮಯಸೂಚಿ	ದಿನಾಂಕ
ಆನ್‌ಲೈನ್ ಅರ್ಜಿಗಳ ಆರಂಭಿಕ ದಿನಾಂಕ	17.02.2025
ಆನ್‌ಲೈನ್ ಅರ್ಜಿಗಳ ಕೊನೆಯ ದಿನಾಂಕ	18.03.2025
ಕಂಪ್ಯೂಟರ್ ಆಧಾರಿತ ಪರೀಕ್ಷೆಯ ಸಂಭಾವ್ಯ ದಿನಾಂಕ	ಪ್ರಾಧಿಕಾರದ www.aai.aero ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಪ್ರಾಧಿಕಾರದ www.aai.aero ವೆಬ್‌ಸೈಟ್‌ನಲ್ಲಿ ಕರಿಯರ್ಸ್ ಸೆಕ್ಷನ್ ಮತ್ತು ಎಂಪ್ಲಾಯ್‌ಮೆಂಟ್ ನ್ಯೂಸ್ / ರೋಜಗಾರ್ ಸಮಾಚಾರ್ ಪರಿಶೀಲಿಸಿ.

ಎನ್–04/2024–25 cbc03111/12/0004/2425 ಎಕ್ಸಿಕ್ಯೂಟಿವ್ ಡೈರೆಕ್ಟರ್ (ಎಚ್‌ಆರ್)

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಇ–ಟೆಂಡರ್ ಪ್ರಕಟಣೆ ಸಂ. ಬಿಇ–ಟಿವಿಎಲ್‌ಎಸಿ–ಪಿಸಿ–ಕಮಿನ್ಸ್–2025–2 ದಿನಾಂಕ : 15–02–2025

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಕಮಿನ್ಸ್ ತಯಾರಿಕೆಯ ಡಿಎ ಸೆಟ್‌ಗಳನ್ನು ಅಳವಡಿಸಿರುವ ಬೆಂಗಳೂರು ವಿಭಾಗದ ಪವರ್ ಕಾರ್‌ನ ಒಂದು ವರ್ಷದ ಅವಧಿಗೆ ಇಓಜಿ / ಹೆಚ್‌ಓಜಿ ವಿಧಾನದಲ್ಲಿ ಸಮಗ್ರ ನಿರ್ವಹಣೆ, ಎಸ್ಕಾರ್ಟಿಂಗ್ ಮತ್ತು ಕಾರ್ಯಾಚರಣೆ.	ರೂ. 7,24,42,607.25

ಇ–ಟೆಂಡರ್ ಪ್ರಕಟಣೆ ಸಂ. ಬಿಇ–ಟಿವಿಎಲ್‌ಎಸಿ–ಪಿಸಿ–ಗ್ರೀವ್ಸ್–2025–2 ದಿನಾಂಕ : 15–02–2025

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಗ್ರೀವ್ಸ್ ತಯಾರಿಕೆಯ ಡಿಎ ಸೆಟ್‌ಗಳನ್ನು ಅಳವಡಿಸಿರುವ ಬೆಂಗಳೂರು ವಿಭಾಗದ ಪವರ್ ಕಾರ್‌ನ ಒಂದು ವರ್ಷದ ಅವಧಿಗೆ ಇಓಜಿ / ಹೆಚ್‌ಓಜಿ ವಿಧಾನದಲ್ಲಿ ಸಮಗ್ರ ನಿರ್ವಹಣೆ, ಎಸ್ಕಾರ್ಟಿಂಗ್ ಮತ್ತು ಕಾರ್ಯಾಚರಣೆ.	ರೂ. 4,06,80,376.46

ಇ–ಟೆಂಡರ್ ಪ್ರಕಟಣೆ ಸಂ. ಬಿಇ–ಟಿವಿಎಲ್‌ಎಸಿ–ಪಿಸಿ–ಕೆಓಇಎಲ್–2025–2 ದಿನಾಂಕ : 15–02–2025

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಕಿರ್ಲೋಸ್ಕರ್ (ಕೆಓಇಎಲ್) ತಯಾರಿಕೆಯ ಡಿಎ ಸೆಟ್‌ಗಳನ್ನು ಅಳವಡಿಸಿರುವ ಬೆಂಗಳೂರು ವಿಭಾಗದ ಪವರ್ ಕಾರ್‌ನ ಒಂದು ವರ್ಷದ ಅವಧಿಗೆ ಇಓಜಿ / ಹೆಚ್‌ಓಜಿ ವಿಧಾನದಲ್ಲಿ ಸಮಗ್ರ ನಿರ್ವಹಣೆ, ಎಸ್ಕಾರ್ಟಿಂಗ್ ಮತ್ತು ಕಾರ್ಯಾಚರಣೆ.	ರೂ. 1,20,30,084.81

ಟೆಂಡರ್ ಮುಕ್ತಾಯದ ದಿನಾಂಕ ಮತ್ತು ಸಮಯ : 08–03–2025 ರಂದು 13:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್

ಪಿಯುಬಿ/806/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25 ಬೆಂಗಳೂರು

South Western Railway - SWR SWRRLY SWRRLY

ದೆಹಲಿ ವಿಶ್ವವಿದ್ಯಾಲಯ

ಜಾಹೀರಾತು ಸಂ. ಆರ್&ಪಿ/311/2024 ದಿನಾಂಕ: 12.12.2024

ವಿವಿಧ ಬೋಧಕೇತರ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ನಿರ್ದಿಷ್ಟ ನಮೂನೆಯ ಅರ್ಜಿಯಲ್ಲಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಜಾಹೀರಾತು ಎಂಪ್ಲಾಯ್‌ಮೆಂಟ್ ನ್ಯೂಸ್‌ನಲ್ಲಿ ಪ್ರಕಟಗೊಂಡ ದಿನಾಂಕದಿಂದ ಎರಡು ವಾರಗಳೊಳಗೆ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕವಾಗಿರುತ್ತದೆ. ವಿವರಗಳಿಗಾಗಿ ದಯವಿಟ್ಟು ವಿಶ್ವವಿದ್ಯಾಲಯದ www.du.ac.in, ವೆಬ್‌ಸೈಟ್‌ಗೆ ಭೇಟಿ ಕೊಡಿ ಮತ್ತು "ಅಡ್ವರ್ಟೈಸ್‌ಮೆಂಟ್–ಡಿಪಾರ್ಟಮೆಂಟ್ಸ್" ಶೀರ್ಷಿಕೆ ಅಡಿಯಲ್ಲಿ "ವರ್ಕ್ ವಿದ್ ಡಿಯು" ಕ್ಲಿಕ್ ಮಾಡಿರಿ.

ಯಾವುದೇ ತಿದ್ದುಪಡಿ/ಮಾರ್ಪಾಡು ಉಂಟಾದಲ್ಲಿ, ಅಂತಹುದನ್ನು ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

cbc21231/12/0021/2425 ರಿಜಿಸ್ಟ್ರಾರ್

ನಗರಸಭಾ ಕಾರ್ಯಾಲಯ, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ

Email:itstaff_ulb_gouribidanur@yahoo.co.in, Website:www.gowribidanurtown.gov.in

ಸಂಖ್ಯೆ: ನಸಗೌ/ಆಶಾ/ಟೆಂಡರ್/ಸಿಆರ್–4/1/2024–25 ದಿನಾಂಕ:17.02.2025

ಟೆಂಡರ್ ಪ್ರಕಟಣೆ (ಮೂರನೇ ಕರೆ)

ಪೌರಾಯುಕ್ತರು, ನಗರಸಭೆ, ಗೌರಿಬಿದನೂರು ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಸಭಾ ನಿಧಿಯಲ್ಲಿ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಅರ್ಹ ದರ್ಜೆಯ ಸಂಘ ಸಂಸ್ಥೆಗಳಿಂದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಈ ವೆಬ್‌ಸೈಟ್ www.kppp.karnataka.gov.in ಮೂಲಕ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ www.gouribidanurcity.gov.in ನಲ್ಲಿ ಪರಿಶೀಲಿಸಬಹುದು. (1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.03.2025ರ ಸಂಜೆ 5.15 ಗಂಟೆಯವರೆಗೆ. (2) ಟೆಂಡರ್ ತೆರೆಯುವ ದಿನಾಂಕ: 07.03.2025ರ ಸಂಜೆ 5.20ಗಂಟೆಗೆ.

ಕ್ರ ಸಂ	ಕಾಮಗಾರಿ	ಅಂದಾಜು ಮೊತ್ತ (ಲಕ್ಷಗಳಲ್ಲಿ)
	ನಗರಸಭಾ ನಿಧಿ	
1	ಗೌರಿಬಿದನೂರು ನಗರ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂತಾನಹರಣ ಚಿಕಿತ್ಸೆ ಮಾಡುವುದು.	37.50

ಸಹಿ/– ಪೌರಾಯುಕ್ತರು ನಗರಸಭೆ, ಗೌರಿಬಿದನೂರು | ಸಹಿ/– ಅಧ್ಯಕ್ಷರು ನಗರಸಭೆ, ಗೌರಿಬಿದನೂರು | ಸಹಿ/– ಉಪಾಧ್ಯಕ್ಷರು ನಗರಸಭೆ, ಗೌರಿಬಿದನೂರು

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:390/ಕೆಎಸ್‌ಎಂಸಿಎ/2024–25

ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (ಸಿ–ಡಾಕ್)

ಟೆಕ್ನೋ–ಮ್ಯಾನೇಜರಿಯಲ್ ಲೀಡರ್‌ಗಳ ಶೋಧನೆಯಲ್ಲಿ

ಭಾರತ ಸರ್ಕಾರದ ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ (ಎಂಇಐಟಿವೈ) ಸಚಿವಾಲಯದ ಒಂದು ಪ್ರತಿಷ್ಠಿತ ವೈಜ್ಞಾನಿಕ ಸೊಸೈಟಿ ಆಗಿರುವ ಸಿ–ಡಾಕ್ ಸಂಸ್ಥೆಯು, ವಿವಿಧ ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದು, ಇದೀಗ ಈ ಸಂಸ್ಥೆಯು ಕೆಳಕಂಡ ಹುದ್ದೆಗಳಿಗಾಗಿ ಅರ್ಜಿ ಆಹ್ವಾನಿಸಿರುತ್ತದೆ.

ಎಕ್ಸಿಕ್ಯೂಟಿವ್ ಡೈರೆಕ್ಟರ್
ಹುದ್ದೆಗಳ ಸಂಖ್ಯೆ–03

ವೇತನ ಹತ – 14 (ರೂ. 144200–218200)
ಸ್ಥಳ: ಕೋಲ್ಕತ, ಮೊಹಾಲಿ ಮತ್ತು ತಿರುವನಂತಪುರಂ
(ನೇರ ನೇಮಕಾತಿ/ಟ್ರಾನ್ಸ್‌ಫರ್ (ಅಬ್ಸಾರ್ಪ್ಷನ್) ಇಲ್ಲವಾದಲ್ಲಿ ಡೆಪ್ಯುಟೇಶನ್ ಆಧಾರದ ಮೇರೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ)

ಸೈಂಟಿಸ್ಟ್ ಸಿ
ಹುದ್ದೆಗಳ ಸಂಖ್ಯೆ–10

ವೇತನ ಹಂತ – 11 (ರೂ. 67700–208700)
ಸ್ಥಳ: ಬೆಂಗಳೂರು, ಚೆನ್ನೈ, ಹೈದರಾಬಾದ್, ದೆಹಲಿ ಮತ್ತು ಪುಣೆ
(ನೇರ ನೇಮಕಾತಿ ವಿಧಾನದಲ್ಲಿ ಮಾತ್ರ ಅರ್ಜಿಗಳನ್ನು ಆಹ್ವಾನಿಸಲಾಗಿದೆ)

ಅರ್ಜಿ ಸಲ್ಲಿಸುವ ವಿಧಾನ: ಆಸಕ್ತಿಯುಳ್ಳ ಅಭ್ಯರ್ಥಿಗಳು www.cdac.in ವೆಬ್‌ಸೈಟ್‌ನಲ್ಲಿನ "ಕರಿಯರ್ಸ್" ಪುಟಕ್ಕೆ ಭೇಟಿ ನೀಡಿ ವಿವರವಾದ ಅಧಿಸೂಚನೆಯನ್ನು ಪರಿಶೀಲಿಸಬಹುದು.
ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಎಂಪ್ಲಾಯ್‌ಮೆಂಟ್ ನ್ಯೂಸ್‌ನಲ್ಲಿ ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 30ನೇ ದಿನ.
ಸೂಚನೆ: ಈ ಕುರಿತಾದ ಯಾವುದೇ ತಿದ್ದುಪಡಿ/ಹೆಚ್ಚಿನ ವಿವರಗಳು ಇದ್ದಲ್ಲಿ, ಅಂತಹವುಗಳನ್ನು ಸಿ–ಡಾಕ್ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಎಡಿವಿಟಿ.ನಂ.ಸಿಓಆರ್‌ಪಿ/ಜಿಆರ್‌ಪಿ.ಎ/06/2024 ನಿರ್ದೇಶಕರು ಹೆಚ್‌ಆರ್‌ಡಿ

ದೇಶದ ಪ್ರಗತಿಗಾಗಿ ಅತ್ಯಾಧುನಿಕ ತಂತ್ರಜ್ಞಾನ

cbc06132/12/0018/2425

ಯೂನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಲಿಮಿಟೆಡ್

(ಹಿಂದೆ ಯೂನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಪ್ರೈವೇಟ್ ಲಿಮಿಟೆಡ್)
538, 539, 542 & 543, ಪೀಣ್ಯ 4ನೇ ಹಂತದ ಕೈಗಾರಿಕಾ ಪ್ರದೇಶದ 7ನೇ ಮುಖ್ಯ ರಸ್ತೆ,
ಯಶವಂತಪುರ ಹೋಬಳಿ, ಬೆಂಗಳೂರು, ಬೆಂಗಳೂರು ಉತ್ತರ ತಾಲ್ಲೂಕು, ಕರ್ನಾಟಕ, ಭಾರತ, 560058
ISO 9001-2015 & AS 9100 Rev D ಪ್ರಮಾಣೀಕರಿಸಲಾಗಿದೆ
GSTIN: 29AABCU9719Q1ZC CIN: U30305KA2016PLC095712
investorrelations@unimechaerospace.com ದೂರವಾಣಿ: 080-42046782
www.unimechaerospace.com

ಅಂಚೆ ಮತದಾನದ ಸೂಚನೆ

ಈ ಸೂಚನೆಯನ್ನು ಕಂಪನಿಗಳ ಕಾಯ್ದೆ, 2013 ('ಕಾಯ್ದೆ') ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 22ರ ಸೆಕ್ಷನ್ 110ರ ನಿಬಂಧನೆಗಳು ಮತ್ತು ಇತರ ಅನ್ವಯವಾಗುವ ನಿಬಂಧನೆಗಳು ಯಾವುದಾದರೂ ಇದ್ದರೆ, ಅವುಗಳ ಅನುಸಾರವಾಗಿ ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 20/2020, 14/2020, 17/2020, 09/2023 ಮತ್ತು 09/2024 ದಿನಾಂಕಗಳು ಕ್ರಮವಾಗಿ 5 ಮೇ 2020, 8 ಏಪ್ರಿಲ್ 2020, 13 ಏಪ್ರಿಲ್ 2020, ಸೆಪ್ಟೆಂಬರ್ 25, 2023 ಮತ್ತು 19 ಸೆಪ್ಟೆಂಬರ್ 2024 ರಂದು ಕ್ರಮವಾಗಿ ಮತ್ತು ಕಾರ್ಪೊರೇಟ್ ಸಚಿವಾಲಯ ಹೊರಡಿಸಿದ ಇತರ ಸಂಬಂಧಿತ ಸುತ್ತೋಲೆಗಳು (ಇನ್ನು ಮುಂದೆ ಒಟ್ಟಾರೆಯಾಗಿ 'ಎಂಸಿಎ ಸುತ್ತೋಲೆಗಳು' ಎಂದು ಕರೆಯಲಾಗುತ್ತದೆ), ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾದ ನಿಯಮ 44 (ಬಾಧ್ಯತೆಗಳನ್ನು ಪಟ್ಟಿ ಮಾಡುವುದು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ತಿದ್ದುಪಡಿ ಮಾಡಲಾದ ನಿಯಮಗಳು, 2015 ('ಸೆಬಿ ಪಟ್ಟಿ ನಿಯಮಗಳು'), ಸೆಕ್ರೆಟೇರಿಯಲ್ ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿದ ಸಾಮಾನ್ಯ ಸಭೆಗಳ ಮಾನದಂಡ ('SS-2') ಮತ್ತು ಅನ್ವಯವಾಗುವ ಇತರ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ {ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಮರು–ಜಾರಿಗೊಳಿಸುವಿಕೆ(ಗಳು) ಸೇರಿದಂತೆ ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ}, ಈ ಸೂಚನೆಯಲ್ಲಿ ನಿಗದಿಪಡಿಸಿದ ನಿರ್ಣಯಗಳನ್ನು ಕಂಪನಿಯ ಸದಸ್ಯರು ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಮಾತ್ರ ಮತ ಚಲಾಯಿಸುವ ಮೂಲಕ ಅಂಚೆ ಮತಪತ್ರದ ಮೂಲಕ ಅಂಗೀಕರಿಸಲು ಪರಿಗಣಿಸಲು ಪ್ರಸ್ತಾಪಿಸಲಾಗಿದೆ.

ಕ್ರಮ ಸಂಖ್ಯೆ	ನಿರ್ಣಯಗಳ ವಿವರಣೆಗಳು	ನಿರ್ಣಯಗಳ ಪ್ರಕಾರ
1.	ನವೀಕರಿಸಲಾದ "ಯುನಿಮೆಕ್ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2024" ಅನ್ನು ಪರಿಗಣಿಸಲು ಮತ್ತು ಅನುಮೋದಿಸಲು	ವಿಶೇಷ
2.	"ಯುನಿಮೆಕ್ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2024" ಅಡಿಯಲ್ಲಿ ಕಂಪನಿಯ ಅಂಗ ಸಂಸ್ಥೆಗಳ ಅರ್ಹ ಉದ್ಯೋಗಿಗಳಿಗೆ ಉದ್ಯೋಗಿ ಸ್ಟಾಕ್ ಆಯ್ಕೆಗಳನ್ನು ನೀಡಲು	ವಿಶೇಷ

ಎಂಸಿಎ ಸುತ್ತೋಲೆಗಳ ಪ್ರಕಾರ, ಕಂಪನಿಯು ಫೆಬ್ರವರಿ 21, 2025ರ ಗುರುವಾರದಂದು ವಿವರಣಾತ್ಮಕ ಹೇಳಿಕೆಯೊಂದಿಗೆ ಅವರು ಶುಕ್ರವಾರ, ಫೆಬ್ರವರಿ 14, 2025ರಂತೆ ಕಂಪನಿಯಲ್ಲಿ ಅಥವಾ ಠೇವಣಿ ಭಾಗವಹಿಸುವವರೊಂದಿಗೆ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಂಡಿದ್ದಾರೆಯೊ ಅವರಿಗೆ ಅಂಚೆ ಮತಪತ್ರ ಸೂಚನೆಯ ಎಲೆಕ್ಟ್ರಾನಿಕ್ ಪ್ರತಿಗಳನ್ನು ಕಂಪನಿಯ ಎಲ್ಲಾ ಷೇರುದಾರರಿಗೆ ಕಳುಹಿಸಿದೆ,

ಈ ಸೂಚನೆಯು ಕಂಪನಿಯ ವೆಬ್‌ಸೈಟ್ www.unimechaerospace.com ನ ಅಂಚೆ ಮತಪತ್ರ ವಿಭಾಗದಲ್ಲಿ ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ಕಾರ್ಪೊರೇಟ್ ಪ್ರಕಟಣೆ ವಿಭಾಗದಲ್ಲಿ ಅಂದರೆ BSE and NSE ನಲ್ಲಿ ಲಭ್ಯವಿದೆ.

ಎಂಸಿಎ ಸುತ್ತೋಲೆಗಳ ಪ್ರಕಾರ, ಷೇರುದಾರರು ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ ಮೂಲಕ ಮಾತ್ರ ಮತ ಚಲಾಯಿಸಬಹುದು, ಕಟ್–ಆಫ್ ದಿನಾಂಕದಂದು ಅಂದರೆ ಫೆಬ್ರವರಿ 14, 2025 ರಂದು ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರು ಇರುವ ಷೇರುದಾರರನ್ನು ಇ–ವೋಟಿಂಗ್ ಉದ್ದೇಶಕ್ಕಾಗಿ ಪರಿಗಣಿಸಲಾಗುತ್ತದೆ ಮತ್ತು ಮತದಾನದ ಹಕ್ಕುಗಳನ್ನು ಆ ದಿನಾಂಕದಂದು ಷೇರುದಾರರ ಹೆಸರಿನಲ್ಲಿ ನೋಂದಾಯಿಸಲಾದ ಈಕ್ವಿಟಿ ಷೇರುಗಳ ಪಾವತಿಸಿದ ಮೌಲ್ಯದ ಮೇಲೆ ಲೆಕ್ಕಹಾಕಲಾಗುತ್ತದೆ. ಕಟ್–ಆಫ್ ದಿನಾಂಕದಂದು ಕಂಪನಿಯ ಸದಸ್ಯರಲ್ಲದ ವ್ಯಕ್ತಿಯು ಈ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು.

ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಅಥವಾ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಷೇರುದಾರರು ರಿಮೋಟ್ ಇ–ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸುವ ವಿಧಾನವನ್ನು ಒಳಗೊಂಡಂತೆ ಇ–ವೋಟಿಂಗ್ ಪ್ರಕ್ರಿಯೆಯ ಸೂಚನೆಗಳನ್ನು ಅಂಚೆ ಮತಪತ್ರ ಸೂಚನೆಯಲ್ಲಿ ನೀಡಲಾಗಿದೆ. ಎಲ್ಲಾ ಷೇರುದಾರರಿಗೆ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಲು ಕಂಪನಿಯು ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ನ ಸೇವೆಯನ್ನು ತೊಡಗಿಸಿಕೊಂಡಿದೆ. ಅಂಚೆ ಮತಪತ್ರ ಇ–ವೋಟಿಂಗ್‌ನ ವಿವರಗಳು ಈ ಕೆಳಗಿನಂತಿವೆ:

ವಿವರಗಳು	ವಿವರಗಳು
ಮತದಾನದ ಪ್ರಾರಂಭ ಸಮಯ ಮತ್ತು ದಿನಾಂಕ	ಬೆಳಿಗ್ಗೆ 9:00, ಸೋಮವಾರ, ಫೆಬ್ರವರಿ 24, 2025
ಮತದಾನದ ಅಂತ್ಯ ಸಮಯ ಮತ್ತು ದಿನಾಂಕ	ಸಂಜೆ 5:00 ಐಎಸ್‌ಟಿ, ಮಂಗಳವಾರ, 25 ಮಾರ್ಚ್ 2025
ಇ–ವೋಟಿಂಗ್ ಸೇವಾ ಪೂರೈಕೆದಾರರ ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು	ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಸೆಲೆನಿಯಮ್ ಟವರ್ ಬಿ, ಪ್ಲಾಟ್ 31–32, ಫೈನಾನ್ಶಿಯಲ್ ಜಿಲ್ಲೆ, ನಾನಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್ – 500 032 ಸಂಪರ್ಕ ವಿವರಗಳು: einward.ris@kfintech.com ಸಂಪರ್ಕ ಸಂಖ್ಯೆ: 1800-309-4001
ಪರಿಶೀಲಕರ ಹೆಸರು	ಶ್ರೀಮತಿ ಕಲ್ಯಾಣಿ ಎಸ್, ಪ್ರಾಕ್ಟೀಸಿಂಗ್ ಕಂಪನಿ ಕಾರ್ಯದರ್ಶಿ
ಮತದಾನದ ಫಲಿತಾಂಶಗಳ ಘೋಷಣೆಯ ದಿನಾಂಕ	ಗುರುವಾರ, 27 ಮಾರ್ಚ್ 2025 ರಂದು ಅಥವಾ ಅದಕ್ಕೂ ಮೊದಲು

ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಶುಕ್ರವಾರ, 25 ಮಾರ್ಚ್ 2025ರಂದು ಸಂಜೆ 5:00 ಗಂಟೆಯ ನಂತರ ಸಮಯಕ್ಕೆ ಸರಿಯಾಗಿ ಇ–ವೋಟಿಂಗ್ ಸೌಲಭ್ಯವನ್ನು ನಿಷ್ಕ್ರಿಯಗೊಳಿಸುತ್ತದೆ ಮತ್ತು ಹೇಳಿದ ದಿನಾಂಕ ಮತ್ತು ಸಮಯವನ್ನು ಮೀರಿ ಇ–ವೋಟಿಂಗ್ ಅನ್ನು ಅನುಮತಿಸಲಾಗುವುದಿಲ್ಲ.

ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಮೂಲಕ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮತದಾನ ಮಾಡುವ ಬಗ್ಗೆ ಯಾವುದೇ ಪ್ರಶ್ನೆ ಮತ್ತು/ಅಥವಾ ದೂರು ಇದ್ದಲ್ಲಿ, ಷೇರುದಾರರು ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ನ ವ್ಯವಸ್ಥಾಪಕ ಶ್ರೀ ಶ್ಯಾಮ್ ಕುಮಾರ್ ಅವರನ್ನು ಇಮೇಲ್ ಐಡಿ: einward.ris@kfintech.com ನಲ್ಲಿ ಸಂಪರ್ಕಿಸಬಹುದು.

ಯುನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಲಿಮಿಟೆಡ್ ಪರವಾಗಿ
ಸಹಿ/–
ಕ್ರಿಷ್ಣಪ್ಪಯ್ಯ ದೇಸಾಯಿ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : 21ನೇ ಫೆಬ್ರವರಿ 2025

ಕರ್ನಾಟಕ ಗೃಹ ಮಂಡಳಿ

ನ:ಕಗೃಮಂ/ಬೆಗ್ರಾಸಕ/ಕಾಅ/175/2024–2025 ದಿನಾಂಕ 03.02.2025

ಪತ್ರಿಕಾ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯಿಂದ ಮಾರ್ಕೆಟಿಂಗ್ ಸಹಭಾಗಿತ್ವದ ಯೋಜನೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ಇಲ್ಲಿನ ಬಡಾವಣೆಯಲ್ಲಿ ವಿವಿಧ ವರ್ಗದ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕ ಹಂಚಿಕೆ ಮಾಡಲಾಗಿದ್ದು ನಿವೇಶನ ಸಂಖ್ಯೆ: 506, ಈಡಬ್ಲ್ಯೂಎಸ್ **ಶ್ರೀಮತಿ ಲಲಿತಾ.ಆರ್.ಎಂ.** ಹಂಚಿಕೆಯಾಗಿದ್ದು ಸದರಿ ನಿವೇಶನದಾರರು ದಿನಾಂಕ: 24–09–2018ರಂದು ಮರಣ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನಿವೇಶನವನ್ನು ದಿವಂಗತರ ಮಗಳಾದ **ಶ್ರೀಮತಿ ಮಧುಕುಮಾರಿ. ಆರ್.ಎಂ.** ಹೆಸರಿಗೆ ವರ್ಗಾವಣೆ ಮಾಡಲು ಪರಿಗಣಿಸಿದ್ದು ಈ ಸಂಬಂಧ ಯಾವುದೇ ತಕರಾರು/ ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 15 ದಿನಗಳೊಳಗೆ ಸೂಕ್ತ ದಾಖಲಾತಿಗಳೊಂದಿಗೆ ತಕರಾರು ಅರ್ಜಿಯನ್ನು ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಗ್ರಾಮಾಂತರ ಸಮನ್ವಯ ಕಛೇರಿ, ಬೆಂಗಳೂರು ಇಲ್ಲಿಗೆ ಸಲ್ಲಿಸಬಹುದಾಗಿದೆ. ನಿಗದಿತ ದಿನಾಂಕದೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಸದರಿ ಸ್ವತ್ತನ್ನು ಮೃತರ ವಾರಸುದಾರರಾದ **ಶ್ರೀಮತಿ ಮಧುಕುಮಾರಿ ಆರ್.ಎಂ.** ರವರಿಗೆ ವರ್ಗಾವಣೆ ಮಾಡಿ ಕೊಡಲಾಗುವುದೆಂದು ಹಾಗೂ ನಂತರ ಬರುವ ಯಾವುದೇ ತಕರಾರು / ಮನವಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/–ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಗ್ರಾಮಾಂತರ ಸಮನ್ವಯ ಕಛೇರಿ ಬೆಂಗಳೂರು.

ಕೃಷಿ ಇಲಾಖೆ

ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯ, ರಾಮನಗರ ಜಿಲ್ಲೆ, ರಾಮನಗರ.
ದೂ. : 080–2727 6780, ಇಮೇಲ್ : jdarmgm@gmail.com

ಸಂಖ್ಯೆ : ಜ.ಕೃ.ನಿ./ರಾ.ನ./ಲೆಕ್ಕ–1/ಹೊ.ಗು.ಸಿ.ನೇ./2024–25 ದಿನಾಂಕ : 18–02–2025

ಟೆಂಡರ್ ಪ್ರಕಟಣೆ

2024–25 ನೇ ಸಾಲಿನಲ್ಲಿ ಜಂಟಿ ಕೃಷಿ ನಿರ್ದೇಶಕರು, ರಾಮನಗರ ಜಿಲ್ಲೆ ಕಛೇರಿ ವ್ಯಾಪ್ತಿಯ ಮಣ್ಣು ಆರೋಗ್ಯ ಕೇಂದ್ರದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ **ಕಾರ್ಯನಿರ್ವಹಿಸಲು ವಿಶ್ಲೇಷಕರು, ಸಹಾಯಕ ವಿಶ್ಲೇಷಕರು, ಕಂಪ್ಯೂಟರ್ ಆಪರೇಟರ್, ಅಟೆಂಡರ್ ಹಾಗೂ ಡಿ ಗ್ರೂಪ್ – ಒಟ್ಟು 06 ಸಂಖ್ಯೆಯ ಸಿಬ್ಬಂದಿಗಳ** ಸೇವೆ ಪಡೆಯಲು ನೋಂದಾಯಿತ ಸಂಸ್ಥೆಗಳ ಮೂಲಕ ದ್ವಿ–ಲಕೋಟೆ ಮಾದರಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವರು ಟೆಂಡರ್‌ಗೆ ಸಂಬಂಧಿಸಿದ ಸೇವೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವಿಳಾಸ : https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

ವಿವರ : 1) ಹುದ್ದೆಗಳ ವಿವರ : ವಿಶ್ಲೇಷಕರು – 02, ಸಹಾಯಕ ವಿಶ್ಲೇಷಕರು – 01, ಕಂಪ್ಯೂಟರ್ ಆಪರೇಟರ್ – 01, ಅಟೆಂಡರ್ – 01, ಡಿ ಗ್ರೂಪ್ – 01, ಒಟ್ಟು ಹುದ್ದೆಗಳು : 06.

ಟೆಂಡರ್ ಸಲ್ಲಿಸುವ ಅವಧಿ : 1) ಟೆಂಡರ್ ಮೊತ್ತ : 36,23,205/–, 2) ಇ.ಎಂ.ಡಿ. ಮೊತ್ತ : ರೂ. 90,585/–, 3) ಬಿಡ್ ಅಪ್‌ಲೋಡ್ ಪೋರ್ಟಲ್‌ನಲ್ಲಿ ತಿಳಿಸಿರುವ ದಿನಾಂಕದಿಂದ ಅನ್ವಯವಾಗಲಿದೆ, 4) ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ಪೋರ್ಟಲ್‌ನಲ್ಲಿ ನಿಗಧಿಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸುವುದು. **ಮೊಬೈಲ್ ಸಂಖ್ಯೆ : 79754 20638.**

ಸಹಿ/– ಜಂಟಿ ಕೃಷಿ ನಿರ್ದೇಶಕರು, ರಾಮನಗರ ಜಿಲ್ಲೆ, ರಾಮನಗರ.

ಡಿಐಪಿಆರ್/ರಾಮನಗರ/604/ಮಣಿಪಾಲ್/2024–25

ಹೆಸರಘಟ್ಟ: ದನಗಳ ಜಾತ್ರೆ ಪ್ರಾರಂಭ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಮಹಾಶಿವರಾತ್ರಿ ಪ್ರಯುಕ್ತ ತೋಟಗೆರೆ ಬಸವಣ್ಣ ದೇವಸ್ಥಾನ ಕ್ಷೇತ್ರದಲ್ಲಿ ದನಗಳ ಜಾತ್ರೆ ಪ್ರಾರಂಭವಾಗಿದ್ದು, ರೈತರು ರಾಸುಗಳನ್ನು ಮಾರಾಟಕ್ಕಾಗಿ ಕರೆತರುತ್ತಿದ್ದಾರೆ.

ನೆಲಮಂಗಲ, ಹೊಸಕೋಟೆ, ಮಾಗಡಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ತುಮಕೂರು ಮತ್ತು ದೇವನಹಳ್ಳಿ ಭಾಗಗಳಿಂದ ರೈತರು ರಾಸುಗಳನ್ನು ಮಾರಾಟಕ್ಕಾಗಿ ಕರೆತರುತ್ತಾರೆ.

ಶಿವರಾತ್ರಿ ಹಬ್ಬದ ಹೊತ್ತಿಗೆ ಪೂರ್ಣಪ್ರಮಾಣದಲ್ಲಿ ಜಾತ್ರೆ ಆರಂಭವಾಗಲಿದ್ದು, ದನಗಳ ಜಾತ್ರೆ ಸೇರುವ ಜಾಗದಲ್ಲಿ ರೈತರು ತಮ್ಮ ರಾಸುಗಳನ್ನು ಕಟ್ಟಲು ಮಣ್ಣನ್ನು ಸಮತಟ್ಟುಗೊಳಿಸಿ, ಪೆಂಡಾಲ್‌ಗಳನ್ನು ನಿರ್ಮಿಸಿಕೊಂಡು ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಲಕ್ಷಾಂತರ ರೂಪಾಯಿ ಮೌಲ್ಯದ ಜೋಡಿ ಹೋರಿಗಳನ್ನು ಹಾರ-ತುರಾಯಿಗಳಿಂದ ಅಲಂಕಾರ ಮಾಡಿ, ವಾದ್ಯ ಮೇಳಗಳೊಂದಿಗೆ ತೋಟಗೆರೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಬಸವಣ್ಣ ದೇವಸ್ಥಾನದವರೆಗೆ ಮೆರವಣಿಗೆ ಮಾಡಿ, ರೈತರು ಸಂಭ್ರಮಿಸುತ್ತಾರೆ. 'ಈ ವರ್ಷ ಉತ್ತಮ ಮಳೆಯಾಗಿದ್ದರಿಂದ ಸಾಕಷ್ಟು ಮೇವು ಸಂಗ್ರಹವಾಗಿದೆ.

ಜಾತ್ರೆಗೆ ರಾಸುಗಳ ಜೊತೆಗೆ ಬಂದಿರುವ ರೈತರು

ಜಾತ್ರೆಯಲ್ಲಿ ಹೆಚ್ಚು ಜಾನುವಾರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈಗಾಗಲೇ ವ್ಯಾಪಾರ-ವಹಿವಾಟು ನಡೆಯುತ್ತಿದ್ದು, ಶಿವರಾತ್ರಿ ಹಬ್ಬದವರೆಗೂ ರಾಸುಗಳ ಜಾತ್ರೆ ನಡೆಯುತ್ತದೆ' ಎಂದು ರೈತ ಕೆಂಪರಾಜು ತಿಳಿಸಿದರು.

ಬೆಂಗಳೂರು ರೇಸ್

'ಪರ್ಫೆಕ್ಟ್ ಆಟಿಟ್ಯೂಡ್' ಗೆಲ್ಲುವ ನಿರೀಕ್ಷೆ

ಬೆಂಗಳೂರು ಜುವೆನೈಲ್ ಮಿಲಿಯನ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪರ್ಫೆಕ್ಟ್ ಆಟಿಟ್ಯೂಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ2:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ

1ನೇ ರೇಸ್: ಎಲ್ಡೆಡನ್ 1, ಆನ್ಕೊರೇಜ್ 5, ಲೇಡಿ ಇನ್ವಿಕ್ಟಸ್ 4
2ನೇ ರೇಸ್: ಸೆಕ್‌ಮೆಟ್ 3, ಕಿಂಗ್ ಆಫ್ ವಾರ್ 1, ಸದರ್ನ್ ಫೋರ್ಸ್ 5
3ನೇ ರೇಸ್: ಲೆಜೆಂಡರಿ ಇಂಪ್ಯಾಕ್ಟ್ 11, ಪ್ರೊಫೆಸಿ 1, ಮಾರ್ಥ 3
4ನೇ ರೇಸ್: ವಿವಾಲ್ಡೊ 3, ಡಿ ವಿಲಿಯರ್ಸ್ 2, ಪ್ರೈಸ್‌ಲೆಸ್ ಗೋಲ್ಡ್ 1
5ನೇ ರೇಸ್: ಪರ್ಫೆಕ್ಟ್ ಆಟಿಟ್ಯೂಡ್ 6, ಏಸ್ ಆಫ್ ಫ್ಲೈರ್ 4, ಗ್ಲೋರಿಯಸ್‌ನೆಸ್ 3
6ನೇ ರೇಸ್: ರಾಫೆಲ್ಸ್ 5, ಪಿಂಕಿ ಪಿಂಕಿ 6, ಬೆನ್ಜಿಮಾ 3
7ನೇ ರೇಸ್: ಕೌಂಟ್ ಬೇಸಿ 8, ಲೇಡಿಲಯನ್ 6, ಮೆಹ್ರಾ 9

ಉತ್ತಮ ಬೆಟ್: ರಾಫೆಲ್ಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್:	2ನೇ ಟ್ರಿಬಲ್:
3,4,5,6,7;	2,3,4;	5,6,7

ಮೆಟ್ರೊ ದುಬಾರಿ: ಪ್ರಯಾಣಕ್ಕೆ ಪರ್ಯಾಯ ದಾರಿ

ಸಂಚಾರ ದಟ್ಟಣೆ ನಿಯಂತ್ರಣ ಹಾಗೂ ಪ್ರಯಾಣ ಸಮಯವನ್ನು ಉಳಿತಾಯ ಮಾಡುತ್ತಿದ್ದ ನಮ್ಮ ಮೆಟ್ರೊ ಪ್ರಯಾಣದರವನ್ನು ವಿಪರೀತವಾಗಿ ಏರಿಸಿ ಪ್ರಯಾಣಿಕರನ್ನು ಕಳೆದುಕೊಂಡಿದೆ. ಜನರು ಬಿಎಂಟಿಸಿ ಬಸ್, ಖಾಸಗಿ ವಾಹನಗಳಲ್ಲಿ ಸಂಚರಿಸುವ ಮೂಲಕ ಪರ್ಯಾಯ ದಾರಿ ಕಂಡುಕೊಂಡಿದ್ದಾರೆ. ಮೆಟ್ರೊ ಪ್ರಯಾಣದರ ಇಳಿಸುವ ಮೂಲಕ ಜನರು ಮೆಟ್ರೊಗೆ ಮರಳುವಂತೆ ಮಾಡಬೇಕು ಎಂಬುದು ಜನರ ಒತ್ತಾಯವಾಗಿದೆ.

ನಮ್ಮ ಮೆಟ್ರೊ ಜನಸಾಮಾನ್ಯರಿಗೆ ಹತ್ತಿರವಾಗಿತ್ತು. ಪ್ರಯಾಣದ ದರವನ್ನು ವಿಪರೀತವಾಗಿ ಹೆಚ್ಚಿಸಿ ನಮ್ಮನ್ನು 'ನಮ್ಮ ಮೆಟ್ರೊ'ದಿಂದ ದೂರ ಮಾಡಿದೆ. ಶಕ್ತಿ ಯೋಜನೆಯ ಮೂಲಕ ಕೆಎಸ್ಆರ್‌ಟಿಸಿ, ಬಿಎಂಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ ಇದೆ. ಆದರೂ ಸಮಯ ಉಳಿಸಲು ಮೆಟ್ರೊದಲ್ಲಿ ಪ್ರಯಾಣಿಸುತ್ತಿದ್ದೆ. ಪ್ರಯಾಣದರವನ್ನು ದುಬಾರಿ ಮಾಡಿದ ಮೇಲೆ ಮೆಟ್ರೊದಲ್ಲಿ ಸಂಚರಿಸುವುದನ್ನು ನಿಲ್ಲಿಸಿದ್ದೇನೆ. ದರ ಇಳಿಕೆ ಮಾಡಿ ನಿಜಾರ್ಥದಲ್ಲಿ 'ನಮ್ಮ' ಮೆಟ್ರೊ ಮಾಡಿದರೆ ಮಾತ್ರ ಮತ್ತೆ ಮೆಟ್ರೊದಲ್ಲಿ ಸಂಚಾರ ಮಾಡುತ್ತೇನೆ.

ಸುಧಾ ರಾ. ಶೆಟ್ಟಿ, ಗೃಹಿಣಿ, ಶ್ರೀನಗರ

ರಾಜಧಾನಿಯ ಸಂಚಾರದ ಜೀವನಾಡಿಯಾಗಿ ಪ್ರಯಾಣಿಕರಿಗೆ ನಮ್ಮ ಮೆಟ್ರೊ ಸಹಕಾರಿಯಾಗಿತ್ತು. ವಾಹನದಟ್ಟಣೆಯ ಕಿರಿಕಿರಿಯಿಂದ, ಸಮಯ ಹಾಗೂ ಮಾಲಿನ್ಯದಿಂದ ದೂರವಾಗಿ ನೆಮ್ಮದಿಯಿಂದ ಪ್ರಯಾಣಿಸುತ್ತಿದ್ದರು. ಈಗ ಪ್ರಯಾಣಿಕರ ಜೇಬಿಗೆ ಕತ್ತರಿ ಹಾಕಲು ಪ್ರಯಾಣ ದರವನ್ನು ದುಬಾರಿ ಮಾಡಲಾಗಿದೆ. ನಿತ್ಯ ಕಾಯಕ ಮಾಡುವ ಜನಸಾಮಾನ್ಯರು ಮೆಟ್ರೊದಲ್ಲಿ ಪ್ರಯಾಣಿಸದಂತಾಗಿದೆ. ಸಂಚಾರವು ಸಾರ್ವಜನಿಕ ಸೌಲಭ್ಯವಾಗಬೇಕೆ ಹೊರತು, ಹೊರೆಯಾಗಬಾರದು. ಅವೈಜ್ಞಾನಿಕ ಲೆಕ್ಕಾಚಾರವನ್ನು ಕೈಬಿಟ್ಟು ದರ ಕಡಿಮೆ ಮಾಡಬೇಕು.

ಸು.ಜಗದೀಶ, ಬನ್ನೇರುಘಟ್ಟ

ಜನರು ಮೆಟ್ರೊ ತೊರೆದು ತಮ್ಮ ಖಾಸಗಿ ವಾಹನಗಳನ್ನು ಬಳಸುತ್ತಿದ್ದಾರೆ. ಇದರಿಂದ ವಾಹನದಟ್ಟಣೆ ಅಧಿಕಗೊಂಡಿದೆ. ರಸ್ತೆಯಲ್ಲಿ ದೂಳು, ಹೊಗೆ ಹೆಚ್ಚಾಗಿದೆ. ಇದು ಅನಾರೋಗ್ಯಕ್ಕೆ ಕಾರಣವಾಗಲಿದೆ. ಸರ್ಕಾರಗಳು ಕೆಳಸೇತುವೆ, ಮೇಲುಸೇತುವೆ, ಸುರಂಗ ರಸ್ತೆ, ರಸ್ತೆ ವಿಸ್ತರಣೆ ಎಂದು ಖಾಸಗಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವ ಬದಲು ಮೆಟ್ರೊ ದರ ಇಳಿಸಿ ಅದನ್ನು ಪ್ರಯಾಣಿಕ ಸ್ನೇಹಿ ಮಾಡುವುದು ಒಳ್ಳೆಯದು.

ಡಾ. ಸುಧಾ ಕೆ.

ಏಕಾಏಕಿ ಮೆಟ್ರೊ ದರ ಏರಿಕೆ ಮಾಡಿ ಬಿಎಂಆರ್‌ಸಿಎಲ್ ಜನಸಾಮಾನ್ಯರಿಗೆ ತೊಂದರೆಯನ್ನು ಉಂಟುಮಾಡಿದೆ. ದರ ಕಡಿಮೆ ಮಾಡಲಾಗಿದೆ ಎಂದು ಹೇಳುತ್ತಿದ್ದರೂ ಇನ್ನೂ ದುಬಾರಿ ದರವೇ ಇದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೂಕ್ತ ದರ ನಿಗದಿ ಮಾಡಬೇಕು. ಎಲ್ಲ ವರ್ಗದ ಜನರು ಸಂಚರಿಸುವಂತೆ ಮಾಡಬೇಕು.

ಪ್ರಮೀಳಾ, ಕೆಎಸ್‌ಡಿಎಲ್

ನಮ್ಮಂತಹ ಸಾವಿರಾರು ವಿದ್ಯಾರ್ಥಿಗಳಿಗೆ, ಉದ್ಯೋಗಿಗಳಿಗೆ, ಇತ್ಯಾದಿ ವರ್ಗದ ಪ್ರಯಾಣಿಕರಿಗೆ 'ನಮ್ಮ ಮೆಟ್ರೊ'ದಿಂದಾಗಿ ಬೆಂಗಳೂರು ವಾಹನ ದಟ್ಟಣೆಯಿಂದ ಮುಕ್ತಿ ಸಿಕ್ಕಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪದೇ ಪದೇ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ಸಂಕಷ್ಟಕ್ಕೆ ದೂಡಿದ್ದವು. ಇದೀಗ ಮೆಟ್ರೊ ಪ್ರಯಾಣದರವನ್ನು ಕೂಡ ಹೆಚ್ಚಿಸಿ ಬರೆ ಎಳೆದಿವೆ. ಪ್ರಯಾಣಿಕರು ಮೆಟ್ರೊ ತ್ಯಜಿಸಿ, ಖಾಸಗಿ ವಾಹನಗಳನ್ನು ಬಳಸುವಂತೆ ಮಾಡಿದೆ.

ಲಕ್ಷ್ಮೀನಾರಾಯಣ ಕೆ., ವಿದ್ಯಾರ್ಥಿ, ವಿಜಯನಗರ

ಪ್ರಯಾಣ ದರವನ್ನು ಏರಿಸುವ ಮೂಲಕ ಇದು ನಿಮ್ಮದಲ್ಲ ಮೆಟ್ರೊ ನಮ್ಮ ಮೆಟ್ರೊ ಎಂದು ಪ್ರಯಾಣಿಕರಿಗೆ ಬಿಎಂಆರ್‌ಸಿಎಲ್ ಹೇಳಿದಂತಿದೆ. ದೈನಂದಿನ ವಸ್ತುಗಳ ಬೆಲೆ ಏರಿಕೆಯಿಂದ ಕಂಗೆಟ್ಟಿದ್ದ ಜನಸಾಮಾನ್ಯರನ್ನು ನಮ್ಮ ಮೆಟ್ರೊ ಇನ್ನಷ್ಟು ಸಂಕಷ್ಟಕ್ಕೆ ದೂಡಿದೆ. ಮೆಟ್ರೊ ಪ್ರಯಾಣ ಸಾಮಾನ್ಯ ಜನರಿಗಲ್ಲ ಎಂದು ನಿರೂಪಿಸಲು ಸರ್ಕಾರಗಳು ಹೊರಟಂತಿದೆ.

ಆಂಜನೇಯ, ದೀಪನಂಜಲಿ ನಗರ

ನಮ್ಮ ಮೆಟ್ರೊ ಈಗ ನಮ್ಮ ಹಿತ ಕಾಯುವ ಸಾರಿಗೆಯಾಗಿ ಉಳಿದಿಲ್ಲ. ಜನರ ನಂಬಿಕೆ ಕಳೆದುಕೊಂಡಿದೆ. ಏಕಾಏಕಿ ಪ್ರಯಾಣ ದರವನ್ನು ದುಬಾರಿ ಮಾಡುವ ಮೂಲಕ ಇಂತಹ ಟ್ರಾಫಿಕ್ ಸಮಸ್ಯೆಯಲ್ಲೂ ಆರಾಮಾಗಿ, ಕಡಿಮೆ ಖರ್ಚಿನಲ್ಲಿ ಪ್ರಯಾಣ ಮಾಡಿದೆವು ಎಂಬ ಸಂತೋಷವನ್ನು ಸಾರ್ವಜನಿಕರಿಂದ ಕಸಿದುಕೊಂಡಿದೆ. ಮುಂದಿನ ವರ್ಷಕ್ಕೆ ಹೊಸ ಮಾರ್ಗಗಳು ಸಂಚಾರ ಮುಕ್ತವಾಗಲಿವೆ ಎಂಬ ವಿಷಯ, ಪ್ರಯಾಣಿಕರಲ್ಲಿ ಯಾವ ಕುತೂಹಲವನ್ನೂ ಕೆರಳಿಸಿಲ್ಲ. ಯಾವ ಮಾರ್ಗದಲ್ಲಿ ಯಾವ ಮೆಟ್ರೊ ಸಂಚರಿಸಿದರೆ ನಮಗೇನು ಎನ್ನುವ ಅಭಿಪ್ರಾಯ ಮೂಡುವಂತೆ ಮಾಡಿದೆ.

ರಮ್ಯ ಕವೀಶ್, ರಾಜರಾಜೇಶ್ವರಿ ನಗರ

ಅಭಿಪ್ರಾಯ ಕಳುಹಿಸಿ

ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ.

ವಾಟ್ಸ್‌ಆ್ಯಪ್ ಸಂಖ್ಯೆ: 96060 38256

ಮೆಟ್ರೊ ಸಂಚಾರ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಡಬ್ಲ್ಯುಪಿಎಲ್ ಕ್ರಿಕೆಟ್ ನಡೆಯುವ ದಿನಗಳಲ್ಲಿ 'ನಮ್ಮ ಮೆಟ್ರೊ' ಸಂಚಾರ ಅವಧಿಯನ್ನು ರಾತ್ರಿ 25 ನಿಮಿಷ ವಿಸ್ತರಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ಫೆ. 22, 24, 25, 26, 27, 28 ಮತ್ತು ಮಾರ್ಚ್ 1ರಂದು ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಗಳು ನಡೆಯಲಿವೆ. ಅಂದು ರಾತ್ರಿ 11.20ಕ್ಕೆ ಮೆಟ್ರೊ ನೇರಳೆ ಮಾರ್ಗ ಮತ್ತು ಹಸಿರು ಮಾರ್ಗಗಳ ನಾಲ್ಕು ಟರ್ಮಿನಲ್‌ಗಳಿಂದ ಕೊನೆಯ ಮೆಟ್ರೊ ರೈಲುಗಳು ಹೊರಡಲಿವೆ. ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಿಂದ ನಾಲ್ಕು ಟರ್ಮಿನಲ್‌ಗಳ ಕಡೆಗೆ ರಾತ್ರಿ 11.55ಕ್ಕೆ ರೈಲುಗಳು ಹೊರಡಲಿವೆ.

ಸಾಮಾನ್ಯ ದಿನಗಳಲ್ಲಿ ಕೊನೆಯ ರೈಲುಗಳು ನಾಲ್ಕು ಟರ್ಮಿನಲ್‌ಗಳಿಂದ ರಾತ್ರಿ 11ಕ್ಕೆ ಹಾಗೂ ಮೆಜೆಸ್ಟಿಕ್‌ನಿಂದ ಟರ್ಮಿನಲ್‌ಗಳ ಕಡೆಗೆ ರಾತ್ರಿ 11.30ಕ್ಕೆ ಸಂಚರಿಸುತ್ತಿದ್ದವು. ಪ್ರಯಾಣಿಕರು ಕ್ಯೂಆರ್ ಟಿಕೆಟ್, ಸ್ಮಾರ್ಟ್ ಕಾರ್ಡ್, ರಾಷ್ಟ್ರೀಯ ಸಾಮಾನ್ಯ ಸಾರಿಗೆ ಕಾರ್ಡ್ (ಎನ್‌ಸಿಎಂಸಿ) ಮತ್ತು ಟೋಕನ್‌ಗಳನ್ನು ಬಳಸಿ ಪ್ರಯಾಣಿಸಬಹುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹಳ್ಳಿಕಾರ ಮಠ, ಶ್ರೀಕೃಷ್ಣ ದೇಗುಲದ ದ್ವಿತೀಯ ವಾರ್ಷಿಕೋತ್ಸವ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳ್ಳಿಕಾರ ಮಠ ಹಾಗೂ ಶ್ರೀಕೃಷ್ಣ ದೇವಾಲಯದ ದ್ವಿತೀಯ ವಾರ್ಷಿಕೋತ್ಸವ, ಮಠದ ಬಾಲಕೃಷ್ಣಾನಂದ ಸ್ವಾಮೀಜಿ ಅವರ ದ್ವಿತೀಯ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವವನ್ನು ಇದೇ ಭಾನುವಾರ ಬೆಳಿಗ್ಗೆ 11 ಗಂಟೆಗೆ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಶೆಟ್ಟಿಗೊಂಡನ ಹಳ್ಳಿಯಲ್ಲಿರುವ ಹಳ್ಳಿಕಾರ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಳ್ಳಿಕಾರ ಮಠ ಟ್ರಸ್ಟ್ ಅಧ್ಯಕ್ಷ ನಾಗಯ್ಯ, 'ಬೆಳಿಗ್ಗೆ 9 ಗಂಟೆಯಿಂದಲೇ ಗಣಪತಿ ಪೂಜೆ ಸೇರಿ ವಿವಿಧ ಧಾರ್ಮಿಕ ವಿಧಿವಿಧಾನಗಳು ನಡೆಯಲಿವೆ. ಈ ಕಾರ್ಯಕ್ರಮದಲ್ಲಿ ವಿಶ್ವ ಒಕ್ಕಲಿಗ ಮಠದ ನಿಶ್ಚಲಾನಂದ ಸ್ವಾಮೀಜಿ, ಕುಂಚಿಟಿಗ ಮಠದ ಹನುಮಂತನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುತ್ತಾರೆ. ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಕಾರ್ಯಕ್ರಮ ಉದ್ಘಾಟಿಸುತ್ತಾರೆ' ಎಂದು ಹೇಳಿದರು.

'ಬೆಳಿಗ್ಗೆ 8 ಗಂಟೆಗೆ ಹಳ್ಳಿಕಾರ ತಳಿಯ ಹೋರಿಗಳ ಮೆರವಣಿಗೆ ಹಾಗೂ ಪ್ರದರ್ಶನ ನಡೆಯಲಿದೆ. ಬಾಲಕೃಷ್ಣಾನಂದ ಸ್ವಾಮೀಜಿ ಅವರ ದ್ವಿತೀಯ ವಾರ್ಷಿಕ ಪಟ್ಟಾಭಿಷೇಕದ ಸವಿನೆನಪಿನಲ್ಲಿ ರೈತರಿಗೆ ತೆಂಗಿನ ಸಸಿಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ' ಎಂದರು.

ಟ್ರಸ್ಟ್‌ನ ಗೌರವಾಧ್ಯಕ್ಷರಾದ ಬಿ.ಎಂ. ಪಟೇಲ್‌ಪಾಂಡು, ದಯಾನಂದ, ಉಪಾಧ್ಯಕ್ಷ ಪುಟ್ಟೇಗೌಡ, ಕಾರ್ಯದರ್ಶಿ ರಾಜಣ್ಣ ಉಪಸ್ಥಿತರಿದ್ದರು.

ವೈದ್ಯರ ನಿರ್ಲಕ್ಷ್ಯ ಯುವಕ ಸಾವು

ಪ್ರಜಾವಾಣಿ ವಾರ್ತೆ

ನಾಗೇಂದ್ರ

ಕೋಲಾರ: ತಾಲ್ಲೂಕಿನ ವಕ್ಕಲೇರಿ ಗ್ರಾಮದ ಕ್ಲಿನಿಕ್‌ವೊಂದರಲ್ಲಿ ಇಂಜೆಕ್ಷನ್ ಪಡೆದ ಯುವಕ ಗುರುವಾರ ರಾತ್ರಿ ಮೃತಪಟ್ಟಿದ್ದು, ವೈದ್ಯರ ನಿರ್ಲಕ್ಷ್ಯವೇ ಸಾವಿಗೆ ಕಾರಣ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಗ್ರಾಮದ ಗೌತಮ್ ಅಲಿಯಾಸ್ ನಾಗೇಂದ್ರ (23) ಮೃತ ಯುವಕ. ವಕ್ಕಲೇರಿಯಲ್ಲಿರುವ ಸನ್‌ರೈಸರ್ಸ್ ಕ್ಲಿನಿಕ್‌ನ ವೈದ್ಯ ರಫೀಕ್ ಎಂಬುವವರು ನೀಡಿದ ಇಂಜೆಕ್ಷನ್ ಪರಿಣಾಮದಿಂದಲೇ ಮೃತಪಟ್ಟಿದ್ದಾನೆ ಎಂಬುದಾಗಿ ಕುಟುಂಬಸ್ಥರು ದೂರಿದ್ದು, ಕ್ರಮಕ್ಕೆ ಆಗ್ರಹಿಸಿದ್ದಾರೆ. ಕೋಲಾರ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land Converted

Mysore

2 ACRE, 20 gunta land Mysore 40 ft Road sale. Price 2500 per sft.contact. 9380586105

Agricultural Land

Chamarajanagar

AGRICULTURE LAND for SALE @ Kollegal Taluk, 50Acres,General property, clear Title,Direct Registration only buyers Contact: 9739627282

Commercial Building

Anjanapura

FOR SALE, NORTH 20/60 BDA, G+3.5 FLOORS, COMMERCIAL BUILDING, ANJANAPURA 11th block 2 lakh rent. 3,25 CR, OWNER SATISH PH 98450 16934

Kengeri

COMMERCIAL BUILDING for SALE, 17.5 x 35 sft Railway Station, Opposite Kengeri. Contact: 9731751079

Commercial Land

Banashankari

BANASHANKARI 6TH Stage 9th block 50x80 commercial North Facing Site 100feet Road. Contact: 9900097239

Mysore

50X80 SOUTH facing purely Commercial Site for Sale at Dattagalli, Opposite Nalapak Hotel. Contact; Mysore Estates Vishwanath Gowda 9590911111

Nelamangala

COMMERCIAL LAND 150x300 1 Acre with fencing Near Yediyuru attached to SH84 Mandya road clear titles contact 8296944200

Commerical

Jayanagar

JAYANAGAR-30X46: NEW2 BHK x3 Units, G+3,Building Prime Area,Nr Metro, ForSale,BUYERS /NRIs Call:Bangalore Estates: 9845054356/ 9880377799

MORE Classifieds IN SUPPLEMENT

Kanakapura Road

2 WAREHOUSES Available in Jakkasandra 3rd Phase Bangalore Tenant Occupied Genuine buyers Contact- 9606154546/ 9019851332

Farm House/ Land/ Resorts

Mysore

MYSORE PROPERTIES 0% Brokerage10 Guntas each developed farm plots for Sale at HD Kote Road Mysore Contact; Mysore Estates Vishwanath Gowda 9590911111

Industrial & Factory

Nelamangala

NELAMANGALA. 2 Acres Industrial Land NH4 Attached 9cr/Acre. 1.5 Acre Industrial Land 5Cr/Acre. 9611146463/ 9036207777

REAL ESTATE BUYING

Industrial & Factory

General

WANTED 5000SFT to 20000sft and upto 10Acres in private industrial land and KIADB allotted land at Bengaluru Urban and Rural district call Verna Developers, MG-Road,Blr. 9916310226/ 9353128035.

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 30x40, 40x60 Jayanagar Housing Society, Anjanapura BDA, BCC Housing Society Banashankari 6th Stage Agent`Excuse. Call: 9663454878.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

WANTED SITES/ Old Houses HRBR, HBR, OMBR, KAMMANAHALLI, KASTURI NAGAR, INDIRANAGAR, FRAZER, COOKETOWN MARKET PRICE FALCON 9845447868/ 080 48140875

Nagarabhavi

WANTED BDA SITE 30x40, 40x60, 50x80 Visweshwarayya Layout, Nagarabhavi RHCS Layout, NGF, Banashankari 6th Stage. 8105688602.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

AVAILABLE FOR LEASE 300 Sft.Lalbagh Main`Road East Facing Ideal for Stationary/ Showrooms, Next to CMS Jain College. 8296947177

HENNUR NR Bharatiya city 4000 sqft building. Suits hostel, office, guest house etc. 9731116645

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

Commercial

2300+2400.GROND,FIRST FLOOR Commercial Space For Rent.Car parking, On Nagarbhavi Main Road, Coconut Garden. Bengaluru. Call:9243403130

JOB OPPORTUNITIES

General

REQUIRED: OFFICE Assistant at Malleswaram, Bengaluru. Any Degree Holders having minimum 2 Years Experience with Computer Knowledge is Desirable. Apply: RP Associates, 36, Emami Nest, Flat No. 202, Behind Reliance Smart Point, 16th Cross, Malleswaram, Bengaluru- 560055. Email: hr@rpassociatesblr.com Mobile: 9900098631/ 9845010607

Teachers/ Professors

ST.PHILOMENA PUBLIC SCHOOL, Byalakere, Yelahanka, Bangalore required Trained & Experienced TEACHERS all subjects (Primary & High School) 9480091189/ 9845036582/ stphilomenas118@gmail.com

PUBLIC NOTICE

HOSMAT HOSPITAL PVT. LTD.
No. 45, Magrath Road, Off. Richmond Road, Bangalore – 560025. INDIA.
Ph: 080-25593796, 25593797, 25593746.

NOTICE

Disposal of Out - patient and In-patient Medical Records

Out-patient and In-patient Medical Records prior to the year 2019 will be destroyed (IP 1900001 TO IP19005407). Whosoever interested, can contact the **Medical Records Department** at **HOSMAT Hospital** to collect their out & in patient records prior to 2019 within 15 days from the date of this Notification.

Note: Not applicable to Medico-Legal files and Death Records.

PUBLICE NOTICE

This Notice is hereby given to the public whomsoever that my client intends to purchase the Schedule Property from Mr. Love Mehta S/o U.S.Mehta, **Residing at No. 43-2/3, Armugan Circle, Basavangudi, BANGALORE – 560 004.**

Any person or persons having objections, claims, or interest in the Schedule Property/transactions may lodge the same to the undersigned with valid documents/proof within Fifteen (15) days from the date of this publication, failing which it shall be presumed that the Schedule Property is free from any acts of encumbrances or claims

SCHEDULE

All that piece and parcel of Land in Sy.No. 140, measuring an extent of 2 acres including 3 guntas Karab, situated at Kuduregere Village, Jala Hobli, Earlier Bangalore North Taluk, Now Yelahanka Taluk, and bounded on East by :: Land bearing Survey No.141, West by :: Land bearing Survey No.140 belonging to Mr.Bagaria, North by :: Land bearing Survey No.59, and South by :: 80 feet Road.

B. Janardhana, B.Sc., LL.B., – ADVOCATE,
No. 892/C, 1st Floor, 6th Main, WCR 2nd Stage,
Mahalakshmipuram,
BANGALORE – 560 086. Date : 22-02-2025
MBL No. 98454 48285 Place : Bengaluru
E-mail: janardhana_b16@rediffmail.com

PUBLIC NOTICE

This is to inform the general public that my client intends to purchase the immovable property mentioned and described in the schedule here below from its owner, **Sri. K.B. Kumar**, son of Late Buddi Gowda (hereafter referred to as "Owner"). The Owner represents that the Schedule Property is free from any encumbrance, mortgage, charge, lien or litigation and he has not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence within **Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All that piece and parcel of the Property bearing **Nos. 3844/3 M-9/1** and **3844/4 M-9/2, new property No. 44-2-537-30** comprising a commercial building measuring **1041.628436 square meters** of built-up area, situated at Anegundi Road, Bannimantap, Tilak Nagar, Mandi Mohalla, in ward No. 44, Mysore, measuring on the **East to West (197+163)/2 feet, North to South 160 feet, measuring in total 28,800 square feet** or **2675.618 square meters** and is bounded on the:

East by : Road;
West by : Road;
North by : Property bearing Survey Nos. 3844/2-M9 and 3844/2A/M-9/A; and
South by: Road.

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49,
Edward Road, Bengaluru-560001 Ph.: 080 22863885
email : vinay@vinaykademane.in

Place : Bengaluru
Date : 21-02-2025

PERSONAL

Change of Name

CHANGE OF NAME

I, **Sharath Kumar Mithra .V**, R/at Door No. 1731, 4th Cross, Christian Colony, Mandya-571401, Karnataka, declare that my name in mentioned as **Sharath Kumar Mithra** in my son's school educational documents instead of correct name is **SHARATH KUMAR MITHRA .V** vide affidavit dt: 21.02.2025, before notary M. Narendran, Bengaluru.

ಹೆಸರು ಬದಲಾವಣೆ

ರಾಜು ಮತ್ತು ರಾಜ ಕೋಂ ಲೇಟ್ ಗವೀಗೌಡ ಆದ ನಾನು ಬೆಂಗಳೂರಿನ ಕೆಂಗೇರಿ ಹೋಬಳಿ, ಕುಂಬಳಗೋಡು ಅಂಚೆ, ತಗಚಗುಪ್ಪೆ ಗ್ರಾಮದ ಪಿಂಟೋಬಾರೆ, ನಂ.5ರ ನಿವಾಸಿಯಾಗಿದ್ದು, ನನ್ನ ಹೆಸರು ಆರ್.ಸಿ. ಪುಸ್ತಕದಲ್ಲಿ ರಾಜ ಎಂದೂ ಹಾಗೂ ಇನ್ನಿತರ ದಾಖಲೆಗಳಲ್ಲಿ ರಾಜು ಎಂದು ನಮೂದಾಗಿದೆ. ಇವೆರಡು ಹೆಸರುಗಳು ನನ್ನದೇ ಆಗಿದ್ದು, ನಾನು ನೋಟರಿಯವರಾದ ರವಿ, ಬೆಂಗಳೂರು ಇವರ ಮುಂದೆ ದಿ: 20–02–2025ರಂದು ಪ್ರಮಾಣೀಕರಿಸಿದ್ದೇನೆ.

CHANGE OF NAME

I, SHIVANAND (DOB: 23.9.1981) S/o Basavantraya Mahamuni R/a #23, Ground Floor, Coconut Garden, 2nd main Road, Near SLV Nest Apartment, Nagarabhavi, Bengaluru- 560072 have changed my Name to **SHIVANAND BASAVANTRAYA MAHAMUNI** vide affidavit dated 20.2.2025 sworn before Notary Deepa. M. Bengaluru.

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
9845114560 | 9901641752
*Conditions apply

I, NIKHIL JAYANTILAL JAIN, residing at Bengaluru-9 have changed my name as NIKHIL JAIN, vide affidavit dated 21/02/2025 before Notary K.S. Bammappanavar, Bengaluru

I, SAGAR SHESHA resident of No.23, Block 7, Parashakthi Road, Shakthi Nagar, Kalyanagiri, Mysuru City-570019 have chagned my name to SAGAR SHESHA CHANDRAKANTH vide affidavit dated 18/02/2025 sowrn before notary Jalandhara, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PROPERTY CORNER ಕ್ಲಾಸಿಫೈಡ್ಸ್

Unparalleled Luxury Living.
Possession before December 2025.
NIRMALA CONSTRUCTIONS By H N Vijaya Raghava Reddy & Co VRR & Co Builders
VRR GREEN CREST Live Beyond Nature
2 & 3 BHK Luxury Flats @ Electronic City Phase - I

Price Starts From Rs.6500/- Per Sqft
BDA APPROVED
RERA No. PRM/KA/1251/308/PR/040823/00614
Project Approved by SBI, Bank of Baroda & Other leading Banks
73492 42134 / 99726 23278
sales@vrrbuilders.com www.vrrbuilders.com
40 years of Excellence Since 1984 V. R. R & Co. Builders & Developers. ISO 9001-2015 Certified Company
CREDAI BENGALURU · Builders' Association of India Estd. 1941

VSL SRINIDHI DEVELOPERS
VSL SRINIDHI GREEN FIELDS LAYOUT
BEHIND 340 FEET KEMPEGOWDA MAIN ROAD

BDA APPROVED SITES FOR SALE
Near Kempegowda Layout & Vishveshwaraiah Layout
DISTANCE INDICATOR: Nice Road- 1 Km, Jnana Bharathi- 5 mins Kengeri Upanagar- 5 mins, Magadi Road & Nagarbhavi - 10 mins.
AMENITIES: Fully developed gated community with Park, Basket Ball Court & Children's play area
RERA APPROVED 99000 15805/90083 38098

SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 96322-37557/ 96065-47557

ತಾರಕನ್ಸ್ ಕಾರ್ಮೆಲ್ ಮಂತ್ರ
ಅಭಿವೃದ್ಧಿ ಮಾಡಿದ ಪ್ರೀಮಿಯಂ ಪ್ಲಾಟ್
16.8 ಲಕ್ಷಗಳಿಂದ ಪ್ರಾರಂಭ
1200 ಚದರ ಅಡಿಗಳು
ಎಂಪಿಎ ಅನುಮೋದಿಸಿದ
ಬ್ಯಾಂಕಿನಿಂದ ಸಾಲಗಳು ದೊರೆಯುತ್ತವೆ.
ಮಾಲೂರು, ಮಾಸ್ತಿ ಮುಖ್ಯರಸ್ತೆ, ಸರ್ಜಾಪುರ ಮತ್ತು ವೈಟ್‌ಫೀಲ್ಡ್ ಹತ್ತಿರ ಎಸ್‌.ಟಿಆರ್‌.ಆರ್. ಸಮೀಪ, ಬೆಂಗಳೂರು ಮತ್ತು ಚೆನ್ನೈ ರಾಷ್ಟ್ರೀಯ ಹೆದ್ದಾರಿ ಹತ್ತಿರ

ಕರೆಮಾಡಿ 91489 82036

RERA NO. PRM/KA/RERA/1251/310/PR/150922/005241

Since 1997 **Anand Group** Builders & Developers
An ISO 9001 : 2015 Company
For a splendid living
As per Vaastu with CC & OC
Exclusively Designed Podium Row Houses
ANAND SOMU AARUSH
3 BHK Duplex & 4 BHK Triplex with Lift
Anjanapura BDA Layout
₹ 3.73* cr Onwards
*T&C Apply
9141 222 444
www.anand-group.com
Scan for Website

'ಡಿಎಚ್ ಬೆಂಗಳೂರು– 2040 ಶೃಂಗ'ದಲ್ಲಿ ಸನ್ ಮೊಬಿಲಿಟಿ ಅಧ್ಯಕ್ಷ ಚೇತನ್ ಮೈನಿ ಅಭಿಮತ

2030ಕ್ಕೆ ಎಲ್ಲ ಸಾರಿಗೆ ಬಸ್‌ಗಳು ಇ.ವಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಲಿನ್ಯ ಇಳಿಸುವ, ಕಡಿಮೆ ಇಂಧನ ವೆಚ್ಚದ ಎಲೆಕ್ಟ್ರಿಕ್ ವಾಹನಗಳೇ ಭವಿಷ್ಯದ ವಾಹನಗಳಾಗಿವೆ. ನಗರದಲ್ಲಿ 2030ರ ಹೊತ್ತಿಗೆ ಎಲ್ಲ ಬಸ್‌ಗಳು ಎಲೆಕ್ಟ್ರಿಕ್ ವಾಹನಗಳಾಗಿರಲಿವೆ (ಇ.ವಿ) ಎಂದು ಸನ್ ಮೊಬಿಲಿಟಿ ಅಧ್ಯಕ್ಷ ಚೇತನ್ ಮೈನಿ ತಿಳಿಸಿದರು.

'ಪ್ರಜಾವಾಣಿ'ಯ ಸೋದರ ಪತ್ರಿಕೆಯಾದ ಡೆಕ್ಕನ್ ಹೆರಾಲ್ಡ್ ಶುಕ್ರವಾರ ಹಮ್ಮಿಕೊಂಡಿದ್ದ 'ಡಿಎಚ್ ಬೆಂಗಳೂರು 2040 ಶೃಂಗಸಭೆ'ಯಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

ಬಿಎಂಟಿಸಿಯ 6,200 ಬಸ್‌ಗಳು ನಗರದಲ್ಲಿ ಸಂಚರಿಸುತ್ತಿವೆ. ಅದರಲ್ಲಿ ಒಂದು ಸಾವಿರ ಬಸ್‌ಗಳು ಎಲೆಕ್ಟ್ರಿಕ್ ವಾಹನಗಳಾಗಿವೆ (ಇ.ವಿ.). ಇನ್ನೂ ಒಂದು ಸಾವಿರ ಇ.ವಿ. ಬಸ್‌ಗಳು ರಸ್ತೆಗಿಳಿಯಲು ತಯಾರಾಗಿವೆ. ಕಳೆದ ವರ್ಷ ಬೆಂಗಳೂರಿನಲ್ಲಿ ಖರೀದಿಯಾದ ದ್ವಿಚಕ್ರವಾಹನಗಳಲ್ಲಿ ಶೇ 54ರಷ್ಟು ಇ.ವಿ. ಆಗಿದ್ದವು ಎಂದು ವಿವರ ನೀಡಿದರು.

ಬೆಂಗಳೂರಿನಲ್ಲಿ 4,500 ಚಾರ್ಜಿಂಗ್ ಕೇಂದ್ರಗಳಿವೆ. ದೇಶದ ಬೇರೆ ಯಾವುದೇ ನಗರದಲ್ಲಿ ಇಷ್ಟೊಂದು ಚಾರ್ಜಿಂಗ್ ಕೇಂದ್ರಗಳಿಲ್ಲ. ವಾಹನಗಳ ಚಾರ್ಜಿಂಗ್ ಇನ್ನಷ್ಟು ಸರಳಗೊಂಡರೆ ಎಲ್ಲ ವಾಹನಗಳು ಇ.ವಿ. ಆಗಲಿವೆ ಎಂದರು.

ಮನೆಗಳ ಚಾವಣಿಯಲ್ಲಿ ಸೌರ ಫಲಕ ಅಳವಡಿಸಿ ಉತ್ಪತ್ತಿ ಮಾಡುವ ವಿದ್ಯುತ್‌ನಲ್ಲಿ ಒಂದು ಸ್ಕೂಟರ್ ಚಾರ್ಜ್ ಮಾಡಬಹುದು. ಇಂಥ ಉಪಕ್ರಮಗಳನ್ನು ಎಲ್ಲ ಕಡೆ ಕೈಗೊಳ್ಳಬೇಕು. ವಿದ್ಯುತ್ ವಾಹನಗಳು ಮಾಲಿನ್ಯವನ್ನು ದೊಡ್ಡ ಮಟ್ಟದಲ್ಲಿ ಕಡಿಮೆ ಮಾಡುತ್ತವೆ. ಇದರೊಂದಿಗೆ ಮರಗಳ ಸಂಖ್ಯೆ ಹೆಚ್ಚಾದರೆ 2040ಕ್ಕೆ ನಿಜಾರ್ಥದಲ್ಲಿ ಬೆಂಗಳೂರನ್ನು ಉದ್ಯಾನ ನಗರಿಯನ್ನಾಗಿ ಮಾಡಬಹುದು ಎಂದು ಹೇಳಿದರು.

ಮಧ್ಯಾಹ್ನದವರೆಗೆ ನಡೆದ 'ಕೃತಕ ಬುದ್ಧಿಮತ್ತೆ(ಎ.ಐ.) ಯುಗದಲ್ಲಿ ಕೆಲಸ ಮತ್ತು ಕೆಲಸದ ಸ್ಥಳಗಳ ಮರುವ್ಯಾಖ್ಯಾನ', 'ಭವಿಷ್ಯದ ಮೆಟ್ರೊಗಾಗಿ ಮಾನಸಿಕ ಸ್ವಾಸ್ಥ್ಯ', 'ನಿರ್ಮಾಣ ಬೆಂಗಳೂರು: ಆಡಳಿತ, ನಗರ ಯೋಜನೆ ಮತ್ತು ರಿಯಲ್ ಎಸ್ಟೇಟ್ ಡೆವಲಪರ್‌ಗಳ ಪಾತ್ರ' ಗೋಷ್ಠಿಗಳಲ್ಲಿ ವಿವಿಧ ವಿಷಯ ತಜ್ಞರು ವಿಚಾರ ಮಂಡಿಸಿದರು.



ಶುಕ್ರವಾರ ನಡೆದ 'ಡಿಎಚ್ ಬೆಂಗಳೂರು 2040 ಶೃಂಗ'ದಲ್ಲಿ ಸನ್ ಮೊಬಿಲಿಟಿ ಅಧ್ಯಕ್ಷ ಚೇತನ್ ಮೈನಿ ದಿಕ್ಸೂಚಿ ಭಾಷಣ ಮಾಡಿದರು. ಶೃಂಗ'ದಲ್ಲಿ ಭಾಗವಹಿಸಿದ್ದ ಸಭಾಸದರು ಪ್ರಜಾವಾಣಿ ಚಿತ್ರ

ಗೋಷ್ಠಿಗಳಲ್ಲಿ ಕೇಳಿದ್ದು...

ಎ.ಐ. (ಕೃತಕ ಬುದ್ಧಿಮತ್ತೆ) ತಂತ್ರಜ್ಞಾನವು ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವುದಕ್ಕೆ ಪೂರಕವೇ ಹೊರತು ಅದೇ ಎಲ್ಲ ಅಲ್ಲ. ಶಿಕ್ಷಣವೇ ಎಲ್ಲದಕ್ಕಿಂತ ಮುಖ್ಯ. ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ಎಲ್ಲ ಕಡೆಯಿಂದ ಪ್ರತಿಭೆಗಳನ್ನು ಆಕರ್ಷಿಸುತ್ತಿದೆ. ಈ ಪ್ರತಿಭೆಗಳಿಗೆ ಕೌಶಲವೂ ದೊರೆತರೆ ಮಾದರಿ ಬೆಂಗಳೂರು ನಿರ್ಮಾಣಗೊಳ್ಳಲಿದೆ.

ಶರತ್ ಕುಮಾರ್ ಬಚ್ಚೇಗೌಡ, ಕಿಯೋನಿಕ್ಸ್ ಅಧ್ಯಕ್ಷ

ಮಾನಸಿಕ ಆರೋಗ್ಯದ ಬಗ್ಗೆ ಸಾರ್ವಜನಿಕವಾಗಿ ಚರ್ಚೆ ಮಾಡುವ ಮೂಲಕ ಜನರಿಗೆ ಮಾಹಿತಿ ದೊರೆಯುವಂತೆ ಮಾಡುವುದು ಉತ್ತಮ ವಿಚಾರ. ದೈಹಿಕ ಕಾಯಿಲೆಗಳಿಗೆ ಚಿಕಿತ್ಸೆ ತೆಗೆದುಕೊಳ್ಳಲು ಜನರಿಗೆ ಹಿಂಜರಿಕೆ ಇರುವುದಿಲ್ಲ. ಆದರೆ, ಮಾನಸಿಕ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಜನರು ಮುಂದಾಗುವುದಿಲ್ಲ. ನಾವು ಅದಕ್ಕಾಗಿ ಜಿಲ್ಲೆಗಳಲ್ಲಿ ಮಾತ್ರವಲ್ಲ, ಪ್ರತಿ ತಾಲ್ಲೂಕಿನಲ್ಲಿ, ಗ್ರಾಮಗಳಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸುತ್ತಿದ್ದೇವೆ. ಚಿಕಿತ್ಸೆ ದೊರೆಯುವಂತೆ ಮಾಡಿದ್ದೇವೆ.

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಜಗತ್ತಿನ ಎಲ್ಲ ಮಹಾನಗರಗಳಲ್ಲಿ ವಾಹನದಟ್ಟಣೆಯ ಸಮಸ್ಯೆ ಇದೆ. ಬೆಂಗಳೂರಿನಲ್ಲಿ ಮಾತ್ರ ಈ ಸಮಸ್ಯೆ ಇದೆ ಎಂಬಂತೆ ನಾವು ಮಾತನಾಡುತ್ತಿದ್ದೇವೆ. 1.5 ಕೋಟಿ ಜನಸಂಖ್ಯೆ ಇರುವ ಬೆಂಗಳೂರಿಗೆ ಕಡಿಮೆ ಜನಸಂಖ್ಯೆ ಇರುವ ನಗರಗಳನ್ನು ಹೋಲಿಸಿ ನೋಡಬಾರದು. ವಾಹನದಟ್ಟಣೆಯನ್ನು ಕಡಿಮೆ ಮಾಡಲು ಕರ್ನಾಟಕ ಸರ್ಕಾರವು ಕ್ರಾಂತಿಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ಸುರಂಗ ಮಾರ್ಗ ಸಹಿತ ಹಲವು ಉಪಕ್ರಮಗಳನ್ನು ಕೈಗೆತ್ತಿಕೊಂಡಿದೆ. ಬಿಡಿಎ, ಬಿಬಿಎಂಪಿಯಂಥ ಸಂಸ್ಥೆಗಳು ಮೂಲಸೌಕರ್ಯಗಳನ್ನು ಕಲ್ಪಿಸುತ್ತಿವೆ.

ಎನ್.ಎ. ಹ್ಯಾರಿಸ್, ಬಿಡಿಎ ಅಧ್ಯಕ್ಷ

ಪರಿಸರ ಪೂರಕ ನಗರ ನಿರ್ಮಾಣ

ನಾಡಪ್ರಭು ಕೆಂಪೇಗೌಡರು ಪೇಟೆ ಕಟ್ಟುವುದರ ಜೊತೆಗೆ ಉದ್ಯಾನಗಳನ್ನು, ಕೆರೆಗಳನ್ನು ಕಟ್ಟಿದ್ದರು. ಪರಿಸರಕ್ಕೆ ಪೂರಕವಾಗಿ ನಗರ ಇರಬೇಕು ಎಂಬುದು ಇದರ ಹಿಂದಿನ ಉದ್ದೇಶವಾಗಿದೆ. ಅದನ್ನು ಮುಂದುವರಿಸಲು ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ವಿಡಿಯೊ ರೆಕಾರ್ಡಿಂಗ್ ಮೂಲಕ ಕಳುಹಿಸಿದ ಸಂದೇಶದಲ್ಲಿ ಅವರು 'ಮರಗಳನ್ನು ಉಳಿಸಿಕೊಂಡು, ಉದ್ಯಾನಗಳನ್ನು ಬೆಳೆಸಿಕೊಂಡು ಕೆರೆಗಳನ್ನು ಸ್ವಚ್ಛವಾಗಿ ಕಾಪಾಡಿಕೊಂಡು ಹೋಗುವುದೇ ನಮ್ಮ ಗುರಿ' ಎಂದು ಹೇಳಿದರು.

'ಜಾಗತಿಕ ಹೂಡಿಕೆದಾರರ ಸಮಾವೇಶದ ಮೂಲಕ ₹10.27 ಲಕ್ಷ ಕೋಟಿ ಹೂಡಿಕೆಯು ರಾಜ್ಯಕ್ಕೆ ಹರಿದು ಬರುವ ಒಪ್ಪಂದವಾಗಿದೆ. 6 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ. ಎಲ್ಲರನ್ನೂ ಒಳಗೊಳ್ಳುವ ಸುಸ್ಥಿರ ಅಭಿವೃದ್ಧಿಯೇ ನಮ್ಮ ಉದ್ದೇಶ' ಎಂದು ತಿಳಿಸಿದರು.

'ನಮ್ಮ ಮೆಟ್ರೊ' ಸಂಪರ್ಕ ಇನ್ನಷ್ಟು ವಿಸ್ತರಣೆಯಾಗುತ್ತಿದೆ. ಉಪನಗರ ರೈಲು ಯೋಜನೆ ತಯಾರಾಗುತ್ತಿದೆ. ನಗರದಾದ್ಯಂತ ಕಾವೇರಿ ನೀರು ಒದಗಿಸಲಾಗುತ್ತಿದೆ. ವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗಿದೆ. ದೇವನಹಳ್ಳಿಯಲ್ಲಿ 407 ಎಕರೆಯಲ್ಲಿ ಗ್ಲೋಬಲ್ ಹಬ್ ನಿರ್ಮಿಸಲಾಗುವುದು. 2033ಕ್ಕೆ ಬೆಂಗಳೂರಿನಲ್ಲಿ ಇನ್ನೊಂದು ವಿಮಾನ ನಿಲ್ದಾಣ ಕಾರ್ಯಾಚರಣೆ ಮಾಡಲಿದೆ ಎಂದು ವಿವರಿಸಿದರು.

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳು ಜನರ ವಿಶ್ವಾಸವನ್ನು ಉಳಿಸಿಕೊಂಡಿರುವ ಮಾಧ್ಯಮಗಳಾಗಿವೆ. ಜನರ ಧ್ವನಿಯಾಗಿ ಕೆಲಸ ಮಾಡುತ್ತಾ ಸಮಾಜ ಸ್ವಾಸ್ಥ್ಯ ಕಾಪಾಡುತ್ತಿವೆ ಎಂದು ಶ್ಲಾಘಿಸಿದರು.

'ಎರಡನೇ ವಿಮಾನ ನಿಲ್ದಾಣ ಬೆಂಗಳೂರು ದಕ್ಷಿಣಕ್ಕೇ ಬರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರಕ್ಕೆ ಎರಡನೇ ವಿಮಾನ ನಿಲ್ದಾಣ ಅತ್ಯಗತ್ಯವಾಗಿದ್ದು, ಬಹುದಿಕ್ಕಿನಲ್ಲಿ ನಗರ ಬೆಳೆದರೆ ಕೈಗಾರಿಕೆ ಸೇರಿದಂತೆ ಎಲ್ಲ ರೀತಿಯಲ್ಲೂ ಅಭಿವೃದ್ಧಿಯಾಗುತ್ತದೆ. ಉತ್ತರದಲ್ಲಿ ಈಗಾಗಲೇ ವಿಮಾನ ನಿಲ್ದಾಣ ಇರುವುದರಿಂದ, ದಕ್ಷಿಣದಲ್ಲಿ ಹೊಸ ವಿಮಾನ ನಿಲ್ದಾಣ ನಿರ್ಮಿಸುವುದು ಸೂಕ್ತ ಎಂದು ತಜ್ಞರು ಅಭಿಪ್ರಾಯಪಟ್ಟರು.

ಡಿಎಚ್ ಬೆಂಗಳೂರು–2040 ಶೃಂಗ ಸಭೆಯಲ್ಲಿ 'ಬೆಂಗಳೂರಿಗೆ ಎಷ್ಟು ವಿಮಾನ ನಿಲ್ದಾಣ ಅಗತ್ಯ' ಎಂಬ ವಿಷಯವಾಗಿ ಮಾತನಾಡಿದ ವೈಮಾನಿಕ ಕ್ಷೇತ್ರ ತಜ್ಞ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್, 'ಅತ್ಯಂತ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ನಗರಕ್ಕೆ ಹೆಚ್ಚು ವಿಮಾನ ನಿಲ್ದಾಣಗಳ ಅಗತ್ಯವಿದೆ. ಇದರಿಂದ ವಿಮಾನ ನಿಲ್ದಾಣಗಳ ನಡುವೆ ಸ್ಪರ್ಧೆ ಹೆಚ್ಚಾಗಲಿದ್ದು, ಪ್ರಯಾಣದ ಟಿಕೆಟ್ ದರ ಕಡಿಮೆಯಾಗಲಿದೆ' ಎಂದರು.

'ನಗರ ಬಹುದಿಕ್ಕಿನಲ್ಲಿ ಬೆಳೆದಾಗ ಸರ್ವರೀತಿಯಲ್ಲೂ ಅಭಿವೃದ್ಧಿಯಾಗುತ್ತದೆ. ಉತ್ತರದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಿರುವುದರಿಂದ ಆ ದಿಕ್ಕಿನಲ್ಲೇ ಮತ್ತೊಂದು ವಿಮಾನ ನಿಲ್ದಾಣವಾದರೆ ಮತ್ತಷ್ಟು ದಟ್ಟಣೆ, ಸಮಸ್ಯೆ ಉಂಟಾಗುತ್ತದೆ. ಹೊಸ ವಿಮಾನ ನಿಲ್ದಾಣಗಳ ಜೊತೆಗೆ 'ಲ್ಯಾಂಡಿಂಗ್ ಸ್ಪೇಸ್'ಗಳನ್ನೂ ನಿರ್ಮಿಸಬೇಕು' ಎಂದು ಅಭಿಪ್ರಾಯಪಟ್ಟರು.

ಸಾಮಾಜಿಕ ಕಾರ್ಯಕರ್ತ ವಿವೇಕ್ ಮೆನನ್ ಮಾತನಾಡಿ, 'ಹಿಂದೆ ದಕ್ಷಿಣದಲ್ಲಿಯೇ ವಿಮಾನ ನಿಲ್ದಾಣ ನಿರ್ಮಾಣ ಮಾಡಲು ನಿರ್ಧರಿಸಲಾಗಿತ್ತು. ಕೊನೆಗೆ ಬದಲಾಯಿತು. ಉತ್ತರದಲ್ಲಿ ಮತ್ತಷ್ಟು ಸಮಸ್ಯೆಯನ್ನು ಉಂಟುಮಾಡದೆ, ದಕ್ಷಿಣದಲ್ಲಿ ವಿಮಾನ ನಿಲ್ದಾಣ ನಿರ್ಮಿಸುವುದು ಸೂಕ್ತ' ಎಂದರು.

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ 2030ರ ದಶಕದ ಮಧ್ಯದ ವೇಳೆಗೆ ತನ್ನ ಸಾಮರ್ಥ್ಯ ಮೀರಲಿದೆ ಎಂದು ಅಂದಾಜಿಸಲಾಗಿದೆ. ಎಚ್‌ಎಎಲ್ ವಿಮಾನ ನಿಲ್ದಾಣವನ್ನೂ ಮತ್ತೆ ನಾಗರಿಕ ಪ್ರಯಾಣಕ್ಕೆ ತೆರವು ಮಾಡುವ ಬಗ್ಗೆಯೂ ಚಿಂತನೆ ನಡೆದಿದೆ. ಅದು ಸಾಧ್ಯವಾದರೂ, ಎರಡನೇ ವಿಮಾನ ನಿಲ್ದಾಣವನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ' ಎಂದು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಖುಷ್ಬೂ ಗೋಯಲ್ ಚೌಧರಿ ತಿಳಿಸಿದರು. ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಭಾಗವಹಿಸಿದ್ದರು.

ಡಿಎಚ್ ಬೆಂಗಳೂರು–2040 ಶೃಂಗ ಸಭೆಯಲ್ಲಿ 'ಬೆಂಗಳೂರಿಗೆ ಎಷ್ಟು ವಿಮಾನ ನಿಲ್ದಾಣ ಅಗತ್ಯ' ಸಂವಾದದಲ್ಲಿ ಎಂ.ಜಿ. ಬಾಲಕೃಷ್ಣ, ಖುಷ್ಬೂ ಗೋಯಲ್ ಚೌಧರಿ, ಕ್ಯಾಪ್ಟನ್ ಜಿ.ಆರ್. ಗೋಪಿನಾಥ್, ವಿವೇಕ್ ಮೆನನ್ ಭಾಗವಹಿಸಿದ್ದರು

'ಕನ್ನಡ ಚಿತ್ರರಂಗದಲ್ಲಿ ಬದಲಾವಣೆ ಅಗತ್ಯ'

'ಹಲವು ವರ್ಷಗಳಿಂದ ಒಂದೇ ರೀತಿಯಲ್ಲಿರುವ ಕನ್ನಡ ಚಿತ್ರರಂಗದಲ್ಲಿ ಬದಲಾವಣೆ ಅಗತ್ಯವಾಗಿದೆ. ಮಲಯಾಳ ಚಿತ್ರರಂಗ ಕಳೆದ 20 ವರ್ಷಗಳಲ್ಲಿ ಬದಲಾವಣೆಯಾಗಿ, ಅತ್ಯುತ್ತಮ ಯಶಸ್ಸು ಗಳಿಸುತ್ತಿದೆ. ಈ ರೀತಿಯ ಬದಲಾವಣೆ ನಮ್ಮಲ್ಲಿ ಬೇಕಿದೆ' ಎಂದು ನಟಿ ರಮ್ಯಾ ಅಭಿಪ್ರಾಯಪಟ್ಟರು.

'ಕೆಜಿಎಫ್ ಚಿತ್ರದಲ್ಲಿನ ದೃಶ್ಯ ಸಂಯೋಜನೆ ಎಲ್ಲ ಚಿತ್ರರಂಗಕ್ಕೂ ಮಾದರಿಯಾಗಿದೆ. ಅದನ್ನು ಹೊರತುಪಡಿಸಿದರೆ, ಉತ್ತಮ ಕಥೆಯನ್ನು ಒಳಗೊಂಡ, ಮಹಿಳಾ ಪ್ರಧಾನವಾದ ಚಿತ್ರಗಳು ಬರುತ್ತಿಲ್ಲ' ಎಂದರು.

'ಒಟಿಟಿಯಲ್ಲಿ ಕನ್ನಡ ಚಿತ್ರಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗುತ್ತಿಲ್ಲ. ಈ ಬಗ್ಗೆ ಚರ್ಚೆಯಾಗಬೇಕಿದೆ. ಕೋವಿಡ್ ನಂತರದ ವರ್ಷಗಳಿಂದ ಸರ್ಕಾರ ಚಿತ್ರಗಳಿಗೆ ಸಬ್ಸಿಡಿಯನ್ನೂ ನೀಡಿಲ್ಲ. ಕಲಾ ಪ್ರದರ್ಶಕರಿಗೆ ಸುರಕ್ಷಿತ ತಾಣ ರೂಪಿಸಲು, ಪ್ರೋತ್ಸಾಹಿಸಲು ಸರ್ಕಾರದ ನಿಯಮಗಳು ಅಗತ್ಯ' ಎಂದು ಹೇಳಿದರು.

'ಉತ್ತಮ ಕಥೆ ಸಿಕ್ಕರೆ ನಾನು ಚಿತ್ರಗಳಲ್ಲಿ ಅಭಿನಯಿಸುತ್ತೇನೆ. ಉತ್ತಮ ಕಥೆ ಇದ್ದರೆ ಯಾರಾದರೂ ಹೇಳಿ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಡಿಎಚ್ ಬೆಂಗಳೂರು– 2040 ಶೃಂಗ ಸಭೆಯಲ್ಲಿ ಕೊಳಲು ನುಡಿಸಿದ ವಾರಿಜಾಶ್ರೀ

'ತ್ಯಾಜ್ಯ ನಿರ್ವಹಣೆಗೆ ಬಿಬಿಎಂಪಿ ನೇತೃತ್ವ ಇರಲಿ'

'ನಗರದ ಘನತ್ಯಾಜ್ಯ ನಿರ್ವಹಣೆಯಲ್ಲಿ ಬಿಬಿಎಂಪಿ ಮೂಲವಾಗಿ ನಿರ್ವಹಿಸಬೇಕಾದ ಕೆಲಸವನ್ನೂ ಮಾಡುತ್ತಿಲ್ಲ. ಹತ್ತಾರು ಯೋಜನೆಗಳು ಅಲ್ಲೇ ಉಳಿದಿವೆ. ವಿಂಗಡಣೆಯಾದ ಕಸವೂ ಭೂಭರ್ತಿಗೆ ಸೇರುತ್ತಿದೆ. ರಾಜಕೀಯ ಮರೆತು ನಗರವನ್ನು ತ್ಯಾಜ್ಯ ಮುಕ್ತ ನಗರವನ್ನಾಗಿಸಬೇಕಿದೆ' ಎಂದು ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

'ಭವಿಷ್ಯಕ್ಕಾಗಿ ಸ್ವಚ್ಛ ಬೆಂಗಳೂರು' ವಿಷಯವಾಗಿ ಮಾತನಾಡಿದರು. 'ತ್ಯಾಜ್ಯ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ, ಜವಾಬ್ದಾರಿ ಅತಿ ಅವಶ್ಯ' ಎಂದು ಬಿಬಿಎಂಪಿಯ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಹೇಳಿದರು. 'ತ್ಯಾಜ್ಯ ನಿರ್ವಹಣೆ 'ರಾಕೆಟ್ ಸೈನ್ಸ್' ಅಲ್ಲ. ಬಿಬಿಎಂಪಿ ತ್ಯಾಜ್ಯ ಸಂಗ್ರಹದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು' ಎಂದು ಹಸಿರು ದಳದ ನಳಿನಿ ಶೇಖರ್ ತಿಳಿಸಿದರು.

'ಟೀನ್ ಡ್ರೀಮ್' ಸ್ಪರ್ಧೆಯಲ್ಲಿ ವಿಜೇತರಾದ ಯುರೊ ಸ್ಕೂಲ್‌ನ ವಿದ್ಯಾರ್ಥಿಗಳು 'ಭವಿಷ್ಯದ ಬೆಂಗಳೂರಿನ ಯೋಜನೆ'ಗಳನ್ನು ಪ್ರಸ್ತುತಪಡಿಸಿದರು

'ನಗರದಲ್ಲಿ ಜನಾಂಗೀಯ ವಾದ ಹೆಚ್ಚಳ'

'ನಗರದಲ್ಲಿ ಜನಾಂಗೀಯ ವಾದ ಹೆಚ್ಚಳವಾಗಿರುವುದು ಕಳವಳಕಾರಿ. ಇದು ಎರಡೂ ಕಡೆಯವರಿಂದ ಆಗುತ್ತಿದೆ. ಒಂದು ಪ್ರದೇಶವನ್ನು ತಮ್ಮದು, ಇಲ್ಲಿ ಇನ್ನೊಬ್ಬರು ಬರಬಾರದು ಎಂದಾಗ ಸಮಸ್ಯೆ ಉಂಟಾಗುತ್ತದೆ. ವೈಟ್‌ಫೀಲ್ಡ್ ಸೇರಿದಂತೆ ಕೆಲವು ಭಾಗಗಳಲ್ಲಿ ನಮ್ಮ ಭಾಷೆಯಲ್ಲಿ ಯಾರೂ ಮಾತನಾಡುವುದಿಲ್ಲ' ಎಂದು ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

'ಸ್ಟಾರ್ಟ್‌ಅಪ್ ರಾಜಧಾನಿಯಾಗಿ ಬೆಂಗಳೂರು ತನ್ನ ಅಗ್ರಸ್ಥಾನ ಮರುಸ್ಥಾಪಿಸುವುದು ಹೇಗೆ?' ವಿಷಯದ ಬಗ್ಗೆ ಮಾತನಾಡಿದ ಅವರು, 'ಜನಾಂಗೀಯ ವಾದ ಹೆಚ್ಚಾಗಲು ಕಾರಣ ಸಾಮಾಜಿಕ ಜಾಲತಾಣಗಳು. ಕೃತಕ ಬುದ್ಧಿಮತ್ತೆ (ಎಐ) ಬಗ್ಗೆ ಹೆಚ್ಚು ಮಾತನಾಡುವ ನಾವು, ವಿವೇಕದಿಂದ ವರ್ತಿಸಿದರೆ ಸಮಸ್ಯೆಗಳಾಗುವುದಿಲ್ಲ' ಎಂದರು.

ಡಿಕೆಶಿ ವಿರುದ್ಧ ಇ.ಡಿ, ಸಿಬಿಐಗೆ ಶಾಸಕ ಮುನಿರತ್ನ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುತ್ತಿರುವ ₹2,000 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶೇ 15ರಷ್ಟು ಕಮಿಷನ್ ಪಡೆದಿದ್ದಾರೆ' ಎಂದು ಆರೋಪಿಸಿ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರು ಜಾರಿ ನಿರ್ದೇಶನಾಲಯ ಮತ್ತು ಸಿಬಿಐಗೆ ದೂರು ಸಲ್ಲಿಸಿದ್ದಾರೆ.

'ವಿವಿಧ ಕಾಮಗಾರಿಗಳ ಗುತ್ತಿಗೆ ನೀಡಲು ಟೆಂಡರ್ ಕರೆಯದೆ, ಪ್ರಕ್ರಿಯೆ ನಡೆಸಲಾಗುತ್ತಿದೆ. ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರ ಸಂಬಂಧಿಗಳಿಗೆ ಗುತ್ತಿಗೆ ನೀಡಲು ಮುಂದಾಗಿದ್ದು, ಡಿ.ಕೆ.ಶಿವಕುಮಾರ್ ಅವರ ಪರವಾಗಿ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ಗುತ್ತಿಗೆದಾರರಿಂದ ಶೇ 15ರಷ್ಟು ಕಮಿಷನ್ ಈಗಾಗಲೇ ಪಡೆದಿದ್ದಾರೆ' ಎಂದು ದೂರಿದ್ದಾರೆ.

ಮುನಿರತ್ನ

'ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸಹ ಇದರಲ್ಲಿ ನೇರವಾಗಿ ಭಾಗಿಯಾ ಗಿದ್ದಾರೆ. ರಾಜ್ಯದ ಗುತ್ತಿಗೆದಾರರ ಬಿಡ್‌ಗಳನ್ನು ಅನಗತ್ಯವಾಗಿ ತಿರಸ್ಕರಿಸುತ್ತಿದ್ದಾರೆ. ಕೆಲವು ಕಾಮಗಾರಿಗಳಲ್ಲಿ ತಮ್ಮದೇ ಬೇನಾಮಿ ಕಂಪನಿಗಳ ಮೂಲಕ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದು, ಗುತ್ತಿಗೆ ಪಡೆದಿದ್ದಾರೆ' ಎಂದು ಆರೋಪಿಸಿದ್ದಾರೆ.

'ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದ ಸ್ಟಾರ್ ಚಂದ್ರು ಅವರ ಸ್ಟಾರ್ ಬಿಲ್ಡರ್ಸ್‌ಗೆ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ₹232 ಕೋಟಿ ಮೊತ್ತದ ಕಾಮಗಾರಿಗಳ ಗುತ್ತಿಗೆ ನೀಡಿದ್ದಾರೆ. ಈ ಎಲ್ಲ ಅಕ್ರಮಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಬೇಕು' ಎಂದು ಕೋರಿದ್ದಾರೆ.

ಅಪಾರ್ಟ್‌ಮೆಂಟ್ ನಿವಾಸಿಗಳ ಸಭೆ: ಜಲಮಂಡಳಿ ಅಧ್ಯಕ್ಷರ ಭರವಸೆ

ಕಾವೇರಿ ನೀರು ಸಂಪರ್ಕ ಪ್ರಕ್ರಿಯೆ ಸರಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅಪಾರ್ಟ್‌ಮೆಂಟ್‌ಗಳು ಕಾವೇರಿ ನೀರಿನ ಹೊಸ ಸಂಪರ್ಕ ಪಡೆಯುವ ಪ್ರಕ್ರಿಯೆಯನ್ನು ಇನ್ನಷ್ಟು ಸರಳಗೊಳಿಸಲಾಗುವುದು ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಬೇಸಿಗೆಯಲ್ಲಿ ಉಂಟಾಗಬಹುದಾದ ನೀರಿನ ಸಮಸ್ಯೆ ಕುರಿತು ಜಾಗೃತಿ ಮತ್ತು ಕಾವೇರಿ ನೀರಿನ ಸಂಪರ್ಕ ಪಡೆಯುವ ಕುರಿತು ನಿವಾಸಿಗಳಲ್ಲಿದ್ದ ಗೊಂದಲಗಳನ್ನು ಬಗೆಹರಿಸಲು ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ (ಬಿಎಎಫ್) ಸಹಯೋಗದಲ್ಲಿ ಆಯೋಜಿಸಿದ್ದ ಸರಣಿ ಸಭೆಯಲ್ಲಿ ಅವರು ಮಾತನಾಡಿದರು.

'ಕಾವೇರಿ ನೀರಿನ ಸಂಪರ್ಕ ಪಡೆಯುವಾಗ ಹೆಚ್ಚಿನ ಶುಲ್ಕ ವಿಧಿಸಲಾಗುತ್ತಿದೆ' ಎಂದು ಸಭೆಯಲ್ಲಿದ್ದ ಅಪಾರ್ಟ್‌ಮೆಂಟ್ ನಿವಾಸಿಗಳು ಆತಂಕ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ರಾಮ್‌ಪ್ರಸಾತ್, 'ಶುಲ್ಕದ ಗೊಂದಲವನ್ನು ಪರಿಹರಿಸಲು ಜಲಮಂಡಳಿಯ ವೆಬ್‌ಸೈಟ್‌ನಲ್ಲಿ ಮಾದರಿ ಕ್ಯಾಲ್ಕ್ಯುಲೇಟರ್ ಅಳವಡಿಸಲಾಗುವುದು. ಇದರಿಂದ ಶುಲ್ಕ ವಿಧಿಸುವ ಕುರಿತು ಮಾಹಿತಿ ಪಡೆದುಕೊಳ್ಳಬಹುದು' ಎಂದು ತಿಳಿಸಿದರು.

ತ್ರಿ ಸದಸ್ಯರ ಸಮಿತಿ : ಶುಲ್ಕಕ್ಕೆ ಸಂಬಂಧಿಸಿ ಸಮಸ್ಯೆಗಳು ಹಾಗೂ ಗೊಂದಲಗಳ ಕುರಿತು ಗ್ರಾಹಕರ ದೂರು ದಾಖಲಿಸಲು ಮುಖ್ಯ ಎಂಜಿನಿಯರ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗುವುದು. ಈ ಸಮಿತಿಯು ದೂರುಗಳನ್ನು ಪರಿಶೀಲಿಸಿ ಗ್ರಾಹಕರಲ್ಲಿರುವ ಗೊಂದಲಗಳನ್ನು ಪರಿಹರಿಸಲಿದೆ' ಎಂದರು.

ನಿಗದಿತ ಪ್ರಮಾಣದ ನೀರು: 'ಕಾವೇರಿ ನೀರಿನ ಸಂಪರ್ಕ ಪಡೆದುಕೊಳ್ಳುವ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಪ್ರತಿ ಮನೆಗೆ ಪ್ರತಿ ನಿತ್ಯ 200 ಲೀಟರ್ ನೀರು ಸರಬರಾಜು ಮಾಡಲಾಗುವುದು. ಕಾವೇರಿ 5ನೇ ಹಂತದ ಯೋಜನೆ ಉದ್ಘಾಟನೆ ನಂತರ ಜಲಮಂಡಳಿಯಲ್ಲಿ ಸಾಕಷ್ಟು ನೀರು ಲಭ್ಯವಿದೆ. ಹಂತ ಹಂತವಾಗಿ ಎಲ್ಲಾ ಪ್ರದೇಶಗಳಿಗೂ ಈ ನೀರನ್ನು ಪೂರೈಸಲಾಗುವುದು' ಎಂದು ಭರವಸೆ ನೀಡಿದರು.

'ನಗರದ ಪೂರ್ವಭಾಗದ ಅಪಾರ್ಟ್‌ಮೆಂಟ್ ನಿವಾಸಿಗಳನ್ನು ಭೇಟಿಯಾಗಿ, ಅವರಲ್ಲಿದ್ದ ಸಮಸ್ಯೆಗಳಿಗೆ ಪರಿಹಾರ ಸೂಚಿಸಲಾಗಿದೆ. ಈವರೆಗೆ 258 ಕಾವೇರಿ ಸಂಪರ್ಕ ಅಭಿಯಾನದ ಮೂಲಕ 21 ಸಾವಿರಕ್ಕೂ ಹೆಚ್ಚು ಸಂಪರ್ಕಗಳನ್ನು ನೀಡಲಾಗಿದೆ' ಎಂದು ಅಧ್ಯಕ್ಷರು ತಿಳಿಸಿದರು.

ಬಿಎಎಫ್ ಉಪಾಧ್ಯಕ್ಷ ಸತೀಶ್ ಮಲ್ಯ ಮಾತನಾಡಿ , 'ಕಾವೇರಿ ನೀರಿನ ಸಂಪರ್ಕ ಪಡೆಯುವಾಗ ಅಪಾರ್ಟ್‌ಮೆಂಟ್ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಜಲಮಂಡಳಿ ನಮ್ಮ ಫೆಡರೇಷನ್‌ನೊಂದಿಗೆ ಸರಣಿ ಸಭೆಗಳನ್ನು ನಡೆಸುತ್ತಿದೆ. ಜಲಮಂಡಳಿ ಅಧ್ಯಕ್ಷರೇ ಸಭೆಯಲ್ಲಿ ಭಾಗವಹಿಸಿ ಸಮಸ್ಯೆಗಳಿಗೆ ತ್ವರಿತಗತಿಯಲ್ಲಿ ಪರಿಹಾರ ನೀಡುತ್ತಿದ್ದಾರೆ. ಇದೇ ಮಾದರಿಯಲ್ಲಿ ನಗರದ ಉತ್ತರ ವಲಯದಲ್ಲಿಯೂ ಸಭೆಗಳನ್ನು ಹಮ್ಮಿಕೊಳ್ಳಲಾಗುವುದು' ಎಂದರು.

ಅಪಾರ್ಟ್‌ಮೆಂಟ್‌ವೊಂದರ ನಿವಾಸಿಗಳೊಂದಿಗೆ ನಡೆದ ಸಭೆಯಲ್ಲಿ ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಮಾತನಾಡಿದರು

ಜನಸಂಖ್ಯಾವಾರು ನೀರು ಶೀಘ್ರ ನಿರ್ಧಾರ

ಜಲಮಂಡಳಿ ಪ್ರತಿ ಕುಟುಂಬಕ್ಕೆ ನಿತ್ಯ 200 ಲೀಟರ್ ನೀರು ಪೂರೈಸುತ್ತದೆ. ಅದರ ಜೊತೆಗೆ, ಆಯಾ ಮನೆಗಳಲ್ಲಿರುವ ಜನಸಂಖ್ಯೆಯನ್ನು ಆಧರಿಸಿ ಕುಡಿಯುವ ನೀರು ಪೂರೈಸುವ ಕುರಿತು ನಿರ್ಧರಿಸಲಾಗುವುದು ಎಂದು ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಅಪಾರ್ಟ್‌ಮೆಂಟ್ ನಿವಾಸಿಗಳು, ಕುಡಿಯಲು ಹಾಗೂ ಅಡುಗೆಗೆ ಹೊರತುಪಡಿಸಿ ಕೈತೋಟ, ಮನೆ ಸ್ವಚ್ಛತೆಯಂತಹ ಬೇರೆ ಕೆಲಸಗಳಿಗೆ ಸಂಸ್ಕರಿಸಿದ ನೀರನ್ನು ಬಳಸಿಕೊಳ್ಳಬೇಕು' ಎಂದು ನಿವಾಸಿಗಳಿಗೆ ಸಲಹೆ ನೀಡಿದರು.

ಮರೆಯಲಾಗದ ಮಹನೀಯರು, ಗೀತ ಗೌರವ ಕಾರ್ಯಕ್ರಮ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸುಗಮ ಸಂಗೀತ ಪರಿಷತ್ತು ಬನಶಂಕರಿ ಎರಡನೇ ಹಂತದಲ್ಲಿರುವ ಶಾಸಕ ಆರ್. ಅಶೋಕ ಅವರ ಕಚೇರಿ ಆವರಣದಲ್ಲಿ ಇದೇ ಭಾನುವಾರ ಬೆಳಿಗ್ಗೆ 10.30ರಿಂದ 'ಮರೆಯಲಾಗದ ಮಹನೀಯರು' ಕಾರ್ಯಕ್ರಮ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ, 'ಸಾಹಿತಿಗಳಾದ ಜಿ.ಎಸ್. ಶಿವರುದ್ರಪ್ಪ, ಎಂ. ಗೋಪಾಲ ಕೃಷ್ಣ ಅಡಿಗ, ಸಿದ್ದಲಿಂಗಯ್ಯ ಹಾಗೂ ನಿಸಾರ್ ಅಹಮದ್ ಅವರ ಸ್ಮರಣಾರ್ಥ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಈ ಕಾರ್ಯಕ್ರಮ ಉದ್ಘಾಟಿಸುತ್ತಾರೆ. ಸಾಹಿತಿಗಳಾದ ಜಿ.ಎಸ್. ಸಿದ್ಧಲಿಂಗಯ್ಯ, ದೊಡ್ಡರಂಗೇಗೌಡ, ಎಚ್.ಎಸ್. ವೆಂಕಟೇಶ ಮೂರ್ತಿ, ಬಿ.ಆರ್. ಲಕ್ಷ್ಮಣರಾವ್, ಡುಂಡಿರಾಜ್ ಹಾಗೂ ನಾ. ದಾಮೋದರ ಶೆಟ್ಟಿ ಉಪಸ್ಥಿತರಿರುತ್ತಾರೆ' ಎಂದರು.

'ಮಧ್ಯಾಹ್ನ 3 ಗಂಟೆಯಿಂದ ದೊಡ್ಡರಂಗೇಗೌಡ ಹಾಗೂ ಜಿ.ಎಸ್. ಸಿದ್ಧಲಿಂಗಯ್ಯ ಅವರಿಗೆ ಗೀತ ಗೌರವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಾನು ಸೇರಿ ಅಪ್ಪಗೆರೆ ತಿಮ್ಮರಾಜು, ನಗರ ಶ್ರೀನಿವಾಸ ಉಡುಪ, ಕಿಕ್ಕೇರಿ ಕೃಷ್ಣಮೂರ್ತಿ, ಸಿ.ಎನ್. ನರಸಿಂಹಮೂರ್ತಿ, ಸುನೀತಾ, ಸುಪ್ರಿಯಾ ರಘುನಂದನ್, ಡೇವಿಡ್ ಮಂಡ್ಯ, ಪ್ರವೀಣ್ ಬಿ.ವಿ. ಹಾಗೂ ಪೂಜ್ಯ ಮೋಹನ್ ಅವರು ಗಾಯನದಲ್ಲಿ ಪಾಲ್ಗೊಳ್ಳುತ್ತಾರೆ' ಎಂದರು.

ಪರಿಷತ್ತಿನ ಕಾರ್ಯಾಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿ ಪ್ರವೀಣ್ ಬಿ.ವಿ., ಗೌರವ ಖಜಾಂಚಿ ಪ್ರಶಾಂತ್ ಉಡುಪ ಉಪಸ್ಥಿತರಿದ್ದರು.

ಆರೋಗ್ಯ ಇಲಾಖೆ: ಕನ್ನಡ ಕಡೆಗಣನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯು ಆದೇಶಗಳನ್ನು ಆಂಗ್ಲ ಭಾಷೆಯಲ್ಲಿ ಹೊರಡಿಸಿ, ಕನ್ನಡ ಕಡೆಗಣಿಸುತ್ತಿರುವುದಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಅವರು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಪತ್ರ ಬರೆದಿದ್ದಾರೆ.

ನಗರದಲ್ಲಿ ಇಂದು

ಕಬೀರನಾಥ ಸ್ವಾಮೀಜಿ ಅವರ 74ನೇ ವರ್ಷದ ಪುಣ್ಯಾರಾಧನಾ ಸಪ್ತಾಹ: ಉಮಾಭಾರತಿ, ಶಿವಪ್ರಕಾಶನಂದ ಸರಸ್ವತಿ ಸ್ವಾಮೀಜಿ, ಶಿವಾನಂದ ಸ್ವಾಮೀಜಿ, ಶಿವರಾಮ ಅಗ್ನಿಹೋತ್ರಿ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ಕಬೀರನಾಥ ಸ್ವಾಮೀಜಿ ಬ್ರಹ್ಮವಿದ್ಯಾಶ್ರಮ ಟ್ರಸ್ಟ್, ನಂ.5/6, 3ನೇ ಕ್ರಾಸ್, ಕೆಂಪೇಗೌಡ ರಸ್ತೆ ಬಡಾವಣೆ, ಬೆಳಿಗ್ಗೆ 9ರಿಂದ

ದಶಮಾನೋತ್ಸವ ಸಮಾರಂಭ: ಉದ್ಘಾಟನೆ: ಸಿ.ಕೆ. ರಾಮಮೂರ್ತಿ, ಕಿಕ್ಕೇರಿ ಕೃಷ್ಣಮೂರ್ತಿ, ಗಮಕ ರೂಪಕ: ಎಂ.ಆರ್. ಸತ್ಯನಾರಾಯಣ, ಸಂಧ್ಯಾ, ಖಾಸಿಂ ಮಲ್ಲಿಗೆ ಮಡುವು, ವಚನ ಗಾಯನ: ಪಾವನಿ ಭಾರದ್ವಾಜ್ ಮತ್ತು ತಂಡ, ದೇವರನಾಮ: ಶಾರದಾ ಗಾನಾಮೃತ ತಂಡ, ರಂಗಗೀತೆ: ಅನಿಲ್ ಅಂಬಾರಿ ಮತ್ತು ತಂಡ, ಜಾನಪದ ಗೀತೆ: ಸ್ವರಾಮೃತ ತಂಡ, ಆಯೋಜನೆ: ಗಾನಚಂದ್ರಿಕಾ ಕಲ್ಚರಲ್ ಫೌಂಡೇಷನ್, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9.30

'ಧ್ವನಿ' 11ನೇ ವರ್ಷದ ಸಂಭ್ರಮ, ರಂಗ ಸಂಕ್ರಮಣ–3, ಬೇಂದ್ರೆ ಸ್ಮರಣೆ: ಉದ್ಘಾಟನೆ: ಜಿ.ಬಿ. ಹರೀಶ್, ಅಧ್ಯಕ್ಷತೆ: ತೇಜಸ್ವಿನಿ ಅನಂತಕುಮಾರ್, ವಿಚಾರಸಂಕಿರಣದಲ್ಲಿ: ಶ್ಯಾಮಸುಂದರ ಬಿದರಕುಂದಿ, ಹರ್ಷ ದಂಬಲ್, ಏಕವ್ಯಕ್ತಿ ಪ್ರದರ್ಶನ: ಅನಂತ ದೇಶಪಾಂಡೆ, ಕಥಾ ಕಥನ: ಶ್ರೀಪತಿ ಮಂಜನಬೈಲು, ಸನ್ಮಾನ: ಶರತ್ ಪರ್ವತವಾಣಿ, ಆಯೋಜನೆ: ಧ್ವನಿ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

ಕಾವ್ಯ ಸಂಸ್ಕೃತಿ ಯಾನ: ರಾಜಧಾನಿ ಬೆಂಗಳೂರಿನಿಂದ ಕೊಡುಗೆ ಜಿಲ್ಲೆಯ ಕಡೆಗೆ ಕಾವ್ಯ ದೀವಟಿಗೆಯ ಪಯಣ, ಉದ್ಘಾಟನೆ: ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ಸತ್ಯಮಂಗಲ ಮಹಾದೇವ, ಮುಖ್ಯ ಅತಿಥಿ: ಗೀತಾ ಡಿ.ಸಿ., ಆಯೋಜನೆ: ವಿಶ್ವ ಮಾನವ ರಾಷ್ಟ್ರಕವಿ ಕುವೆಂಪು ಕಲಾನಿಕೇತನ, ರಂಗ ಮಂಡಲ ಬೆಂಗಳೂರು, ರಂಗ ಚಂದಿರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಕುವೆಂಪು ರಾಷ್ಟ್ರೀಯ ಪುರಸ್ಕಾರ ಪ್ರದಾನ ಸಮಾರಂಭ: ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಪ್ರಶಸ್ತಿ ಪುರಸ್ಕೃತರು: ಹಿಮಾಂಶಿ ಇಂದೂಲಾಲ್ ಶೆಲತ್, ಆಶಯ ಭಾಷಣ: ಬರಗೂರು ರಾಮಚಂದ್ರಪ್ಪ, ಮುಖ್ಯ ಅತಿಥಿ: ಶಿವರಾಜ್ ತಂಗಡಗಿ, ಪ್ರಶಸ್ತಿ ಪುರಸ್ಕೃತರ ಪರಿಚಯ: ಅಗ್ರಹಾರ ಕೃಷ್ಣಮೂರ್ತಿ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಆಯೋಜನೆ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಎಂ.ಚಂದ್ರಶೇಖರ್ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಳಿಗ್ಗೆ 10

ಹಿಮಾಂಶಿ ಇಂದೂಲಾಲ್

ಸಂಸ್ಥಾಪಕರ ಜನ್ಮದಿನ, ಚಿಂತನಾ ದಿನಾಚರಣೆ, ಸ್ಕೌಟರ್ಸ್ ಮತ್ತು ಗೈಡರ್ಸ್ ಸಮಾವೇಶ ಹಾಗೂ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಕೊಂಡಜ್ಜಿ ಬ. ಷಣ್ಮುಖಪ್ಪ, ಮುಖ್ಯ ಭಾಷಣ: ಟಿ.ಎಸ್. ಲುಕಾಸ್, ಪಿ.ಜಿ.ಆರ್. ಸಿಂಧ್ಯ, ಅಧ್ಯಕ್ಷತೆ: ಚಿನ್ನಸ್ವಾಮಿ ರೆಡ್ಡಿ, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಸ್ಥಳ: ದಯಾನಂದ ಸಾಗರ್ ಕಾಲೇಜು ಸಭಾಂಗಣ, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 10.30

ಶ್ರೀನಿವಾಸಮೂರ್ತಿ ಎನ್.ಎಸ್. ಅವರ 'ಶಿಲ್ಪಕಲಾ ದೇವಾಲಯಕ್ಕೆ ದಾರಿ' ಸಂಪುಟ 6 ಮತ್ತು 7 ಬಿಡುಗಡೆ: ಸುಂಕಂ ಗೋವರ್ಧನ್, ಧನಪಾಲ್ ಕೆ., ಅಧ್ಯಕ್ಷತೆ: ಪ್ರೊ.ಕೆ.ಆರ್. ನರಸಿಂಹನ್, ಕೃತಿ ಪರಿಚಯ: ಎಸ್. ನಂಜುಂಡಸ್ವಾಮಿ, ಶಶಿಧರ್ ಎಚ್.ಜಿ., ಆಯೋಜನೆ: ಕದಂಬ ಪ್ರಕಾಶನ, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.45

'ಪ್ರೊ.ಎಚ್.ಟಿ.ಪೋತೆ–60' ವಿಚಾರಸಂಕಿರಣ, ಸಾಕ್ಷ್ಯಚಿತ್ರ, ಕಥಾ ಆಲಾಪ, ಐದು ಪುಸ್ತಕಗಳ ಬಿಡುಗಡೆ: ಉದ್ಘಾಟನೆ: ಪ್ರೊ.ಎಸ್.ಆರ್. ನಿರಂಜನ, ಆಶಯ ಭಾಷಣ: ಮೂಡ್ನಾಕೂಡು ಚಿನ್ನಸ್ವಾಮಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಮುಖ್ಯ ಅತಿಥಿ: ಪ್ರೊ. ಗೂರು ಶ್ರೀರಾಮುಲು, ಉಪಸ್ಥಿತಿ: ಎಚ್.ಟಿ. ಪೋತೆ, ಆಯೋಜನೆ: ಸಪ್ನ ಬುಕ್ ಹೌಸ್, ಗಾಂಧಿ ಸ್ಮಾರಕ ನಿಧಿ, ದಲಿತ ಸಾಹಿತ್ಯ ಪರಿಷತ್ತು, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರಪಾರ್ಕ್ ಪೂರ್ವ, ಬೆಳಿಗ್ಗೆ 10.30

ಎಚ್.ಟಿ.ಪೋತೆ

ಅಲ್ಪಸಂಖ್ಯಾತರ ಹಕ್ಕುಗಳ ದಿನಾಚರಣೆ: ಉಪಸ್ಥಿತಿ: ಯು.ಟಿ. ಖಾದರ್, ಉದ್ಘಾಟನೆ: ಜಮೀರ್ ಅಹಮದ್ ಖಾನ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಆಯೋಜನೆ: ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ, ಸ್ಥಳ: ಕೆಎಂಡಿಸಿ ಭವನ ಸಭಾಂಗಣ, ಶೇಷಾದ್ರಿಪುರ, ಎಸ್.ಸಿ. ರಸ್ತೆ, ಬೆಳಿಗ್ಗೆ 11

ಸುಗಮ ಸಂಗೀತ: ಚಂದನಾ ಮತ್ತು ತಂಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

'ರೂಪಾಂತರಿತ ನಿಸರ್ಗ' ಶೀರ್ಷಿಕೆಯಡಿ ಗಿಳಿಯಾಲ್ ಜಯರಾಮ್ ಭಟ್ ಅವರ ಕಲಾಕೃತಿಗಳ ಪ್ರದರ್ಶನ ಉದ್ಘಾಟನೆ: ಎಚ್. ಶಶಿಧರ್, ಸ್ಥಳ: ಐಐಡಬ್ಲ್ಯುಸಿ ಆರ್ಟ್ ಗ್ಯಾಲರಿ, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, (ಬೆಳಿಗ್ಗೆ 10ರಿಂದ ಸಂಜೆ 7ರವರೆಗೆ ಪ್ರದರ್ಶನ) ಸಂಜೆ 5

ಭಕ್ತಿ ಗೀತೆಗಳ ಗಾಯನ: ಇಶಾನ್ ಅಯ್ಯರ್, ತಬಲಾ: ಪ್ರಜ್ವಲ್ ಶರ್ಮ, ಹಾರ್ಮೋನಿಯಂ: ಬಿ.ಕೆ. ಚಿನ್ಮಯ್ ಭಾರದ್ವಾಜ್, ಆಯೋಜನೆ: ಸೀನಿಯರ್ ಸಿಟಿಜನ್ ಅಸೋಸಿಯೇಷನ್, ಸ್ಥಳ: ಯೋಗ ಸಭಾಂಗಣ, ಬಿಬಿಎಂಪಿ ಕಚೇರಿ ಆವರಣ, ಆರ್‌ಬಿಐ ಬಡಾವಣೆ, ಜೆ.ಪಿ. ನಗರ ಏಳನೇ ಹಂತ, ಸಂಜೆ 5

'ಭಾರತ್ ಗಂಧರ್ವ ಯಾತ್ರಾ' 16ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ: ಹಿಂದೂಸ್ತಾನಿ ಸಂಗೀತ ಗಾಯನ: ಆರ್ಯ ಬನಿಕ್, ಹಾರ್ಮೋನಿಯಂ: ಸತೀಶ್ ಕೊಳ್ಳಿ, ತಬಲಾ: ರೂಪಕ್ ಕಲ್ಲೂರ್ಕರ್, ಕರ್ನಾಟಕ ಸಂಗೀತ ಗಾಯನ: ಸಂದೀಪ್ ನಾರಾಯಣ್, ಪಿಟೀಲು: ಎಚ್.ಎನ್. ಭಾಸ್ಕರ್, ಮೃದಂಗ: ಸಾಯಿ ಗಂಧರ್ವ, ಕಂಜೀರ: ಗುರು ಪ್ರಸನ್ನ, ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಸಂಜೆ 5.15ರಿಂದ

ಭರತನಾಟ್ಯ ರಂಗಪ್ರವೇಶ: ಚಂದನಾ ಎಂ.ಡಿ., ಮುಖ್ಯ ಅತಿಥಿಗಳು: ವೈ.ಕೆ. ಸಂಧ್ಯಾ ಶರ್ಮ, ಲಕ್ಷ್ಮೀ ನಾಗೇಶ್, ಗೌರವ ಅತಿಥಿಗಳು: ಮಂಡ್ಯ ರಮೇಶ್, ಜೋಗಿಲ ಸಿದ್ದರಾಜು, ಶ್ರೀಧರ್ ಜೈನ್, ಆಯೋಜನೆ: ನಾಟ್ಯ ಭೈರವಿ ಕಲಾ ಕುಟೀರ, ಚೇತನಾ ಬಂಗಾರಿ ಮತ್ತು ಧನಂಜಯ್ ಎನ್., ಸ್ಥಳ: ಶ್ರೀಕೃಷ್ಣದೇವರಾಯ ಕಲಾ ಮಂದಿರ, ತೆಲುಗು ವಿಜ್ಞಾನ ಸಮಿತಿ, ವೈಯಾಲಿಕಾವಲ್, ಸಂಜೆ 4.30



ಚಂದನಾ ಎಂ.ಡಿ.

'ನೃತ್ಯ ಕಥಾ' ನೃತ್ಯ ಪ್ರದರ್ಶನ: ಇಂದಿರಾ ಕದಂಬಿ, ಮಾಳವಿಕಾ ಸರುಕ್ಕೈ, ಆಯೋಜನೆ: ಉಡುಪಾ ಫೌಂಡೇಷನ್, ಸ್ಥಳ: ಜೆಎಸ್‌ಎಸ್ ಸಭಾಂಗಣ, 1ನೇ ಮುಖ್ಯರಸ್ತೆ, 8ನೇ ಬ್ಲಾಕ್, ಜಯನಗರ, ಸಂಜೆ 5.30

'ಭಸ್ಮಾಸುರ ಮೋಹಿನಿ' ಯಕ್ಷಗಾನ: ಹಿಮ್ಮೇಳ: ಸುಬ್ರಾಯ ಹೆಬ್ಬಾರ್ ಬಲಗೋಣು, ರಾಜೇಶ್ ಆಚಾರ್, ಮನೋಜ್ ಆಚಾರ್, ಮುಮ್ಮೇಳ: ಅಂಬರೀಶ್ ಭಟ್, ಸುಖದಾ ಭಟ್, ಪ್ರಶಾಂತ್ ಹೆಗಡೆ, ಸಿಂಧುಶ್ರೀ ಹೆಬ್ಬಾರ್, ಶ್ರೀವತ್ಸ, ಆತ್ರೇಯ ಗಾಂವ್ಕರ್, ಭುವನ್ ಭಟ್, ಆಯೋಜನೆ: ಯಕ್ಷೇಶ್ವರಿ ಯಕ್ಷಗಾನ, ಸ್ಥಳ: ಅಭಯಾಂಜನೇಯ ಸ್ವಾಮಿ ದೇವಸ್ಥಾನ, ಆಯಿಲ್ ಮಿಲ್ ರಸ್ತೆ, ಅರವಿಂದ ನಗರ, ಲಿಂಗರಾಜಪುರ, ಸಂಜೆ 5.30

ಸಾಹಿತ್ಯ ಸಂಜೆ: 'ನನ್ನಿಯೊಳ್ ಇನತನಯಂ' ವಿಕ್ರಮಾರ್ಜುನ ವಿಜಯಂ ಸರಣಿ ಉಪನ್ಯಾಸ 2: ಪ್ರೊ.ಕೆ.ಎಸ್. ಮಧುಸೂದನ್, ಆಯೋಜನೆ: ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಸ್ಥಳ: ಭಾನು ನೆನಪಿನ ನಾಣಿ ಅಂಗಳ, ಸುಚಿತ್ರ, 9ನೇ ಮುಖ್ಯರಸ್ತೆ, ಬನಶಂಕರಿ ಎರಡನೇ ಹಂತ, ಸಂಜೆ 6

ಕ್ವಿಲ್ಲಿಂಗ್ ಪೇಪರ್ ಆಭರಣ ತಯಾರಿಕೆ ಕಾರ್ಯಾಗಾರ: ರಶ್ಮಿ ಎಂ.ಪಿ., ಆಯೋಜನೆ: ಲಯನ್ಸ್ ಕ್ಲಬ್ ಆಫ್ ಸಂಕಲ್ಪಾ, ಸ್ಥಳ: ಕುವೆಂಪು ರಂಗಮಂದಿರ, ಶೇಷಾದ್ರಿಪುರಂ ಸಂಜೆ ಕಾಲೇಜು, ಶೇಷಾದ್ರಿಪುರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ **nagaradalli_indu@prajavani.co.in**

ಆಚೆ ಇಣುಕುವಾಗ...

ಮಂಜುಶ್ರೀ ಎಂ. ಕಡಕೋಳ

ಅಪರೂಪಕ್ಕೆ ಸೀರೆ ಉಡುವ ಅವಳು ಅಂದು ತುಸು ಕಷ್ಟಪಟ್ಟೇ ರೇಷ್ಮೆ ಸೀರೆ ಉಟ್ಟಿದ್ದಳು. ಇಷ್ಟದ ವಿನ್ಯಾಸದ ರವಿಕೆಯನ್ನೂ ತೊಟ್ಟಿದ್ದಳು. ಗೃಹಪ್ರವೇಶಕ್ಕೆ ಬಂದಿದ್ದ ಅತಿಥಿಗಳನ್ನು ವಿಚಾರಿಸುತ್ತಲೇ, ಆಗಬೇಕಾದ ಕೆಲಸಗಳತ್ತಲೂ ಚಿತ್ತವಿಟ್ಟಿದ್ದಳು. ಅಪರೂಪಕ್ಕೆ ಬಂದಿದ್ದ ಗೆಳತಿ, ಇವಳನ್ನು ನೋಡಿದ್ದೇ ತಡ, 'ಅಯ್ಯೋ, ನಿನ್ನ ಬಾಯ್‌ಫ್ರೆಂಡ್ ಹೊರಗೆ ಬಂದಿದ್ದಾನೆ ನೋಡು!' ಅಂದಾಗ, ಇವಳು ಒಂದು ಸೆಕೆಂಡ್ ಕಾಣಬಾರದ್ದು ಕಂಡಿತು ಎಂಬಂತೆ ಹೊರಗೆ ತುಸು ಕಾಣುತ್ತಿದ್ದ ತನ್ನ ಬ್ರಾ ಸ್ಟ್ರಿಪ್ ಅನ್ನು ಒಳಗೆಳೆದುಕೊಂಡು ನಿಟ್ಟುಸಿರುಬಿಟ್ಟಳು.

***

ಕಚೇರಿಯಲ್ಲಿ ತನ್ಮಯಳಾಗಿ ಕೆಲಸ ಮಾಡುತ್ತಿದ್ದ ಅವಳ ಬಳಿ ಸಹೋದ್ಯೋಗಿ ಗೆಳತಿ ಬಂದು ಹಾಯ್ ಅಂದವಳೇ, ನಿಧಾನಕ್ಕೆ ಅವಳ ಹೆಗಲ ಮೇಲೆ ಕೈಹಾಕಿ, ಇಣುಕುತ್ತಿದ್ದ ಬ್ರಾ ಪಟ್ಟಿಯನ್ನು ಒಳಗೆ ತೂರಿಸಿದಳು.

***

ಕಾಲೇಜು ಸಹಪಾಠಿಯೊಬ್ಬ ಯುವತಿಯ ಹತ್ತಿರಕ್ಕೆ ಬಂದು, 'ನಿನ್ನ ಬ್ರಾ ಕಾಣಿಸ್ತಾ ಇದೆ ನೋಡು' ಎಂದು ಮೆಲ್ಲಗೆ ಉಸುರಿದ್ದ. ತಕ್ಷಣವೇ ನಕ್ಕ ಆ ಯುವತಿ, 'ಕಂಡರೆ ಕಾಣಲಿ ಬಿಡು. ಯಾಕೆ ತಲೆಕೆಡಿಸಿಕೊಳ್ಳುವೆ. ಅದೂ ಕೂಡಾ ಬಟ್ಟೆ ತಾನೇ' ಎಂದು ನುಡಿದಿದ್ದಳು.

***

ಹೆಣ್ಣುಮಕ್ಕಳು ಧರಿಸುವ ಬ್ರಾ ಪಟ್ಟಿಯೊಂದು ಹೊರಗೆ ಗೋಚರಿಸಿದಾಗ ಅದನ್ನು ಕಂಡವರೇಕೆ ಏನೋ ಆಗಿದೆ ಎಂಬಂತೆ ವರ್ತಿಸುತ್ತಾರೆ?. ಧರಿಸುವ ಉಡುಪಿನ ಭಾಗವೊಂದು ಹೊರಗೆ ಗೋಚರಿಸಿದಾಗ ಅದನ್ನು ಸಹಜ ಎಂಬಂತೆ ಸ್ವೀಕರಿಸಲು ಸಾಧ್ಯವಿಲ್ಲವೇ? ಎಂದು ಯೋಚಿಸಿದಾಗ ಹೆಣ್ಣುಮಕ್ಕಳ ಒಳಉಡುಪಿನ ಕುರಿತು ನಾವಿನ್ನೂ ಆರೋಗ್ಯಕರವಾಗಿ ಚಿಂತನೆ ನಡೆಸಲು ಸಾಧ್ಯವಾಗಿಲ್ಲವೆಂಬುದು ಅರಿವಿಗೆ ಬರುತ್ತದೆ.

ಆಕೆ ಗೃಹಿಣಿಯೇ ಆಗಿರಲಿ, ಅಧಿಕಾರಿಯೋ, ವಿಮಾನದ ಪೈಲಟೋ, ಗಗನಯಾತ್ರಿಯೋ ಆಗಿರಲಿ ಅವಳನ್ನು ದೇಹದ ಪರಿಧಿಯಾಚೆಗೆ ನೋಡುವ ದೃಷ್ಟಿಕೋನವಿನ್ನೂ ಪೂರ್ಣಪ್ರಮಾಣದಲ್ಲಿ ರೂಪುಗೊಂಡಿಲ್ಲವೆಂದೇ ಹೇಳಬಹುದು. ಮಹಿಳೆಯ ಎದೆಯನ್ನು ರಕ್ಷಿಸುವ, ಅವಳಲ್ಲೊಂದು ಆತ್ಮವಿಶ್ವಾಸವನ್ನು ತುಂಬುವ ಬ್ರಾ ಅನ್ನು ಒಂದು ಉಡುಪಾಗಿ ನೋಡುವ ಬದಲು ನಾನಾರ್ಥ, ಭಾವಗಳಲ್ಲೂ ಪರಿಭಾವಿಸಲಾಗುತ್ತಿದೆ.

ಅದರಲ್ಲೂ ಸಾರ್ವಜನಿಕ ಸ್ಥಳಗಳಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳು ಧರಿಸುವ ಉಡುಪುಗಳನ್ನು ಸಮಾಜ ತುಸು ಹೆಚ್ಚೇ ಗಮನಿಸುತ್ತಿರುತ್ತದೆ. ಅಂಥದ್ದರಲ್ಲಿ ಅವಳು ಧರಿಸುವ ಬ್ರಾ ಪಟ್ಟಿಯೊಂದು ಹೊರಗೆ ಇಣುಕಿದರೆ, ಏನೋ ಅಚಾತುರ್ಯವಾಯಿತು ಎನ್ನುವಂತೆಯೇ ಭಾವಿಸಲಾಗುತ್ತದೆ. ಆದರೆ, ಅದೇ ಪುರುಷನೊಬ್ಬನ ಒಳಉಡುಪು ತುಸು ಇಣುಕಿದರೂ, ಆತನ ಬೆನ್ನ ಕೆಳಗಿನ ಭಾಗ ತುಸು ಕಂಡರೂ ನಕ್ಕೂ ಸುಮ್ಮನಾಗುತ್ತೇವೆಯೇ ವಿನಾಃ ಅವಳ ಬ್ರಾ ಪಟ್ಟಿಯನ್ನು ಸರಿಪಡಿಸಿದಂತೆ ಸರಿಪಡಿಸಲು ಯಾರೂ ಮುಂದಾಗುವುದಿಲ್ಲ.

ಬ್ರಾ ಪಟ್ಟಿ ಕಾಣಿಸುವಿಕೆಯೇ ಕೆಲವೊಮ್ಮೆ ಆಕೆಯ ವ್ಯಕ್ತಿತ್ವ, ನಡತೆಯನ್ನೂ ಅಳೆಯುವ ಮಾನದಂಡವಾದ ಉದಾಹರಣೆಗಳು ಹೇರಳವಾಗಿವೆ. ಇದಕ್ಕೆ ನಮ್ಮ ಕಿರುತೆರೆ, ಸಿನಿಮಾಗಳ ಕೊಡುಗೆಯೇನೂ ಕಡಿಮೆಯಿಲ್ಲ. ಇಂದಿಗೂ ವೇಶ್ಯೆಯೊಬ್ಬಳನ್ನು ಚಿತ್ರಿಸುವಾಗ ಉದ್ದೇಶಪೂರ್ವಕವಾಗಿಯೇ ಅವಳ ಬ್ರಾ ಪಟ್ಟಿಯನ್ನು ಕಾಣಿಸುವಂತೆ ತೋರಿಸಲಾಗುತ್ತದೆ.

ಹೀಗಿರುವಾಗ ಅವಳು ತನ್ನ ಕಂಫರ್ಟ್‌ಗಾಗಿ ಧರಿಸುವ ಒಳಉಡುಪೊಂದು ತುಸು ಹೊರಗೆ ಇಣುಕಿದಾಗ, ಅವಳು ಮುಜುಗರಕ್ಕೊಳಗಾಗುವಂತೆ ಮಾಡುವಂಥ ಘಟನೆಗಳು ಹೊಸತೇನಲ್ಲ. ಕೆಲ ಹೆಣ್ಣುಮಕ್ಕಳೂ ಬ್ರಾ ಪಟ್ಟಿ ಹೊರಗೆ ಕಂಡಾಕ್ಷಣ ವಿಪರೀತ ಮುಜುಗರ ಅನುಭವಿಸುವುದುಂಟು. ಏನೋ ಆಗಬಾರದ್ದು ಆಯಿತು ಎಂಬಂತೆ ಮಂಕಾಗುವುದೂ ಇದೆ. ತಲೆಮಾರಿನಿಂದ ತಲೆಮಾರಿಗೆ ಯೋಚನೆ ಭಿನ್ನವಾಗಿರುವಂತೆ ಇದೂ ಕಾಲಕ್ರಮೇಣ ಬದಲಾಗಬಹುದು.

ಹೆಣ್ಣನ್ನು ತನ್ನ ಅಧೀನದಲ್ಲಿಟ್ಟುಕೊಳ್ಳ ಬಯಸುವ ಪುರುಷ ಪ್ರಧಾನ ಮನಃಸ್ಥಿತಿಯೇ ಇದಕ್ಕೆ ಕಾರಣ ಎಂದು ಒಂದು ಸಾಲಿನಲ್ಲಿ ಹೇಳಿಬಿಡಹುದು. ಹೆಣ್ಣನ್ನು ಮಾನಸಿಕ ನೆಲೆಗಿಂತಲೂ ದೈಹಿಕ ನೆಲೆಯಲ್ಲೇ ನೋಡುವ ದೃಷ್ಟಿಕೋನವನ್ನು ಪ್ರಜ್ಞಾಪೂರ್ವವಾಗಿಯೇ ಬದಲಿಸಿಕೊಳ್ಳುವ ಅಗತ್ಯವಿದೆ.

ಇಂದಿಗೂ ಹೆಣ್ಣುಮಕ್ಕಳು ತಮ್ಮ ಒಳಉಡುಪುಗಳನ್ನು ರಾಜಾರೋಷವಾಗಿ ಮನೆಯ ಬಾಲ್ಕನಿಯಲ್ಲಿ ಚೆನ್ನಾಗಿ ಬೀಳುವ ಬಿಸಿಲಿನಲ್ಲಿ ಒಣಗಿ ಹಾಕಲೂ ಹಿಂಜರಿಯುವಂಥ ವಾತಾವರಣವಿದೆ.

ಕೆಲ ಹೆಣ್ಣುಮಕ್ಕಳು ಇಂದಿಗೂ ತಮ್ಮ ಒಳಉಡುಪುಗಳನ್ನು ತಮ್ಮ ಮನದೊಳಗಿನ ಬೇಗುದಿಯನ್ನು ಬಚ್ಚಿಟ್ಟುಕೊಂಡಂತೆಯೇ ಬಚ್ಚಿಟ್ಟುಕೊಳ್ಳುವುದುಂಟು. ಮುಟ್ಟಾದ ಬಟ್ಟೆಗಳನ್ನು ಗುಟ್ಟಾಗಿ ಒಗೆದು ಅಷ್ಟೇ ಗುಟ್ಟಾಗಿ ಒಣಗಿಸಿದಂತೆ ಇಂದಿಗೂ ಅನೇಕ ಹೆಣ್ಣುಮಕ್ಕಳು ತಮ್ಮ ಒಳಉಡುಪುಗಳನ್ನು ಕನಿಷ್ಠ ಸರಿಯಾಗಿ ಬಿಚ್ಚಿಯೂ ಒಣಗಿಸಲಾರರು. ಅಲ್ಲೆಲ್ಲೋ ಮೂಲೆಯಲ್ಲೋ, ಸಂದಿಯಲ್ಲೋ ಇಲ್ಲವೇ ಒಂದು ಬಟ್ಟೆಯೊಳಗೇ ಕಾಣದಂತೆ ಅದರ ಮೇಲೆ ಬಿಸಿಲು ಅಷ್ಟಾಗಿ ಬೀಳದಂತೆ ಮುಚ್ಚಟೆಯಾಗಿ ಒಣಗಿಸುವುದುಂಟು.

ಹೀಗಿರುವಾಗ ಇನ್ನು ಒಳ ಉಡುಪುಗಳ ಬಗ್ಗೆ ಚರ್ಚೆಯಿರಲಿ, ಅದರ ಮಾತು ಆಡುವುದೂ ಕಷ್ಟ. ಇದಕ್ಕೆ ಸೆಡ್ಡು ಹೊಡೆಯುವಂತೆ ಇತ್ತೀಚೆಗೆ ಫೇಸ್‌ಬುಕ್, ಇನ್‌ಸ್ಟಾಗ್ರಾಂ ರೀಲ್‌ಗಳಲ್ಲಿ ಹೆಣ್ಣುಮಕ್ಕಳೇ ಎಂಥ ಬ್ರಾ ಆಯ್ಕೆ ಮಾಡಿಕೊಳ್ಳಬೇಕು, ಯಾವ ಬ್ರ್ಯಾಂಡ್ ಚೆನ್ನಾಗಿದೆ, ಯಾವ ಅಳತೆ ಸೂಕ್ತ ಇತ್ಯಾದಿಗಳ ಕುರಿತು ಮಾಹಿತಿ, ಜಾಹೀರಾತು ನೀಡುತ್ತಿರುವುದು ಒಳ್ಳೆಯ ಬೆಳವಣಿಗೆಯಂತೂ ಹೌದು.

ಬ್ರಾ ಪಟ್ಟಿ ಹೊರಗೆ ಕಾಣಿಸುವ ಕುರಿತು ಕೆಲವರು ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಆಧುನಿಕ ಮನೋಭಾವ ಹೆಣ್ಣುಮಕ್ಕಳು ಪಟ್ಟಿ ಕಂಡರೂ ಅದು ಸಹಜವೆಂಬಂತೆ ಇರುತ್ತಾರೆ. ಎಷ್ಟೋ ಉಡುಪುಗಳಿಗೆ ಬ್ರಾ ಪಟ್ಟಿಗಿಂತಲೂ ಸಣ್ಣ ಪಟ್ಟಿಗಳಿರುವುದುಂಟು. ಅಂತೆಯೇ ತುಸು ಹೊಕ್ಕಳು ಕಾಣುವಂತೆ ಧರಿಸುವ ಘಾಗ್ರಾ ಚೋಲಿ, ಲಂಗದಾವಣಿ, ಸ್ಲೀವ್ ಲೆಸ್ ಟಾಪ್, ಬ್ಲೌಸ್‌ಗಳನ್ನು ಧರಿಸುವವರನ್ನು ಕಣ್ಣರಳಿಸಿ ನೋಡುವವರು ಬ್ರಾ ಪಟ್ಟಿ ಕಂಡಾಕ್ಷಣ ಏನೋ ಆಯಿತೆಂಬಂತೆ ವರ್ತಿಸುವುದೂ ಉಂಟು. ಬ್ರಾ ಪಟ್ಟಿ ಹೊರಗೆ ಕಂಡರೆ ಅವಳ ಅಂತರಂಗವೇ ಬಹಿರಂಗವಾದಂತೆ ಅರ್ಥೈಸುವುದೂ ಇದೆ. ಅವಳನ್ನು ಆ ಪಟ್ಟಿಯಿಂದಾಚೆಗೆ ನೋಡುವ ಯೋಚನೆಗಳನ್ನು ಇನ್ನಾದರೂ ರೂಢಿಸಿಕೊಳ್ಳುವ, ಅವಳೂ ತನ್ನ ಸಹಜೀವಿ ಎಂಬುದನ್ನು ಅರ್ಥೈಸಿಕೊಳ್ಳುವ ಚಿಂತನೆಗಳನ್ನು ಸಹಜವಾಗಿ ರೂಢಿಸಿಕೊಳ್ಳುವ ಅಗತ್ಯವಿದೆ. ಅಷ್ಟಕ್ಕೂ ಬ್ರಾ ಪಟ್ಟಿ ಕಂಡರೆ ಕಾಣಲಿ ಬಿಡಿ! ಅದು ನೋಡುವವರ ಸಮಸ್ಯೆ. ಧರಿಸಿದವರದ್ದಲ್ಲ.

ಆರೋಗ್ಯಕರ ಚರ್ಮಕ್ಕೆ

ಡಾ. ಪ್ರಾಚಿ ಚಂದ್ರ

ಕಾಳಜಿ

ಹೊಳೆಯುವ ಚರ್ಮ ಯಾರಿಗೆ ತಾನೇ ಬೇಡ. ದೇಹದ ಒಳಗಿನ ಆರೋಗ್ಯವು ಹೊರಗಿನ ಚರ್ಮದಲ್ಲಿ ವ್ಯಕ್ತವಾಗುತ್ತದೆ. ಹಾಗಾಗಿ ಹೊಳೆಯುವ ಮೈಕಾಂತಿ ಬೇಕಾದರೆ ದೇಹದ ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ.

ಚರ್ಮ ಕಳೆಗುಂದಲು ಮೊಡವೆ, ಕಲೆ, ವೈಟ್‌ಹೆಡ್, ಬ್ಲ್ಯಾಕ್‌ಹೆಡ್‌ಗಳು ಪ್ರಮುಖ ಕಾರಣಗಳು. ಇದರ ಜತೆಗೆ ದೂಳು, ಮಾಲಿನ್ಯಯುಕ್ತ ಪರಿಸರದಿಂದಲೂ ಚರ್ಮ ಹಾನಿಯಾಗಬಹುದು. ಇದರ ಜತೆಗೆ ಅವೈಜ್ಞಾನಿಕ ಆಹಾರಪದ್ಧತಿಯಿಂದ, ಜೀವನಶೈಲಿಯಿಂದ ಹಲವು ಬಗೆಯ ಚರ್ಮದ ಸಮಸ್ಯೆಗಳು ಉಂಟಾಗಬಹುದು.

ಸಮತೋಲಿತ ಹಾಗೂ ಸತ್ವಯುತ ಆಹಾರವು ಚರ್ಮವನ್ನು ನಳನಳಿಸುವಂತೆ ಮಾಡಲು ನೆರವಾಗುತ್ತದೆ.

ಮೊಡವೆಯಾಗದಂತೆ ಏನು ಮಾಡಬಹುದು?

ಹೈನು ಉತ್ಪನ್ನಗಳ ಸೇವನೆಯಿಂದ ಇದರಲ್ಲಿರುವ ಗೈಸೆಮಿಕ್ಸ್ ಕಾರ್ಬೋಹೈಡ್ರೇಟ್‌ಗಳು ಹಾರ್ಮೋನ್‌ಗಳ ಮೇಲೆ ಪ್ರಭಾವ ಬೀರುತ್ತವೆ. ಇದು ತೈಲಗ್ರಂಥಿ ಹಾಗೂ ಮೇದೋಗ್ರಂಥಿಗಳ ಸ್ರಾವವನ್ನು ಹೆಚ್ಚಿಸುವ ಸಾಧ್ಯತೆ ಇರುತ್ತದೆ. ಹಾಗಾಗಿ ಸಂಕೀರ್ಣ ಕಾರ್ಬೋಹೈಡ್ರೇಟ್ ಹೊಂದಿರುವ ಮತ್ತು ಕಡಿಮೆ ಗ್ಲೈಸೆಮಿಕ್ ಅಂಶಗಳಿರುವ ಆಹಾರವನ್ನು ಹೇರಳವಾಗಿ ಸೇವಿಸುವುದರಿಂದ ಮೊಡವೆ ಉಂಟಾಗುವುದನ್ನು ತಪ್ಪಿಸಬಹುದು. ಹಣ್ಣುಗಳು, ತರಕಾರಿಗಳು, ಧಾನ್ಯಗಳು, ದ್ವಿದಳ ಧಾನ್ಯಗಳಂಥ ಆಹಾರಗಳಲ್ಲಿ ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳು ಹೇರಳವಾಗಿವೆ. ಇನ್ಸುಲಿನ್ ಹಾರ್ಮೋನ್ (IGF-1) ಹೆಚ್ಚಿನ ಮಟ್ಟದಲ್ಲಿ ಬಿಡುಗಡೆಯಾದರೆ, ತೈಲ ಗ್ರಂಥಿ ಹಾಗೂ ಮೇದೋಗ್ರಂಥಿಗಳಲ್ಲಿ ಸ್ರಾವ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಇದರಿಂದ ಚರ್ಮದಲ್ಲಿ ಮೊಡವೆ, ಕಲೆ ಉಂಟಾಗಬಹುದು.

ಇನ್ನು, ಚರ್ಮಕ್ಕೂ ಕರುಳಿನ ಆರೋಗ್ಯಕ್ಕೂ ನಂಟಿದೆ. ಕರುಳಿನ ಮೈಕ್ರೋಬಯೋಟಾದಿಂದ ಉತ್ಪತ್ತಿಯಾಗುವ ಮೆಟಾಬಾಲೈಟ್‌ಗಳು ಚರ್ಮದ ಮೇಲೆ ಪರಿಣಾಮ ಬೀರುವುದಲ್ಲದೇ ಮೊಡವೆ ಉಂಟಾಗುವಂತೆ ಮಾಡಬಹುದು. ಧಾನ್ಯಗಳು ಮತ್ತು ದ್ವಿದಳ ಧಾನ್ಯಗಳು, ಅಗಸೆಬೀಜಗಳು ಉತ್ತಮ ಜೀರ್ಣಕ್ರಿಯೆಗೆ ಸಹಕಾರಿಯಾಗಿದ್ದು, ನಾರಿನಂಶ ಇರುವ ಆಹಾರ ಸೇವನೆಯಿಂದ ದೇಹದ ತ್ಯಾಜ್ಯವನ್ನು ಸುಲಭವಾಗಿ ಹೊರಹಾಕಬಹುದು. ಒಮೆಗಾ-3 ಕೊಬ್ಬಿನಾಮ್ಲಗಳ ಸೇವನೆಯಿಂದ ಇನ್ಸುಲಿನ್ ಹಾರ್ಮೋನ್ ನಿಯಂತ್ರಣದಲ್ಲಿರುತ್ತದೆ. ಇದರಿಂದ ಚರ್ಮದಲ್ಲಿ ಊರಿಯೂತ ಮತ್ತು ಮೊಡವೆ, ಗಾಯಗಳು ಕಡಿಮೆಯಾಗುತ್ತವೆ. ಹಾಲನ್ನು ಅಧಿಕ ಪ್ರಮಾಣದಲ್ಲಿ ಸೇವಿಸುವುದರಿಂದ ತೈಲಗ್ರಂಥಿಗಳು ಹೆಚ್ಚಿನ ಪ್ರಮಾಣದಲ್ಲಿ ಚರ್ಮದಲ್ಲಿ ಜಿಡ್ಡನ್ನು ಉತ್ಪಾದಿಸುತ್ತವೆ. ರಕ್ತಶುದ್ಧೀಕರಣಕ್ಕೆ ಸುಲಭ ತಂತ್ರವೆಂದರೆ ಸಾಕಷ್ಟು ನೀರು ಕುಡಿಯುವುದು. ಅತಿ ಹೆಚ್ಚು ನೀರಿನ ಸೇವನೆಯಿಂದ ಚರ್ಮ ತೇವಯುಕ್ತವಾಗಿರುತ್ತದೆ. ವಿಷಯುಕ್ತ ಅಂಶಗಳನ್ನು ದೇಹದಿಂದ ಹೊರಹಾಕಲು ನೀರು ಸಹಾಯ ಮಾಡುತ್ತದೆ.

ಗಿಡಮೂಲಿಕೆ ಬೆರೆಸಿ ಮಾಡಿದ ನೀರಿನ ಸೇವನೆ ಉತ್ತಮ. ನಿಂಬೆ, ಚಿಯಾ ಬೀಜಗಳೊಂದಿಗೆ ಬೆಚ್ಚಗಿನ ನೀರನ್ನು ಆಗಾಗ್ಗೆ ಸೇವಿಸಿ. ಪುದೀನಾ ಮತ್ತು ಸೌತೆಕಾಯಿ ಬೆರೆಸಿದ ನೀರು, ಶಂಖಪುಷ್ಪ ಬೆರೆಸಿದ ನೀರನ್ನೂ ಸೇವಿಸುವುದು ಚರ್ಮದ ಹಿತದೃಷ್ಟಿಯಿಂದ ಒಳ್ಳೆಯದು.

ಪದೇ ಪದೇ ಚರ್ಮದಲ್ಲಿ ಅಲರ್ಜಿ ಉಂಟಾಗುತ್ತಿದ್ದರೆ, ಸಾಧ್ಯವಾದಷ್ಟು ಜಂಕ್‌ಫುಡ್‌ಗಳಿಂದ ದೂರವಿರಲು ಪ್ರಯತ್ನಿಸಿ. ಸಂಸ್ಕರಿಸಿದ ಸಿಹಿತಿಂಡಿಗಳು, ಕರಿದ ಪದಾರ್ಥಗಳು, ಹಾಲು ಹಾಗೂ ಇತರೆ ಹೈನು ಉತ್ಪನ್ನಗಳ ಸೇವನೆಯಿಂದ ದೂರ ಉಳಿಯುವುದು ಒಳಿತು. ಮದ್ಯ ಹಾಗೂ ಮಸಾಲೆಯುಕ್ತ ಆಹಾರ, ಅತಿಯಾದ ಉಪ್ಪಿನ ಬಳಕೆಯೂ ಮೊಡವೆಗಳು ಉಂಟಾಗುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ.



ಆಹಾರ ಹೀಗಿರಲಿ

- ಕಡಿಮೆ ಗ್ಲುಕೋಸ್ ಅಂಶವನ್ನು ಹೊಂದಿರುವ ಆಹಾರವನ್ನು ಆಯ್ಕೆ ಮಾಡಿಕೊಳ್ಳಿ. ಆಹಾರದಲ್ಲಿ ಎ, ಸಿ, ಡಿ ಹಾಗೂ ಬಿ ಮತ್ತು ಇ ವಿಟಮಿನ್‌ಗಳು ಇರುವಂತೆ ನೋಡಿಕೊಳ್ಳಿ. ಸೆಲೆನಿಯಮ್, ಸತು, ಬಯೋಟಿನ್ ಮತ್ತು ಕರ್ಕ್ಯುಮಿನ್ ಅಂಶ ಇರುವಂತೆ ನೋಡಿಕೊಳ್ಳಿ. ಪ್ರೋಬಯಾಟಿಕ್‌ಗಳು ಮತ್ತು ಒಮೆಗಾ-3 ಕೊಬ್ಬಿನಾಮ್ಲಗಳ ಸೇವನೆ ಹೆಚ್ಚಿರಲಿ.
- ಮೊಟ್ಟೆಯ ಹಳದಿ ಲೋಳೆ, ಮೀನು, ಯೀಸ್ಟ್ ಮತ್ತು ಬೀಟಾ-ಕ್ಯಾರೋಟಿನ್ ಅಂಶವಿರುವ ಕ್ಯಾರೆಟ್, ಕುಂಬಳಕಾಯಿ, ಮೆಣಸು, ಕಲ್ಲಂಗಡಿ, ಪಪ್ಪಾಯಿ, ಏಪ್ರಿಕಾಟ್ ಹಣ್ಣುಗಳು, ಹಸಿರು ಎಲೆಗಳು ಹಾಗೂ ತರಕಾರಿಯನ್ನು ಯಥೇಚ್ಛವಾಗಿ ಸೇವಿಸಿ. ಟೊಮೆಟೊ, ವಾಲ್‌ನಟ್, ಕುಂಬಳಕಾಯಿ, ಸೂರ್ಯಕಾಂತಿ ಬೀಜಗಳ ಸೇವನೆ ಚರ್ಮದ ಆರೋಗ್ಯಕ್ಕೆ ಉತ್ತಮ.

ಶಿವರಾತ್ರಿಗೆ ಸಿಹಿ

ಶಿವರಾತ್ರಿ ಹಬ್ಬ ಸಮೀಪಿಸುತ್ತಿದೆ. ಶಿವನಿಗೆ ನೈವೇದ್ಯ ಅರ್ಪಿಸಲು ಸರಳವಾದ ಸಿಹಿ ತಿನಿಸುಗಳ ರೆಸಿಪಿಯನ್ನು ಕೆ.ವಿ.ರಾಜಲಕ್ಷ್ಮಿ ನೀಡಿದ್ದಾರೆ. ಜತೆಗೆ ಉಪವಾಸ ಇರುವವರಿಗೆ ಸಿರಿಧಾನ್ಯದ ಗಂಜಿಯೂ ಉತ್ತಮ ಆಯ್ಕೆಯಾಗಬಲ್ಲದು. ಒಮ್ಮೆ ಮಾಡಿ ನೋಡಿ.

ರಸಾಸ್ವಾದ

ಅವಲಕ್ಕಿ ಉಂಡೆ

ಬೇಕಾಗುವ ಸಾಮಗ್ರಿ: ತೆಳು ಅವಲಕ್ಕಿ 1 ಕಪ್, ಗೋಡಂಬಿ 8, ದ್ರಾಕ್ಷಿ 10, ತೆಂಗಿನ ತುರಿ 2 ಚಮಚ, ಬೆಲ್ಲದಪುಡಿ 3/4 ಕಪ್, ಹಾಲು 1/4 ಕಪ್.

ಮಾಡುವ ವಿಧಾನ: ಅವಲಕ್ಕಿ, ದ್ರಾಕ್ಷಿ, ಗೋಡಂಬಿಯನ್ನು ಮಿಕ್ಸಿಯಲ್ಲಿ ಪುಡಿ ಮಾಡಿಕೊಂಡು ನಂತರ ತೆಂಗಿನತುರಿ ಮತ್ತು ಬೆಲ್ಲದಪುಡಿ ಸೇರಿಸಿ ಮತ್ತೊಂದು ಸುತ್ತು ತಿರುಗಿಸಿ, ಮಿಕ್ಸಿಂಗ್ ಬೌಲ್‌ಗೆ ಹಾಕಿಕೊಳ್ಳಿ. ಮಿಶ್ರಣವನ್ನು ಮತ್ತೊಮ್ಮೆ ಕಲೆಸಿ, ಅಗತ್ಯ ಬಿದ್ದಷ್ಟು ಹಾಲು ಸೇರಿಸಿಕೊಂಡು, ಸಣ್ಣ ಸಣ್ಣ ಉಂಡೆಗಳನ್ನು ಕಟ್ಟಿ.

ಗೋಧಿ ತಂಬಿಟ್ಟು

ಬೇಕಾಗುವ ಸಾಮಗ್ರಿ: ಗೋಧಿ ಹಿಟ್ಟು 1 ಕಪ್, ತೆಂಗಿನತುರಿ 2 ಚಮಚ, ಬೆಲ್ಲದ ಪುಡಿ 1 ಕಪ್, ಏಲಕ್ಕಿ ಪುಡಿ 1 ಚಮಚ, ತುಪ್ಪ 2 ಚಮಚ. **ಮಾಡುವ ವಿಧಾನ:** ಮೊದಲಿಗೆ ತುಪ್ಪದಲ್ಲಿ ಗೋಧಿಹಿಟ್ಟನ್ನು ಒಳ್ಳೆಯ ಪರಿಮಳ ಬರುವವರೆಗೆ ಹುರಿದುಕೊಳ್ಳಿ. ನಂತರ ಬಾಣಲೆಯಲ್ಲಿ ಬೆಲ್ಲದ ಪುಡಿಗೆ ಸ್ವಲ್ಪ ನೀರು ಸೇರಿಸಿ, ಸಣ್ಣ ಉರಿಯಲ್ಲಿಡಿ. ಬೆಲ್ಲ ಕರಗಿ ನೊರೆ ಬರುವಾಗ ಹುರಿದ ಗೋಧಿಹಿಟ್ಟು ಮತ್ತು ತೆಂಗಿನತುರಿಯನ್ನು ಸೇರಿಸಿ ಕೈಯಾಡುತ್ತಿರಿ. ಮಿಶ್ರಣ ಬೆಂದು ಹದವಾದಾಗ ಏಲಕ್ಕಿ ಪುಡಿ, ಸ್ವಲ್ಪ ತುಪ್ಪ ಸೇರಿಸಿ ಮಗುಚಿ, ಬೇರೆ ತಟ್ಟೆಗೆ ವರ್ಗಾಯಿಸಿ. ಬಿಸಿಯಿರುವಾಗಲೇ ಸಣ್ಣ ಸಣ್ಣ ಉಂಡೆಗಳನ್ನು ಕಟ್ಟಿ.

ರಾಗಿ ಸಿಹಿಬಿಲ್ಲೆ

ಬೇಕಾಗುವ ಸಾಮಗ್ರಿ: ರಾಗಿ ಹುರಿಹಿಟ್ಟು 1 ಕಪ್, ಒಣಕೊಬ್ಬರಿಪುಡಿ 1 ಚಮಚ, ಬಾದಾಮಿ ತುರಿ 2 ಚಮಚ, ಬೆಲ್ಲದ ಪುಡಿ 3/4 ಕಪ್,

ಮಾಡುವ ವಿಧಾನ: ಹುರಿಹಿಟ್ಟು, ಕೊಬ್ಬರಿಪುಡಿ ಮತ್ತು ಬೆಲ್ಲವನ್ನು ಸೇರಿಸಿ ಸ್ವಲ್ಪ ಸ್ವಲ್ಪವೇ ನೀರು ಹಾಕಿಕೊಂಡು ಗಟ್ಟಿಯಾಗಿ ಕಲೆಸಿಕೊಂಡು ಒಂದು ತಟ್ಟೆಯ ಮೇಲೆ ಸಮವಾಗಿ ಲಟ್ಟಿಸಿ ಬಾದಾಮಿ ತುರಿಯನ್ನು ಹರಡಿ. ನಂತರ ಬೇಕಾದ ಆಕಾರಕ್ಕೆ ಚಿಕ್ಕ ಚಿಕ್ಕ ಬಿಲ್ಲೆಗಳನ್ನಾಗಿ ಕತ್ತರಿಸಿ.

ಸಿರಿಧಾನ್ಯ ಗಂಜಿ

ಒತ್ತಡದ ಬದುಕಿನಲ್ಲಿ ನಮ್ಮ ಆಹಾರ ಪದ್ಧತಿಯೂ ಬದಲಾಗಿದೆ. ನಮ್ಮ ಆಹಾರದಲ್ಲಿ ಆರೋಗ್ಯಕ್ಕಿಂತ, ನಾಲಿಗೆಯನ್ನು ತೃಪ್ತಿ ಪಡಿಸುವ ರುಚಿಯೇ ಹೆಚ್ಚಿರುತ್ತದೆ. ನಿತ್ಯದ ಊಟದಲ್ಲಿ ಸಿರಿಧಾನ್ಯಗಳನ್ನು ಬಳಸುವುದು ಉತ್ತಮ ಎಂದು ನಮಗೂ ಗೊತ್ತಿದ್ದರೂ ಎಲ್ಲ ಧಾನ್ಯವನ್ನು ಬಳಸಿ ತಯಾರಾಗುವ ಪದಾರ್ಥ ಯಾವುದು? ದಿನೇ ದಿನೇ ಮಾಡಲು ಕಷ್ಟವಲ್ಲವೇ? ಎಂಬ ಪ್ರಶ್ನೆಗಳು ಮೂಡುತ್ತವೆ. ಇದಕ್ಕೆಲ್ಲ ಉತ್ತರ ನೀಡುತ್ತದೆ ಸಿರಿಧಾನ್ಯ ಗಂಜಿ ಪುಡಿ. ಈ ಪುಡಿಯನ್ನು ಒಮ್ಮೆ ತಯಾರಿಸಿ ಇಟ್ಟುಕೊಂಡರೆ ಸಾಕು, ನಿತ್ಯ ಗಂಜಿ ಮಾಡಿಕೊಂಡು ಕುಡಿಯಬಹುದು.

ಬೇಕಾಗುವ ಸಾಮಗ್ರಿಗಳು: ರಾಗಿ (ಅರ್ಧ ಕೆ.ಜಿ), ಹೆಸರು ಕಾಳು, ಮಡಿಕೆ ಕಾಳು, ಹುರುಳಿ ಕಾಳು, ಅಲಸಂದೆ ಕಾಳು, ಕಡಲೆಕಾಳು, ಬಟಾಣಿ ಕಾಳು, ಉದ್ದಿನ ಕಾಳು, ಗೋಧಿ, ಜೋಳ, ಅಕ್ಕಿ, ಬಾರ್ಲಿ, ನವಣೆ, ಸಾಮೆ, ಉದಲು, ಅರ್ಕ್, ಕೋರ್ಲ್, ಸೋಯಾಕಾಳು (200 ಗ್ರಾಂ), ಮೆಂತ್ಯೆ ಕಾಳು (50 ಗ್ರಾಂ), ಜೀರಿಗೆ (50 ಗ್ರಾಂ).

ಪುಡಿ ಮಾಡುವ ವಿಧಾನ: ಹೆಸರು, ಮಡಿಕೆ, ಹುರುಳಿ, ಅಲಸಂದೆ, ಕಡಲೆ, ಬಟಾಣಿ ಕಾಳುಗಳನ್ನು ನೀರಿನಲ್ಲಿ ಪ್ರತ್ಯೇಕವಾಗಿ ತೊಳೆದುಕೊಂಡು ನೆನೆ ಹಾಕಬೇಕು. ಕಾಳುಗಳು ನೀರಿನಲ್ಲಿ ನೆನೆದ ನಂತರ ಒಂದು ಒಣ ಬಟ್ಟೆಯಲ್ಲಿ ಕಟ್ಟಿ ಇಡಬೇಕು. ಕಾಳುಗಳು ಮೊಳಕೆಯೊಡೆದ ಮೇಲೆ ಎರಡು ದಿನಗಳವರೆಗೆ ನೆರಳಿನಲ್ಲಿ ಒಣಗಿಸಬೇಕು. ತರುವಾಯ ಬಿಸಿಲಿನಲ್ಲಿ ಎರಡು ದಿನ ಒಣಗಲು ಬಿಡಬೇಕು.

ನಂತರ ಅಕ್ಕಿ, ಬಾರ್ಲಿ, ನವಣೆ, ಸಾಮೆ, ಉದಲು, ಅರ್ಕ್, ಕೋರ್ಲ್, ಸೋಯಾಕಾಳು, ಮೆಂತ್ಯೆ, ಜೀರಿಗೆ ಕಾಳುಗಳನ್ನು ತೊಳೆದು ಒಣಗಿಸಿದ ನಂತರ ಪ್ರತ್ಯೇಕವಾಗಿ ಎಲ್ಲಾ ಕಾಳುಗಳನ್ನು ಹುರಿಯಬೇಕು.

ಹುರಿದ ಕಾಳುಗಳನ್ನು ಸ್ವಲ್ಪ ಆರಲು ಬಿಡಬೇಕು. ನಂತರ ಹಿಟ್ಟಿನ ಗಿರಣಿಯಲ್ಲಿ ನುಣ್ಣಗೆ ಹಿಟ್ಟು ಮಾಡಿಸಬೇಕು. ಈ ಪುಡಿಯನ್ನು ಒಂದು ಡಬ್ಬಿಯಲ್ಲಿ ಶೇಖರಣೆ ಮಾಡಬೇಕು. ಇದು ಒಂದು ವರ್ಷ ಸಂಗ್ರಹ ಯೋಗ್ಯ.

ಗಂಜಿ ಮಾಡುವ ವಿಧಾನ: ಒಂದು ಪಾತ್ರೆಯಲ್ಲಿ ಒಂದು ಗ್ಲಾಸ್ ನೀರು ಹಾಕಿ ಸ್ವಲ್ಪ ಉಪ್ಪು ಅಥವಾ ಬೆಲ್ಲ ಹಾಕಿ ಕುದಿಯಲು ಇಡಬೇಕು. ನೀರು ಚೆನ್ನಾಗಿ ಕುದಿಯುವವರೆಗೆ ಒಂದು ಲೋಟ ನೀರಿಗೆ ಒಂದು ಚಮಚ ಗಂಜಿ ಪುಡಿಯನ್ನು ಬೆರೆಸಿ ಗಂಟಾಗದಂತೆ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಿ. ನಂತರ ಅದನ್ನು ಕುದಿಯುತ್ತಿರುವ ನೀರಿನಲ್ಲಿ ಹಾಕಿ ಗಂಟುಗಳಾಗದಂತೆ ಚೆನ್ನಾಗಿ ಚಮಚದಿಂದ ತಿರುಗಿಸಿ. ಒಂದು ಕುದಿಯ ನಂತರ ಪಾತ್ರೆಯನ್ನು ಒಲೆಯ ಮೇಲಿಂದ ಕೆಳಗಿಳಿಸಿ, ಉಪ್ಪಿನ ಗಂಜಿಗೆ ಆರಿದ ನಂತರ ಎರಡು ಲೋಟ ಮಜ್ಜಿಗೆ ಸೇರಿಸಿ ಸವಿಯಬಹುದು. ಬೆಲ್ಲದ ಗಂಜಿಗೆ ಹಾಲು ಬೆರೆಸಿ ಕುಡಿಯಬಹುದು.

ಅಂಡಾಶಯದಲ್ಲಿ ಗುಳ್ಳೆಗಳಿದ್ದರೆ ತೊಂದರೆಯೇ?

ಸ್ಪಂದನ

ಡಾ. ವೀಣಾ ಎಸ್. ಭಟ್

- **ಮೇಡಂ, ನನಗೆ 24 ವರ್ಷ. ಮದುವೆಯಾಗಿಲ್ಲ. ಆದರೆ, ಪಿಸಿಓಡಿ ಸಮಸ್ಯೆ ಇದೆ. ದೇಹತೂಕ ಕಡಿಮೆ ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದೀನಿ. ಮಾಸಿಕ ಋತುಸ್ರಾವ ನಿಯಮಿತವಾಗಿದೆ. ತಿಂಗಳ ಹಿಂದೆ ಸ್ಕ್ಯಾನಿಂಗ್ ಮಾಡಿಸಿದಾಗ ಬಲ ಅಂಡಾಶಯದಲ್ಲಿ ನೀರಿನ ಗುಳ್ಳೆಗಳಿವೆ (ಸಿಸ್ಟ್) ಎಂದು ತಿಳಿಯಿತು. ಚಿಕಿತ್ಸೆಯಲ್ಲಿದ್ದೇನೆ. ಆದರೂ ಗುಳ್ಳೆಗಳು ಮತ್ತೆ ಮತ್ತೆ ಉತ್ಪತ್ತಿಯಾಗುತ್ತಿವೆ. ಯಾಕೆ ಹೀಗಾಗುತ್ತದೆ. ಮುಂದೆ ಮದುವೆಯಾದ ಮೇಲೆ ಮಕ್ಕಳಾಗಲು ಏನಾದರೂ ತೊಂದರೆ ಇದೆಯೇ?**

ಪಿಸಿಓಡಿ ಎಂದರೆ ಪಾಲಿಸಿಸ್ಟಿಕ್ ಒವೆರಿಯನ್ ಡಿಸೀಸ್. ಇದು ಇತ್ತೀಚೆಗೆ ಮಹಿಳೆಯರಲ್ಲಿ ಹೆಚ್ಚಾಗಿ ಕಂಡುಬರುತ್ತಿರುವ ಆರೋಗ್ಯ ಸಮಸ್ಯೆ. ಇದಕ್ಕೆ ಕಾರಣ ಆಧುನಿಕ ಜೀವನಶೈಲಿ. ಈ ಸಮಸ್ಯೆ ಇರುವವರಲ್ಲಿ ಹಾರ್ಮೋನ್‌ಗಳ ಸ್ರವಿಸುವಿಕೆಯಲ್ಲಿ ಏರುಪೇರಾಗಬಹುದು. ಬೊಜ್ಜು ಇರುವವರಲ್ಲಿ ಈ ಸಮಸ್ಯೆ ಅಧಿಕ. ಹಾಗೆಂದು ಕಡಿಮೆ ತೂಕ ಅಥವಾ ಸಮತೂಕ ಇರುವವರಲ್ಲಿಯೂ ಕಂಡುಬರಹುದು. ಸ್ವಲ್ಪಮಟ್ಟಿಗೆ ಆನುವಂಶೀಯತೆಯೂ ಕಾರಣವಾಗಿರುತ್ತದೆ. ಶೇ 50ರಷ್ಟು ಹೆಣ್ಣುಮಕ್ಕಳಿಗೆ ಮಕ್ಕಳಾಗದೇ ಇರಲು ಈ ಪಿಸಿಓಡಿ ಸಮಸ್ಯೆಯೂ ಮುಖ್ಯ ಕಾರಣವಾಗಿದೆ. ಆದರೆ ನೀವು ಚಿಂತಿಸುವುದು ಬೇಡ. ಈಗಾಗಲೇ ತೂಕ ಕಡಿಮೆ ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದೀರಿ. ಮತ್ತು ಋತುಚಕ್ರ ನಿಯಮಿತವಾಗಿ ಆಗುತ್ತದೆ ಎಂದು ಹೇಳಿದ್ದೀರಿ. ಅಂದರೆ ಅಂಡಾಶಯದಿಂದ ಅಂಡೋತ್ಪತ್ತಿಯಾಗುವ ಪ್ರಕ್ರಿಯೆ ಸರಿಯಾಗಿದೆ ಎಂದು ಅರ್ಥ. ಪಿಸಿಓಡಿ ಇರುವ ಕೆಲವರಲ್ಲಿ ಹಾರ್ಮೋನುಗಳ ಏರುಪೇರಿನಿಂದ ಮೂರು ನಾಲ್ಕು ತಿಂಗಳಿಗೊಮ್ಮೆ ಮುಟ್ಟಾಗಿ ಒಂದೇ ಸಮನೆ ಹಲವು ದಿನಗಳವರೆಗೆ ರಕ್ತಸ್ರಾವ ಆಗುತ್ತದೆ. ಜತೆಗೆ ಪುರುಷರ ಹಾರ್ಮೋನ್ ಆಂಡ್ರೋಜನ್ ಹೆಚ್ಚಳವಾಗುವುದರಿಂದ ಗಂಡಸರ ಹಾಗೆ ಗಡ್ಡ, ಮೀಸೆ, ಎದೆ, ಕಾಲುಗಳ ಭಾಗದಲ್ಲಿ ಕೂದಲು ಹೆಚ್ಚುತ್ತದೆ (ಹರ್ಸೂಟಿಸಮ್).

ಕೋಶಿಕೆಯಿಂದ ಅಂಡೋತ್ಪತ್ತಿಯಾದ ಮೇಲೆ ಅದರಲ್ಲಿರುವ ದ್ರವ ಹೀರಲ್ಪಡದೆ ಅಂಡಾಶಯದಲ್ಲಿ ನೀರಿನ ಗುಳ್ಳೆಗಳು ಬೆಳೆಯುತ್ತವೆ. ಅದು ತಾನಾಗಿಯೇ ನಾಲ್ಕೈದು ತಿಂಗಳಲ್ಲಿ ಕರಗಿ ಹೋಗುತ್ತವೆ. ಕೆಲವೊಮ್ಮೆ ಮರುಕಳಿಸಬಹುದು. ಅಪರೂಪಕ್ಕೆ ತಿರುಚಿಕೊಂಡು ಹೊಟ್ಟೆ ನೋವು ಉಂಟುಮಾಡಬಹುದು.

ಪಿಸಿಓಡಿಯಿಂದ ಬಂಜೆತನದ ಸಮಸ್ಯೆಯಷ್ಟೆ ಅಲ್ಲ, ಭವಿಷ್ಯದಲ್ಲಿ ಹಲವು ದೀರ್ಘಾವಧಿ ಗಂಭೀರ ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು.

ಮಧುಮೇಹ, ಹೃದಯ, ರಕ್ತನಾಳದ ತೊಂದರೆಗಳು, ನಿದ್ರೆ ಹಾಗೂ ಉಸಿರಾಟದ ತೊಂದರೆಗಳು, ಗರ್ಭಕೋಶದ ಒಳಪದರದ ಎಂಡೋಮೆಟ್ರಿಯಲ್ ಕ್ಯಾನ್ಸರ್. ಹಾಗಾಗಿ ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು.

ಇನ್ಸುಲಿನ್ ಹಾರ್ಮೋನ್ ಅನ್ನು ಸಮಸ್ಥಿತಿಯಲ್ಲಿಡುವ ಆಹಾರಗಳನ್ನು ಸೇವಿಸಬೇಕು. ಜಂಕ್‌ಫುಡ್, ಕರಿದ ಆಹಾರ, ಹೈನುಪದಾರ್ಥಗಳು ಶರ್ಕರಪಿಷ್ಟಗಳಿಂದ ದೂರವಿರಿ. ಆದಷ್ಟು ಹಸಿರು ಸೊಪ್ಪು, ತರಕಾರಿಗಳು, ದ್ವಿದಳ ಧಾನ್ಯಗಳಾದ ಸೋಯಾ ಬೀನ್ಸ್, ಬೇಳೆಕಾಳುಗಳನ್ನು ಸೇವಿಸಿ. ಬಾದಾಮಿ, ವಾಲ್‌ನಟ್, ಒಣಹಣ್ಣು, ಅವಕಾಡೊ, ಕಿತ್ತಳೆಹಣ್ಣು, ತಾಜಾ ಹಣ್ಣುಗಳನ್ನು ಸೇವಿಸಿ. ನಾರಿನಾಂಶವುಳ್ಳ ಆಹಾರ, ಅಂದರೆ ಇಡೀ ಜೋಳ, ಗೋಧಿ, ಕೆಂಪಕ್ಕಿ, ಬಾರ್ಲಿ, ಅಗಸೆಬೀಜ, ಉತ್ತಮ ಮೀನಿನ ಸೇವನೆ ಒಳ್ಳೆಯದು. ಕನಿಷ್ಠ ಮೂರು ಲೀಟರ್ ನೀರನ್ನಾದರೂ ಕುಡಿಯಬೇಕು. ರಾತ್ರಿ 6 ರಿಂದ 8 ತಾಸು ನಿದ್ದೆ ಅಗತ್ಯ. ನಿತ್ಯ ಕನಿಷ್ಠ ಅರ್ಧ ಗಂಟೆಯಾದರೂ ವ್ಯಾಯಾಮ, ನಡಿಗೆ, ಈಜು, ಏರೋಬಿಕ್ಸ್, ಯೋಗ, ಪ್ರಾಣಾಯಾಮ ಮಾಡಿ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಶಾಸಕರಿಗೆ ನಿಗಮ– ಮಂಡಳಿ ಅಧ್ಯಕ್ಷತೆ: ಪ್ರತ್ಯುತ್ತರ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ ಹೈಕೋರ್ಟ್

ಸಂಪುಟ ದರ್ಜೆ ಸ್ಥಾನಮಾನ ಪ್ರಶ್ನಿಸಿದ ಪಿಐಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: '48 ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ನೀಡಿ ವಿವಿಧ ನಿಗಮ-ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದು ಸಂವಿಧಾನದ 164 (1ಎ)ನೇ ವಿಧಿಯ ಸ್ಪಷ್ಟ ಉಲ್ಲಂಘನೆಯಾಗಿದ್ದು, ಬೊಕ್ಕಸಕ್ಕೆ ಅನಗತ್ಯ ಹೊರೆಯಾಗಿರುವ ಈ ಹುದ್ದೆಗಳನ್ನು ರದ್ದುಗೊಳಿಸಬೇಕು' ಎಂದು ಆಕ್ಷೇಪಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಪ್ರತ್ಯುತ್ತರ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ 'ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ'ಯ ಮುಖ್ಯ ಎಂಜಿನಿಯರ್ ಆದ ಕೋಣನ ಕುಂಟೆ ಕ್ರಾಸ್ ನಿವಾಸಿ ಸೂರಿ ಪಾಯಲ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಜೆ.ಸಾಯಿ ದೀಪಕ್ ಸುದೀರ್ಘ ವಾದ ಮಂಡಿಸಿ, 'ಸರ್ಕಾರದ ಈ ಕ್ರಮದಿಂದ ಬೊಕ್ಕಸಕ್ಕೆ ಅನಗತ್ಯ ಹೊರೆಯಾಗಿದೆ. ಅಷ್ಟೇ ಅಲ್ಲದೆ, ಪ್ರತಿವಾದಿಗಳಾಗಿರುವ ಶಾಸಕರು ಲಾಭದಾಯಕ ಹುದ್ದೆಯನ್ನು ಹೊಂದಿದ್ದು ಅವರೆಲ್ಲಾ ತಮ್ಮ ಅಧಿಕಾರದಲ್ಲಿ ಮುಂದುವರಿಯುವುದು ಸಂವಿಧಾನದ ನಿಯಮಗಳಿಗೆ ವಿರುದ್ಧವಾಗಿದೆ' ಎಂದು ಪ್ರತಿಪಾದಿಸಿದರು.

'ಇದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಅರ್ಜಿದಾರರು ಕೆಎಸ್‌ಪಿಸಿಬಿಯಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದು, ಮಂಡಳಿಯ ಅಧ್ಯಕ್ಷ ಸ್ಥಾನಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಆದರೆ, ಅಧ್ಯಕ್ಷ ಸ್ಥಾನ ದೊರೆತಿಲ್ಲ. ಈ ಕಾರಣದಿಂದ ಮತ್ತು ರಾಜಕೀಯ ದುರುದ್ದೇಶದಿಂದ ಈ ಅರ್ಜಿ ಸಲ್ಲಿಸಿದ್ದಾರೆ. ಆದ್ದರಿಂದ, ಈ ಅರ್ಜಿ ವಿಚಾರಣೆಗೆ ಯೋಗ್ಯವಲ್ಲ' ಎಂದು ಆಕ್ಷೇಪಿಸಿದರು.

ಸುದೀರ್ಘ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಅರ್ಜಿಯಲ್ಲಿ ಸಾಂವಿಧಾನಿಕ ಮತ್ತು ಪ್ರಜಾಪ್ರಭುತ್ವದ ಪ್ರಾಮುಖ್ಯಕ್ಕೆ ಸಂಬಂಧಿಸಿದ ಅಂಶಗಳಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಆದ್ದರಿಂದ, ಇದನ್ನು ವಿಶದವಾಗಿ ವಿಚಾರಣೆ ನಡೆಸಿ ಅರ್ಜಿದಾರರು ಎತ್ತಿರುವ ಎಲ್ಲ ಅಂಶಗಳಿಗೂ ಪರಿಹಾರ ಕಂಡುಕೊಳ್ಳಬೇಕಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ರಾಜ್ಯ ಸರ್ಕಾರ ಸಮಗ್ರ ಪ್ರತ್ಯುತ್ತರ ನೀಡುವಂತೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಸಂಪುಟ ದರ್ಜೆ ಸ್ಥಾನಮಾನ ಹೊಂದಿರುವ ಪ್ರತಿವಾದಿ ಶಾಸಕರುಗಳಿಗೆ ಹ್ಯಾಂಡ್ ಸಮನ್ಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ಮಾರ್ಚ್ 27ಕ್ಕೆ ಮುಂದೂಡಿತು. ಅಂತೆಯೇ ಪ್ರತಿವಾದಿಗಳು ಮಾರ್ಚ್ 18ರೊಳಗೆ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿತು.

ಕೋರಿಕೆ: 'ಈ ನೇಮಕಾತಿ ಸಂವಿಧಾನದ 102 ಮತ್ತು 192ನೇ ವಿಧಿಗೆ ಮತ್ತು ಪ್ರಜಾಪ್ರತಿನಿಧಿ ಕಾಯ್ದೆ–1951ಕ್ಕೆ ವಿರುದ್ಧವಾಗಿದೆ. ಅಂತೆಯೇ, ಸುಪ್ರೀಂ ಕೋರ್ಟ್‌ನ ಮಾನದಂಡಗಳಿಗೂ ವ್ಯತಿರಿಕ್ತವಾಗಿದೆ. ಲಾಭದಾಯಕ ಹುದ್ದೆಗಳೆಂದು ಪರಿಗಣಿಸಿ ಈ ನೇಮಕಾತಿಗಳನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕು. ನೇಮಕಗೊಂಡಿರುವವರನ್ನು ತಕ್ಷಣವೇ ಆಯಾ ಸ್ಥಾನಗಳಿಂದ ತೆಗೆದುಹಾಕಬೇಕು. ಅವರಿಗೆ ನೀಡಿರುವ ಎಲ್ಲ ಸೌಲಭ್ಯಗಳನ್ನೂ ಹಿಂಪಡೆಯಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಯಾರೆಲ್ಲಾ ಪ್ರತಿವಾದಿ ಶಾಸಕರು?

ಹಂಪನಗೌಡ ಬಾದರ್ಲಿ, ಅಪ್ಪಾಜಿ ಸಿ.ಎಸ್.ನಾಡಗೌಡ, ಭರಮಗೌಡ ಕಾಗೆ, ಎಚ್.ವೈ.ಮೇಟಿ, ಎಸ್.ಆರ್.ಶ್ರೀನಿವಾಸ್ (ವಾಸು), ಬಸವರಾಜ ಶಿವಣ್ಣವರ, ಬಿ.ಜಿ.ಗೋವಿಂದಪ್ಪ, ಎಚ್.ಸಿ.ಬಾಲಕೃಷ್ಣ, ಜಿ.ಎಸ್. ಪಾಟೀಲ, ಎನ್.ಎ.ಹ್ಯಾರಿಸ್, ಮಹಾಂತೇಶ್ ಕೌಜಲಗಿ, ಎಸ್.ಸುಬ್ಬಾರೆಡ್ಡಿ, ಜೆ.ಟಿ. ಪಾಟೀಲ, ರಾಜಾ ವೇಣುಗೋಪಾಲ ನಾಯಕ್, ಬಿ.ಕೆ.ಸಂಗಮೇಶ್ವರ, ಕೆ.ಎಂ. ಶಿವಲಿಂಗೇಗೌಡ, ಅಬ್ಬಯ್ಯ ಪ್ರಸಾದ್, ಗೋಪಾಲಕೃಷ್ಣ ಬೇಳೂರು, ಎಸ್.ಎನ್. ನಾರಾಯಣಸ್ವಾಮಿ, ಟಿ.ರಘುಮೂರ್ತಿ, ಎ.ಬಿ.ರಮೇಶ ಬಂಡಿಸಿದ್ದೇಗೌಡ, ಬಿ.ಶಿವಣ್ಣ, ಎನ್.ಎ.ಸುಬ್ಬಾರೆಡ್ಡಿ, ವಿನಯ ಕುಲಕರ್ಣಿ, ಅನಿಲ ಚಿಕ್ಕಮಾದು, ಬಸನಗೌಡ ದದ್ದಲ್, ಕನೀಜ್ ಫಾತಿಮಾ, ಕಾಶಪ್ಪನವರ ವಿಜಯಾನಂದ ಶಿವಶಂಕರಪ್ಪ, ಟಿ.ಡಿ.ರಾಜೇಗೌಡ, ಎಂ.ಆರ್.ಮಂಜುನಾಥ, ಸತೀಶ್ ಸೈಲ್, ಶರತ್ ಬಚ್ಚೇಗೌಡ, ಜಿ.ಎಸ್.ಗಣೇಶ್, ಬಸನಗೌಡ ತುರುವಿಹಾಳ, ಟಿ.ಬಿ.ಜಯಚಂದ್ರ, ಎ.ಎಸ್.ಪೊನ್ನಣ್ಣ, ಅಜಯ್ ಸಿಂಗ್, ಆರ್.ವಿ.ದೇಶಪಾಂಡೆ, ಬಿ.ಆರ್.ಪಾಟೀಲ, ನಜೀರ್ ಅಹಮದ್, ಕೆ.ಗೋವಿಂದ ರಾಜು ಮತ್ತು ಪ್ರಕಾಶ್ ಹುಕ್ಕೇರಿ.

ಸಿ.ಎಂ.ಗೆ ಪತ್ರ ಬರೆದ ಸ್ವಾಮೀಜಿ

ಸಿದ್ಧಲಿಂಗ ಸ್ವಾಮೀಜಿ

ತುಮಕೂರು: ಕೆಪಿಎಸ್‌ಸಿ ನಡೆಸಿದ ಕೆಎಎಸ್ ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ಬರೆದ ಗ್ರಾಮೀಣ ಭಾಗದ ಅಭ್ಯರ್ಥಿಗಳಿಗೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಕೋರಿ ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಪ್ರಶ್ನೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವಾಗ ಆದ ತಪ್ಪಿನಿಂದ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದಿರುವ ಗ್ರಾಮೀಣ ಭಾಗದ ಅಭ್ಯರ್ಥಿಗಳಿಗೆ ತೊಂದರೆಯಾಗಿದೆ. ಮುಂದಿನ ದಿನಗಳಲ್ಲಿ ಇಂತಹವರಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ಅನುವಾದದಲ್ಲಿ ತಜ್ಞರಾದವರು ಹಾಗೂ ಕನ್ನಡ ಭಾಷೆಯಲ್ಲಿ ಪ್ರಾವೀಣ್ಯ ಹೊಂದಿದ ತಜ್ಞರ ಸಮಿತಿ ರಚಿಸಿ ಗ್ರಾಮೀಣ ವಿದ್ಯಾರ್ಥಿಗಳ ಹಿತ ಕಾಪಾಡಬೇಕು ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ. ಪ್ರಶ್ನೆಪತ್ರಿಕೆಯಲ್ಲಿ ಅನೇಕ ದೋಷಗಳಿವೆ. ಪ್ರಶ್ನೆಗಳು ಅರ್ಥವಾಗದೆ ಅನುತ್ತೀರ್ಣರಾಗಿ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಇಂತಹ ಪರಿಸ್ಥಿತಿ ಮುಂದುವರಿದರೆ ಗ್ರಾಮೀಣ ಮಕ್ಕಳ ಭವಿಷ್ಯ ಹಾಳಾಗಲಿದೆ ಎಂದು ಪತ್ರದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

ದಿಬ್ಬದ, ಉಕ್ಕಲಿಗೆ ರನ್ನ ಹಳಗನ್ನಡ ಪ್ರಶಸ್ತಿ

ಬಾಗಲಕೋಟೆ: ಕವಿ ಚಕ್ರವರ್ತಿ ರನ್ನ ಪ್ರತಿಷ್ಠಾನವು ವಿಶ್ರಾಂತ ಕುಲಪತಿ ಪ್ರೊ.ಶಾಂತಿನಾಥ ದಿಬ್ಬದ, ನಿವೃತ್ತ ಶಿಕ್ಷಕ ಶಂಕರಯ್ಯ ಉಕ್ಕಲಿ ಅವರಿಗೆ 'ರನ್ನ ಹಳಗನ್ನಡ' ಪ್ರಶಸ್ತಿ ಘೋಷಿಸಿದೆ. ಪ್ರಶಸ್ತಿ ತಲಾ ₹ 1 ಲಕ್ಷ ನಗದು ಒಳಗೊಂಡಿದೆ.

ಪ್ರೊ.ಶಾಂತಿನಾಥ ದಿಬ್ಬದ

ಶಂಕರಯ್ಯ ಉಕ್ಕಲಿ

'ಮುಧೋಳದಲ್ಲಿ ಫೆ. 24ರಂದು ನಡೆಯುವ ರನ್ನ ವೈಭವದ ಸಮಾರೋಪದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದೇ ಸಂದರ್ಭದಲ್ಲಿ 'ಶ್ರೀಮುಕುಟ' ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಗುವುದು' ಎಂದು ಪ್ರತಿಷ್ಠಾನದ ಅಧ್ಯಕ್ಷೆ ಜಾನಕಿ ಕೆ.ಎಂ ತಿಳಿಸಿದ್ದಾರೆ.

ರದ್ದಾಗದ ವರ್ಗಾವಣೆ: ಉಪ ನೋಂದಣಾಧಿಕಾರಿಗಳ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಗಾವಣೆ ಆದೇಶವನ್ನು ಕೋರ್ಟ್ ರದ್ದು ಮಾಡಿದ್ದರೂ ಮೂಲ ಸ್ಥಳಗಳಲ್ಲಿ ಕೆಲಸ ಮಾಡಲು ಅವಕಾಶ ನೀಡುತ್ತಿಲ್ಲ ಎಂದು ಆರೋಪಿಸಿ ಉಪ ನೋಂದಣಾಧಿಕಾರಿಗಳು ರಾಜ್ಯ ನೋಂದಣಿ ಮಹಾಪರಿವೀಕ್ಷಕರ ಕಚೇರಿಯಲ್ಲಿ ಅಹೋರಾತ್ರಿ ಧರಣಿ ಆರಂಭಿಸಿದ್ದಾರೆ.

ಬೆಂಗಳೂರು ಹಾಗೂ ರಾಜ್ಯದ 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ದೀರ್ಘಕಾಲದಿಂದ ಠಿಕಾಣಿ ಹೂಡಿದ್ದ ಉಪ ನೋಂದಣಾಧಿಕಾರಿಗಳು ಹಾಗೂ ಉಪ ನೋಂದಣಾಧಿಕಾರಿ ಕಚೇರಿಯ ಇತರೆ ಸಿಬ್ಬಂದಿ ಎತ್ತಂಗಡಿ ಮಾಡಲು ಸರ್ಕಾರ ನಿರ್ಧರಿಸಿತ್ತು.

ಬಿಎಂಆರ್‌ಡಿಎ ಹಾಗೂ ಮಹಾನಗರ ಪಾಲಿಕೆ ಕೇಂದ್ರ ಸ್ಥಾನಗಳ ಹುದ್ದೆಗಳನ್ನು ಕೌನ್ಸಿಲಿಂಗ್ ಮೂಲಕ ಆಯ್ಕೆ ಮಾಡಿಕೊಳ್ಳಲು ಷರತ್ತು ವಿಧಿಸಿತ್ತು. ಇದನ್ನು ಪ್ರಶ್ನಿಸಿ ಉಪ ನೋಂದಣಾಧಿಕಾರಿಗಳು ಹಾಗೂ ಇತರ ಸಿಬ್ಬಂದಿ ಕೆಎಟಿ ಹಾಗೂ ಹೈಕೋರ್ಟ್ ಮೆಟ್ಟಿಲೇರಿದ್ದರು.

'ಸರ್ಕಾರದ ವರ್ಗಾವಣೆ ಆದೇಶವನ್ನು ಕೋರ್ಟ್ ರದ್ದು ಮಾಡಿದೆ. ಆದೇಶಕ್ಕೂ ಮೊದಲು ನಾವು ಕೆಲಸ ಮಾಡುತ್ತಿದ್ದ ಕಚೇರಿಗಳಿಗೆ ತೆರಳಿದ್ದೆವು. ಆದರೆ, ಆ ಕಚೇರಿಯಲ್ಲಿ ಕೆಲಸ ಮಾಡಲು ಲಾಗಿನ್ ನೀಡದ ಕಾರಣ ಕೆಲಸ ಮಾಡಲು ಆಗುತ್ತಿಲ್ಲ. ಹಾಗಾಗಿ, ಧರಣಿ ನಡೆಸುತ್ತಿದ್ದೇವೆ' ಎಂದು ಉಪ ನೋಂದಣಾಧಿಕಾರಿಗಳು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ನಿರ್ದೇಶಕ ಎಸ್.ಉಮೇಶ್ ನಿಧನ

ಎಸ್.ಉಮೇಶ್

ಬೆಂಗಳೂರು: 'ಅವಳೇ ನನ್ನ ಹೆಂಡ್ತಿ', 'ತುಂಬಿದ ಮನೆ' ಸಿನಿಮಾ ಖ್ಯಾತಿಯ ನಿರ್ದೇಶಕ ಎಸ್.ಉಮೇಶ್ (68) ಕಿಡ್ನಿ ವೈಫಲ್ಯದಿಂದಾಗಿ ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಮೂವರು ಮಕ್ಕಳು ಇದ್ದಾರೆ. ಸಂಜೆ ಬನಶಂಕರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಿತು.

ಕಾಶಿನಾಥ್ ನಟನೆಯ 'ಅವಳೇ ನನ್ನ ಹೆಂಡ್ತಿ' ಚಿತ್ರದ ಕಥೆ ಬರೆದವರು ಉಮೇಶ್. ಕೆ.ಪ್ರಭಾಕರ್ ಜೊತೆಗೂಡಿ ಈ ಸಿನಿಮಾ ಮಾಡಿದ್ದರು. ತಮಿಳಿಗೂ ಇದು ರಿಮೇಕ್ ಆಗಿತ್ತು. 'ಅವನೇ ನನ್ನ ಗಂಡ', 'ನಂಬಿದರೆ ನಂಬಿ ಬಿಟ್ರೆ ಬಿಡಿ', 'ಸಿಡಿದೆದ್ದ ಗಂಡು', 'ಪ್ರೇಮ ಪರೀಕ್ಷೆ', 'ರಾಜಾ ಕೆಂಪು ರೋಜಾ', 'ಎಲ್ಲರಂಥಲ್ಲ ನನ್ನ ಗಂಡ', 'ದಾಯಾದಿ', 'ಅವಳೇ ನನ್ನ ಹುಡುಗಿ', 'ಮದುವೆ ದಿಬ್ಬಣ' ಮುಂತಾದ ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ.

ಬೆಂಗಳೂರಿನವರಾದ ಉಮೇಶ್, 1973ರಲ್ಲಿ ಸಂಕಲನಕಾರರಾಗಿ ಚಿತ್ರರಂಗ ಪ್ರವೇಶಿಸಿದ್ದರು.

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ.,
KMF
ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ ಬಿ ರಸ್ತೆ, ವಿದ್ಯಾಗಿರಿ ಅಂಚೆ, ಧಾರವಾಡ–580004
☎:-0836-2467603, 2468380 E-mail : dharwarnin@gmail.com

IFT No. KMF/2024-25/IND1220/CALL-2 Date:-21-02-2025

ಇ–ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ., ಧಾರವಾಡವು (ಧಾಮುಲ್) ಈ ಕೆಳಕಂಡ ಅಳತೆಯುಳ್ಳ ರಚನಾತ್ಮಕ ಫ್ರೇಮ್ ಕೆಲಸದ ವಿನ್ಯಾಸ, ಪೂರೈಕೆ, ಫ್ಯಾಬ್ರಿಕೇಶನ್ ಮತ್ತು ನಿರ್ಮಾಣ ಸೇರಿದಂತೆ ಮಾಡ್ಯುಲರ್ ನಂದಿನಿ ಮಿಲ್ಕ ಪಾರ್ಲರ್‌ಗಳನ್ನು ಧಾರವಾಡ, ಗದಗ & ಉತ್ತರಕನ್ನಡದ ಮೂರು ಜಿಲ್ಲೆಗಳಲ್ಲಿ ವಿವಿಧ ಸ್ಥಳಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಸ್ಥಳಗಳು ಆಯ್ಕೆಯಾಗಿ ಅಂತಿಮಗೊಂಡ ಮೇಲೆ ಟೆಂಡರ ದಾಖಲಾತಿಗಳಲ್ಲಿ ನಮೂದಿಸಲಾದ ತಾಂತ್ರಿಕ ತಪಶೀಲುಪಟ್ಟಿ ಪ್ರಕಾರ ನಿರ್ವಹಿಸಿ ಕ್ರಮವಿಡಲು ಅರ್ಹ ಟೆಂಡರುದಾರರಿಂದ ಇ–ಟೆಂಡರ ಆಹ್ವಾನಿಸಲಾಗಿರುತ್ತದೆ.

ಕ್ರ ಸಂ.	ವಿವರ	ಪ್ರಮಾಣ	ಇಎಂಡಿ ಮೊತ್ತ (ರೂ.ಗಳಲ್ಲಿ)
1)	Modular Nandini Milk Parlor 8' x 8' x 8.5' (L x B x H)	09 Nos.	90,000-00

ಇ–ಟೆಂಡರ ಪ್ರೊಸೆಸಿಂಗ್ ಶುಲ್ಕ (ಮರು ಪಾವತಿಸಲಾಗದ) ಇ–ಪೋರ್ಟಲ್ ನಿಯಮಾನುಸಾರ ಟೆಂಡರ ದಾಖಲಾತಿಯಲ್ಲಿ ನಮೂದಿಸಿದಂತೆ ಪಾವತಿಸಬಹುದಾಗಿದೆ. ಟೆಂಡರ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಲ್ಲಿ ಲಾಗ್‌ಇನ್ ಆಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಅಥವಾ ಸಹಾಯವಾಣಿ ಸಂಖ್ಯೆ:– 080–46010000 / 68948777, ಇ–ಮೇಲ್:–support@eprochelpdsk.com ರ ಮೂಲಕ ಸಂಪರ್ಕಿಸಬಹುದು ಮತ್ತು ಉಳಿದ ಮಾಹಿತಿಯನ್ನು ಟೆಂಡರ ದಾಖಲಾತಿಯಲ್ಲಿ ನೋಡಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮುಲ್ ಯಾವುದೇ ರೀತಿ ಜವಾಬ್ದಾರರಲ್ಲ.

1	ಇ–ಪೋರ್ಟಲ್ ಜಾಲತಾಣದಿಂದ ಟೆಂಡರ ದಾಖಲಾತಿ ಲಭ್ಯವಾಗುವ ದಿನಾಂಕ	ದಿ:–22.02.2025 ರಿಂದ ದಿ:–10.03.2025 ರ ಸಂಜೆ 4 ಗಂಟೆಗಿಂತ ಮೊದಲು
2	ಇ–ಟೆಂಡರ ಸಲ್ಲಿಸುವ ಕೊನೆಯ ದಿನಾಂಕ & ವೇಳೆ	10.03.2025, ಸಂಜೆ 04.00 ರವರೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	11.03.2025, ಸಂಜೆ 04.30 ರ ನಂತರ
4	ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ	14.03.2025, ಬೆಳಿಗ್ಗೆ 11.00 ರ ನಂತರ

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಅಧೀಕ್ಷಕ ಅಭಿಯಂತರರು, ಕೇಂದ್ರ ಕಛೇರಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–10.
ದೂರವಾಣಿ: 080–23407011–25, ಇ–ಮೇಲ್:kssidcho@gmail.com / chiefengineerkssidc@gmail.com, ವೆಬ್‌ಸೈಟ್: www.kssidc.co.in

ಸಂಖ್ಯೆ:ಇಎನ್‌ಜಿ:ಅ.ಅ:ಇಪಿ–97:ಎಸ್.ಟಿ.ಪಿ:ದೊ.ಪುರ:2024–25 ದಿನಾಂಕ:19.02.2025

ಟೆಂಡರ್ ಪ್ರಕಟಣೆ
(ದ್ವಿ ಟೆಂಡರ್ ದಾಖಲೆ ಪದ್ಧತಿ)
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಅಧೀಕ್ಷಕ ಅಭಿಯಂತರರು ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಕರ್ನಾಟಕ PWD, CPWD ಯಿಂದ ನೊಂದಾಯಿಸಲ್ಪಟ್ಟ ಪರವಾನಗಿಯುಳ್ಳ, ಸೂಚಿಸಿದ ಆರ್ಥಿಕ ಸಾಮರ್ಥ್ಯ ಹಾಗೂ ತಾಂತ್ರಿಕ ಮಾನವ ಸಂಪನ್ಮೂಲವುಳ್ಳ ಮತ್ತು ಕಾಮಗಾರಿ ಕೆಲಸಗಳ ಅನುಭವವಿರುವ ಅರ್ಹ ಗುತ್ತಿಗೆದಾರರು (ಸಿವಿಲ್) ಇವರಿಂದ ಐಟಂವಾರು ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿ (TWO TENDER DOCUMENT SYSTEM) ಪ್ರಕಾರ ಟೆಂಡರ್ ಕರೆಯಲಾಗಿದೆ. ಈ ಬಗ್ಗೆ ಟೆಂಡರ್ ಪ್ರಕಟಣೆಯನ್ನು ಸಂಖ್ಯೆ: ಇಎನ್‌ಜಿ:ಅ.ಅ: ಇಪಿ–97:ಎಸ್.ಟಿ.ಪಿ:ದೊ.ಪುರ:2024–25 ದಿ: 19–02–2025 ರಂತೆ ಹೊರಡಿಸಲಾಗಿರುತ್ತದೆ.

ಕ್ರ. ಸಂ.	ಕಾಮಗಾರಿಗಳ ವಿವರಗಳು	ಅಂದಾಜು ಯೋಜನಾ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ)
1	Construction of 100 KLD Sewage Treatment Plant at Industrial Estate Dodda-ballapura, Bengaluru Rural District.	78.95	1.58

ಟೆಂಡರ್ ದಸ್ತಾವೇಜುಗಳನ್ನು (RFP Documents) ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in (Karnataka State Small Industries Development Corporation Limited) ಮುಖಾಂತರ ದಿನಾಂಕ : 20.02.2025 ರ 17.00 ಗಂಟೆಯಿಂದ ಪಡೆದುಕೊಳ್ಳಬಹುದು.

ಟೆಂಡರ್ ನ ಕಾಲಮಿತಿ ವಿವರಗಳು :
- ಟೆಂಡರ್ ದಾಖಲೆಗಳು ಲಭ್ಯವಾಗುವ ದಿನಾಂಕ: 20.02.2025 ರ ಸಂಜೆ 17.00 ಗಂಟೆಯಿಂದ.
- ಅಧೀಕ್ಷಕ ಅಭಿಯಂತರರ ಕಛೇರಿಯಲ್ಲಿ ಪೂರ್ವಭಾವಿ ಸಭೆ ದಿನಾಂಕ: 25.02.2025 ರ ಮಧ್ಯಾಹ್ನ 12.00 ಗಂಟೆಗೆ.
- ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 07.03.2025 ರ 17.00 ಗಂಟೆಗೆ.
- ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.03.2025ರ 17.00 ಗಂಟೆಯ ನಂತರ.
- ಆರ್ಥಿಕ ಬಿಡ್‌ಗಳನ್ನು ದಿನಾಂಕ 14.03.2025 ಅಥವಾ ತಾಂತ್ರಿಕ ಬಿಡ್‌ಗಳ ಪ್ರಸ್ತಾವನೆ ಅನುಮೋದನೆ ನಂತರ ಕೆಪಿಪಿ ಪೋರ್ಟಲ್ ಮುಖಾಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/–
ಅಧೀಕ್ಷಕ ಅಭಿಯಂತರರು
ವಾಸಾಸಂಇ/ವಾಪ್ರ/ಜಿಎ/5250/2024–25

ಸಾರಿಗೆ ಇಲಾಖೆ
ಸಾರಿಗೆ ಆಯುಕ್ತರ ಕಛೇರಿ, ಕರ್ನಾಟಕ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಬಿಎಂಟಿಸಿ ಸಂಕೀರ್ಣ, ಶಾಂತಿನಗರ, ಬೆಂಗಳೂರು.
ಸಂ: ಸಾಆ/ಪೀಕ–3/ಪಿಆರ್–160/2024–25 ದಿನಾಂಕ: 19.02.2025

ಇ–ಟೆಂಡರ್ ಪ್ರಕಟಣೆ

Cluster-4 ಸ್ಥಳಗಳಲ್ಲಿ ಸ್ವಯಂಚಾಲಿತ ಪರೀಕ್ಷಾ ಕೇಂದ್ರ (Automatic Testing Station) ಗಳನ್ನು BOO & DBFOT ಮಾದರಿಯಲ್ಲಿ ಸ್ಥಾಪಿಸಿ, ನಿರ್ವಹಿಸುವ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ಟೆಂಡರ್‌ನ ವಿವರಗಳನ್ನು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ kppp.karnataka.gov.in ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯ ದೂರವಾಣಿ ಸಂಖ್ಯೆ: +91–8046010000/+91–8068948777 ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 04–04–2025 ರ ಅಪರಾಹ್ನ 4.00 ಗಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ: 080–22235176 ಯನ್ನು ಸಂಪರ್ಕಿಸಬಹುದು.

Tender No. TD/2024-25/SE0080
ಸಹಿ/–
ಸಾರಿಗೆ ಆಯುಕ್ತರ ಪರವಾಗಿ, ಬೆಂಗಳೂರು
ವಾಸಾಸಂಇ/ವಾ.ಪ್ರ/5233/ಎಂಎಎ/24–25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)–1/2024–25/9013–30 ದಿನಾಂಕ: 21.02.2025

ಟೆಂಡರ್ ಹಿಂಪಡೆಯುವಿಕೆ

ವಿಷಯ: ಪ್ರಕಟಿಸಲಾಗಿರುವ ಟೆಂಡರನ್ನು ಹಿಂಪಡೆಯುವ ಬಗ್ಗೆ
ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)–1/2024–25/8496–513 ದಿನಾಂಕ: 04.02.2025.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ 11 ಸಂಖ್ಯೆಗಳ 66/11ಕೆವಿ ಉಪಕೇಂದ್ರದ ಸ್ಥಾಪನೆಗೆ ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಕಾರಣಗಳಿಂದ ಕಾಮಗಾರಿಯ ಟೆಂಡರ್‌ಗಳನ್ನು ಹಿಂಪಡೆಯಲಾಗಿರುತ್ತದೆ.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್),
ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು–560009. ದೂರವಾಣಿ: 080–22274744

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹಾವೇರಿ

ಇ–ಟೆಂಡರ್ ಪ್ರಕಟಣೆ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.ಕಾನಿಇಂ/ಪಿಬಿ/ಗುತ್ತಿಗೆ/4059/2024–25/4647/ ದಿನಾಂಕ: 20–02–2025

ದಿನಾಂಕ: 20–02–2025ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಒಂದು (1) ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 21–04–2025 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.kppp.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– (ಎನ್.ಎನ್. ಪಾಟೀಲ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
dipr/hvr/dipo/605/2024-25

20436400088813,20436400074870,20436400084234,20436400085967,20436400080133,20436400075133,20436400086429,20436400080968,20436100006891,
20436400050417,20436400087351,20436400080935,20436400054039,20436400060309,20436400076909,20436400086072, 20436400060317.

Br. Kagwad: Athani Road, Kagwad PO, Taluk-Athani, Belgaum- 591 223 Ph no. 08339264628 :-
14806400024372,14806400024257,14806400024331,14806400023945,14806400024265,14806400024273,14806400024299,14806400022525,14806400019174,
14806400020230,14806400024232,14806400021188.

Br.Khanapur: Room No. A4, Mangirish Building, Opp. Municipal Bus Stand, Khanapur, Belgaum Dist, Karnataka, Belgaum, Karnataka, 591302, Ph no. 0833-6223326. 19606400019793,19605500001909,19606400027168,19606400026632.

Br. Koppal: Kodandappa Complex,Near Kiran Paints, Jawahar Road, Koppal- 583 231, Ph no. 0853-9220606 :-
21176400105246, 21176400114305,21176400104777,21176400106970,21176400095744,21176400079292,21176400105543,21176400106160,21176400112341,
21176400112879,21176400107036,21176400080191,21176400104025,21176400096247,21176400103399,21176400104017,21176400093624,21176400102904,
21176400068048,21176400103506,21176400093046,21176400098003,21176400098250,21176400077346,21176400105535,21176400108422,21176400090752,
21176400096262,21176400104215,21176400102847,21176400102888,21176400095546,21176400095710,21176400097468,21176400088053,21176400103068.

Br. Ranebennur: Gungadatti Building, Opp.KEB Office, PB Road, Ranibennur, Haveri- 581 115, Ph no. 08373-262111 :-
21116400037825,21116400038161,21116400029822,21116400039094.

Br. Raichur: Ashwini Complex, Opp. Public Gardens, Ambedkar Circle, Station Road, Raichur- 584101, Ph no. 08532-225091:-
15736400161107,15736400157907,15736400158046,15736400158145,15736400158186,15736400158616,15736400158665,15736400139558,15736400152510,
15736400152502,15736400159374,15736400159390,15736400160265.

Br. Ugarkhurd: Ghodagire Building, Opposite Post Office, Ugar Khurd, Athani Taluk, Belgaum- 591316, Ph no.8339 272325 :-
14996400036482,14996400022938,14996400037555,14996400036078,14996400022946,14996400035385,14996400036342,14996400032374,14996400036169,
14996400033497,14996400025717,14996400035971,14996400036359,14996400019645,14996400036425,14996400031970,14996400022920,14996400035823,
14996400035138,14996400022045,14996400035880,14996400035997,14996400036581,14996400036011,14996400022466,14996400022953,14996400032952,
14996400031186,14996400036979. **Br. Nipani: Dhole Prime, Ashok Nagar, Nipani, Belgaum-591 237, Ph No. 08338231379:-** 15086400034692,
15086400049328,15086400034502,15086400049955.

Br. Vijayapura: CTS No: 1439,Upuli Burz Road, Opp.Milan Medicals,Near M G Road, Vijayapura- 586 101 :-
23266400015756,23266400004834,23266400008710,23266400015673,23266400016333,23266400012480,23266400009536,23266400022521,23266400012472,
23266400012498,23266400012548,23266400020061,23266400016481,23266400012829,23266400016614,23266400016390,23266400016556,23266400013785,
23266400017232,23266400017729,23266400012837,23266400019600,23266400016978,23266400012910,23266400017091,23266400012951,23266400018081,
23266400012928,23266400012621,23266400007852,23266400018289,23266400019261,23266400014189,23266400017158,23266400018677,23266400019279,
23266400019253,23266400019014,23266400016796.

Br. Hosapete: Elevated Ground Floor, D No.486, PID No.4-2-5-79C, Venkateshwara Automobiles Road, 2nd Division, 4th Ward, Patel Nagar, Hosapete, Vijayanagara- 583 201 :- 23726400001791,23726400002195,23726400002195.

Br. Jamkhandi : Opp to Govts Girls High School, Near Bus Stand, Jamkhandi, Bagalkote- 587 301, Ph. No: 9663380119 :-
23846400002068,23846400003637,23846400003660.

Br. Chikodi: House No.3450, Sadguru Premnivas, Indiranagar, Chikodi, Belgaum Dist, Karnataka- 591 201 :-
19396400014206,19396400013307,19396400013372,19396400010634,19396400013661,19396400007770,19396400012978,19396400004975,19396400013018,
19396400009529,19396400012606,19396400010758,19396400012051,19396400013265,19396400010279,19396400010089,19396400012754,19396400013810,
19396400010493,19396400010394,19396400011087,19396400011095.

Bangalore 21-02-2025 Vice President & Zonal Head

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ವೈರಿಯನ್ನು ಇಲ್ಲವಾಗಿಸಲು ಅವನ ತಲೆ ತೆಗೆಯಬೇಕಾಗಿಲ್ಲ.
ನಮ್ಮ ತಲೆಯಿಂದ ಅವನನ್ನು ತೆಗೆದುಹಾಕಿದರೆ ಸಾಕು.
–ಮಹರ್ಷಿ ವಾಲ್ಮೀಕಿ

ಭಾರತ–ಕತಾರ್ ದ್ವಿಪಕ್ಷೀಯ ಸಂಬಂಧ ಇನ್ನಷ್ಟು ವಿಸ್ತರಣೆ

ಕತಾರ್ ದೊರೆ ಶೇಖ್ ತಮೀಮ್ ಬಿನ್ ಹಮದ್ ಅಲ್ ಥಾನಿ ಅವರ ಭೇಟಿಯ ಬಳಿಕ ಭಾರತ ಮತ್ತು ಕತಾರ್ ನಡುವಣ ದ್ವಿಪಕ್ಷೀಯ ಸಂಬಂಧ ಇನ್ನಷ್ಟು ವಿಸ್ತಾರವೂ ಗಾಢವೂ ಆಗಿದೆ. ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರಕ್ಕಾಗಿ ಹಲವು ಕರಾರುಗಳಿಗೆ ಎರಡೂ ದೇಶಗಳು ಸಹಿ ಹಾಕಿವೆ. ಕೊಲ್ಲಿ ರಾಷ್ಟ್ರಗಳ ಜೊತೆಗೆ ಭಾರತವು ಹಲವು ಶತಮಾನಗಳಿಂದಲೂ ಉತ್ತಮ ಬಾಂಧವ್ಯ ಹೊಂದಿದೆ. ಸ್ವತಂತ್ರ ಭಾರತದ ಎಲ್ಲ ಸರ್ಕಾರಗಳೂ ಈ ಸಂಬಂಧವನ್ನು ಪೋಷಿಸಿಕೊಂಡು ಬಂದಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ನಂಟು ಉತ್ತಮಗೊಳ್ಳಲು ವಿಶೇಷ ಗಮನವನ್ನು ಹರಿಸಿದ್ದಾರೆ. ಕೊಲ್ಲಿ ರಾಷ್ಟ್ರಗಳ ಜೊತೆಗೆ ಭಾರತವು ಆರ್ಥಿಕ ಮತ್ತು ಸಾಂಸ್ಕೃತಿಕ ಸಂಬಂಧವನ್ನಷ್ಟೇ ಹೊಂದಿಲ್ಲ, ಜನರ ನಡುವೆಯೂ ಉತ್ತಮ ಸಂಪರ್ಕ ಇದೆ. ಕೊಲ್ಲಿ ದೇಶಗಳಲ್ಲಿ ಭಾರತದ ದೊಡ್ಡ ಸಂಖ್ಯೆಯ ಜನ ಕೆಲಸ ಮಾಡುತ್ತಿದ್ದಾರೆ. ಕೊಲ್ಲಿ ದೇಶಗಳ ಪೈಕಿ ಕತಾರ್ ವಿಶಿಷ್ಟವಾದುದು. ಈ ದೇಶವು ಪಶ್ಚಿಮದ ದೇಶಗಳ ಜೊತೆಗೆ ಉತ್ತಮ ಬಾಂಧವ್ಯ ಹೊಂದಿದೆ. ಹಾಗೆಯೇ ಕೊಲ್ಲಿ ಪ್ರದೇಶದ ಇತರ ದೇಶಗಳ ಜೊತೆಗೆ ಗೆಳೆತನವಿದೆ. ಇಸ್ರೇಲ್ ಜೊತೆಗೂ ಅಫ್ಗಾನಿಸ್ತಾನದಂತಹ ಮೂಲಭೂತವಾದಿ ದೇಶದೊಂದಿಗೂ ನಂಟು ಇರಿಸಿಕೊಂಡಿದೆ. ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಈ ಒಂಬತ್ತು ತಿಂಗಳಲ್ಲಿ ಕತಾರ್‌ಗೆ ಎರಡು ಬಾರಿ ಭೇಟಿ ನೀಡಿದ್ದಾರೆ. ಭಾರತವು ಈ ದೇಶಕ್ಕೆ ಎಷ್ಟು ಮಹತ್ವ ನೀಡುತ್ತಿದೆ ಎಂಬುದಕ್ಕೆ ಇದು ಪುರಾವೆಯಾಗಿದೆ.

ಮುಕ್ತ ವ್ಯಾಪಾರ ಒಪ್ಪಂದದ ಸಾಧ್ಯತೆಗಳನ್ನು ಎರಡೂ ದೇಶಗಳು ಶೋಧಿಸಿವೆ. ಇದು, ದ್ವಿಪಕ್ಷೀಯ ವ್ಯಾಪಾರ ಹೆಚ್ಚಳಕ್ಕೆ ಅವಕಾಶ ಮಾಡಿಕೊಡಲಿದೆ

ಎರಡೂ ದೇಶಗಳ ಸಂಬಂಧವನ್ನು ವ್ಯೂಹಾತ್ಮಕ ಪಾಲುದಾರಿಕೆಯ ಮಟ್ಟಕ್ಕೆ ಏರಿಸಲು ಒಪ್ಪಿಕೊಳ್ಳಲಾಗಿದೆ ಎಂದು ದೊರೆಯ ಭೇಟಿಯ ಕೊನೆಯಲ್ಲಿ ನೀಡಿದ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ. ದ್ವಿಪಕ್ಷೀಯ ವ್ಯಾಪಾರದ ಮೊತ್ತವನ್ನು ಮುಂದಿನ ಐದು ವರ್ಷಗಳಲ್ಲಿ ದ್ವಿಗುಣಗೊಳಿಸಲು ಯೋಜಿಸಲಾಗಿದೆ. ವ್ಯಾಪಾರದ ಈ ಮೊತ್ತವು ಈಗಿನ 1,400 ಕೋಟಿ ಡಾಲರ್‌ನಿಂದ (ಸುಮಾರು ₹1.22 ಲಕ್ಷ ಕೋಟಿ) 2,800 ಕೋಟಿ ಡಾಲರ್‌ಗೆ (ಸುಮಾರು ₹2.44 ಲಕ್ಷ ಕೋಟಿ) ಏರಿಕೆಯಾಗಲಿದೆ. ಕತಾರ್ ದೇಶವು ಭಾರತದಲ್ಲಿ ಸಾವಿರ ಕೋಟಿ ಡಾಲರ್ (ಸುಮಾರು ₹86 ಸಾವಿರ ಕೋಟಿ) ಹೂಡಿಕೆ ಮಾಡಲಿದೆ. ಅರಬ್ ಸಂಯುಕ್ತ ಸಂಸ್ಥಾನ (ಯುಎಇ), ಸೌದಿ ಅರೇಬಿಯಾ, ಒಮಾನ್ ಮತ್ತು ಕುವೈತ್ ಸದಸ್ಯತ್ವ ಹೊಂದಿರುವ ಗಲ್ಫ್ ಕೊ-ಆಪರೇಷನ್ ಕೌನ್ಸಿಲ್ (ಜಿಸಿಸಿ) ಜೊತೆಗೆ ಭಾರತವು ವ್ಯೂಹಾತ್ಮಕ ಸಂಬಂಧವನ್ನು ಈಗಾಗಲೇ ಹೊಂದಿದೆ. ಭಾರತದ ವಿದೇಶಾಂಗ ಸಂಬಂಧದಲ್ಲಿ ಈ ಪ್ರದೇಶಕ್ಕೆ ಇರುವ ಮಹತ್ವವನ್ನು ಇದು ತೋರಿಸುತ್ತದೆ. ಎರಡು ಕರಾರುಗಳು ಮತ್ತು ಐದು ಒಪ್ಪಂದಗಳಿಗೆ ಭಾರತ-ಕತಾರ್ ಸಹಿ ಹಾಕಿವೆ. ಇದರಲ್ಲಿ ಆರ್ಥಿಕ ಸಹಕಾರ, ಯುವಜನ ಕಲ್ಯಾಣ, ಎರಡೂ ಕಡೆಯಲ್ಲಿ ತೆರಿಗೆ ವಿಧಿಸುವಿಕೆಯನ್ನು ತಪ್ಪಿಸುವುದು ಸೇರಿವೆ. ಭಾರತದ ಎಲ್‌ಎನ್‌ಜಿ (ದ್ರವೀಕೃತ ನೈಸರ್ಗಿಕ ಅನಿಲ) ಅಗತ್ಯದ ಶೇಕಡ 45ರಷ್ಟನ್ನು ಕತಾರ್ ಪೂರೈಸುತ್ತದೆ. ಈಗ ಇರುವ ದ್ವಿಪಕ್ಷೀಯ ವ್ಯಾಪಾರದ ಅರ್ಧ ಭಾಗದಷ್ಟು ಇದೇ ಆಗಿದೆ. ಕತಾರ್ ಎನರ್ಜಿ ಮತ್ತು ಭಾರತದ ಪೆಟ್ರೋನೆಟ್ ಎಲ್‌ಎನ್‌ಜಿ ಕಂಪನಿಯು ಬೃಹತ್ ಪ್ರಮಾಣದ ಎಲ್‌ಎನ್‌ಜಿ ಪೂರೈಕೆಯ ಒಪ್ಪಂದ ಮಾಡಿಕೊಂಡಿವೆ. ಈ ಒಪ್ಪಂದದ ಅವಧಿ 20 ವರ್ಷ. ಭಾರತದಲ್ಲಿ ಕತಾರ್‌ನ ಹೂಡಿಕೆ ದೊಡ್ಡ ಪ್ರಮಾಣದಲ್ಲಿ ಇಲ್ಲ. ಹೂಡಿಕೆ ಏರಿಕೆಯ ಒಪ್ಪಂದಗಳನ್ನು ಈಗ ಮಾಡಿಕೊಳ್ಳಲಾಗಿದೆ. 2023-24ರಲ್ಲಿ ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ ದ್ವಿಪಕ್ಷೀಯ ವ್ಯಾಪಾರದ ಮೊತ್ತದಲ್ಲಿ ಕುಸಿತವಾಗಿದೆ. ಇದನ್ನು ಏರಿಸುವುದಕ್ಕೂ ಕ್ರಮ ಕೈಗೊಳ್ಳಲಾಗಿದೆ.

ಭಾರತದ ನೌಕಾಪಡೆಯ ಎಂಟು ಮಂದಿ ನಿವೃತ್ತ ಸಿಬ್ಬಂದಿಗೆ ಗೂಢಚರ್ಯೆ ಆರೋಪದಲ್ಲಿ ಕತಾರ್ ದೇಶವು 2022ರ ಆಗಸ್ಟ್‌ನಲ್ಲಿ ಮರಣದಂಡನೆ ವಿಧಿಸಿತ್ತು. ಇದರಿಂದಾಗಿ, ದ್ವಿಪಕ್ಷೀಯ ರಾಜತಾಂತ್ರಿಕ ಸಂಬಂಧಕ್ಕೆ ಹೊಡೆತ ಬಿದ್ದಿತ್ತು. ಆದರೆ, ದೊರೆಯು ಎಲ್ಲರನ್ನೂ ಕ್ಷಮಿಸಿದ್ದರು. ಇದು ಸಂಬಂಧದಲ್ಲಿ ಉಂಟಾಗಿದ್ದ ಬಿಕ್ಕಟ್ಟನ್ನು ನಿವಾರಿಸಿತು. ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ಸಾಧ್ಯತೆಗಳನ್ನು ಎರಡೂ ದೇಶಗಳು ಶೋಧಿಸಿವೆ. ಇದು, ಎರಡೂ ದೇಶಗಳಿಗೆ ಪರಸ್ಪರರ ಮಾರುಕಟ್ಟೆಗೆ ಮುಕ್ತ ಪ್ರವೇಶ ಒದಗಿಸಿ, ದ್ವಿಪಕ್ಷೀಯ ವ್ಯಾಪಾರ ಹೆಚ್ಚಳಕ್ಕೆ ಅವಕಾಶ ಮಾಡಿಕೊಡಲಿದೆ. ಚೀನಾ ಸೇರಿದಂತೆ ಹಲವು ದೇಶಗಳ ಜೊತೆಗೆ ಮುಕ್ತ ಮಾರುಕಟ್ಟೆ ಒಪ್ಪಂದವನ್ನು ಕತಾರ್ ಹೊಂದಿದೆ. ಎಫ್‌ಟಿಎಯಲ್ಲಿ ಹಲವು ಅನುಕೂಲಗಳು ಇವೆ. ಹಾಗೆಯೇ ಕೆಲವು ಅನನುಕೂಲಗಳೂ ಇವೆ. ಎಫ್‌ಟಿಎ ಕಾರಣದಿಂದ ಕತಾರ್ ಅಥವಾ ಇತರ ದೇಶಗಳು ಅವುಗಳ ಸರಕುಗಳನ್ನು ಭಾರತದಲ್ಲಿ ತಂದು ಬೇಕಾಬಿಟ್ಟಿ ಸುರಿಯದಂತೆ ಎಚ್ಚರಿಕೆಯನ್ನು ವಹಿಸಬೇಕಿದೆ.

ಡೊನಾಲ್ಡ್ ಟ್ರಂಪ್ ನಿಲುವಿಗೆ ಭಾರತ ಮೌನ ಕಾಯ್ದುಕೊಂಡಿರುವುದು ಏಕೆ?

ಗಾಜಾದಲ್ಲಿ ರೆಸಾರ್ಟ್ ರಾಜಕೀಯ

ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಹಿಂದಿಯಲ್ಲಿ ಒಂದು ಗಾದೆ ಮಾತಿದೆ- ‘ಜಿಸ್‌ಕೀ ಲಾಠೀ ಉಸ್‌ಕೀ ಭೈನ್ಸ್’. ಅಂದರೆ, ‘ದೊಡ್ಡ ಕೋಲು ಹಿಡಿದವನೇ ಎಮ್ಮೆಯ ಮಾಲೀಕ’ ಎಂದರ್ಥ. ಭಾರತದ ಗ್ರಾಮ್ಯ ಜೀವನದಲ್ಲಿ ಬೇರೂರಿರುವ ಇಂಥ ಗಾದೆಗಳಲ್ಲಿ ಸಾರ್ವತ್ರಿಕ ಮತ್ತು ಕಾಲಾತೀತ ಅರ್ಥ ಅಡಗಿರುತ್ತದೆ. ಉದಾಹರಣೆಗೆ, ಈ ಹಿಂದೆ ವಿಯೆಟ್ನಾಂ, ಇರಾಕ್, ಅಫ್ಗಾನಿಸ್ತಾನದಂತಹ ಅನೇಕ ದೇಶಗಳ ಮೇಲೆ ವಿಧ್ವಂಸಕಾರಿ ದಾಳಿ ನಡೆಸಿ, ಸಾವಿರಾರು ಜನರ ಸಾವಿಗೆ ಕಾರಣವಾದ ವಿಶ್ವದ ಅತಿ ಬಲಾಢ್ಯ ರಾಷ್ಟ್ರದ ಇಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಗಾಜಾ ಪಟ್ಟಿಗೆ ಸಂಬಂಧಿಸಿದಂತೆ ತಳೆದಿರುವ ಉದ್ಧಟತನದ ನಿಲುವು. ಪ್ಯಾಲೆಸ್ಟೀನ್ ಜನರಿಗೆ ಸೇರಿರುವ ಸಮುದ್ರದಂಡೆಯ ಸುಂದರವಾದ ಜಾಗವನ್ನು ಬಲವಂತವಾಗಿ ವಶಪಡಿಸಿಕೊಂಡು, ಅಲ್ಲಿಯ ಇಪ್ಪತ್ತು ಲಕ್ಷ ಮೂಲನಿವಾಸಿಗಳನ್ನು ಹೊರಗೆ ದೂಕಿ, ಅಲ್ಲಿ ಜಗತ್ತಿನ ಅತಿ ಶ್ರೀಮಂತರಿಗಾಗಿ ಭವ್ಯ ರೆಸಾರ್ಟ್ ಒಂದನ್ನು ನಿರ್ಮಿಸುವುದಾಗಿ ಟ್ರಂಪ್ ಘೋಷಿಸಿದ್ದಾರೆ.

ಇದು ಅನೈತಿಕ, ಅಕ್ರಮ, ಅಮಾನವೀಯ, ಅಂತರರಾಷ್ಟ್ರೀಯ ಕಾನೂನಿನ ಅವಹೇಳನ ಎಂಬುದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಗಾಜಾ ಹಾಗೂ ವೆಸ್ಟ್‌ಬ್ಯಾಂಕ್ ಪ್ರದೇಶಗಳ ಒಡೆತನ ಪ್ಯಾಲೆಸ್ಟೀನಿಯನ್ನರದೇ ಎಂಬುದನ್ನು ವಿಶ್ವಸಂಸ್ಥೆ ಒಪ್ಪಿಕೊಂಡಿದೆ. ಅಷ್ಟೇ ಅಲ್ಲ, ಈ ಭೂಮಿಯ ಮೇಲೆ ಪ್ಯಾಲೆಸ್ಟೀನಿಯನ್ನರ ಸ್ವತಂತ್ರ ರಾಷ್ಟ್ರ ನಿರ್ಮಾಣವಾಗಬೇಕು, ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಶಾಂತಿಯುತವಾಗಿ ಕೂಡಿ ಬದುಕಬೇಕು ಎಂಬ ‘ದ್ವಿರಾಷ್ಟ್ರ ಪರಿಹಾರೋಪಾಯ’ವನ್ನು ಭಾರತವೂ ಸೇರಿದಂತೆ ಬಹುಪಾಲು ಎಲ್ಲ ದೇಶಗಳೂ ಅನೇಕ ದಶಕಗಳಿಂದ ಹೇಳುತ್ತಾ ಬಂದಿವೆ. ಆದರೆ ಅಮೆರಿಕ ಮತ್ತು ಇಸ್ರೇಲ್ ಇದನ್ನು ಒಪ್ಪುತ್ತಿಲ್ಲ. ಅಮೆರಿಕವು ಇಲ್ಲಿಯವರೆಗೆ ಇಸ್ರೇಲ್‌ಗೆ ಸಾವಿರಾರು ಕೋಟಿ ಡಾಲರ್ ಆರ್ಥಿಕ ಸಹಾಯ ನೀಡಿದ್ದಲ್ಲದೆ, ಅತಿ ವಿನಾಶಕಾರಿ ಶಸ್ತ್ರಾಸ್ತ್ರಗಳ ‘ಕೋಲನ್ನೂ’ ಅದರ ಕೈಯಲ್ಲಿ ಕೊಟ್ಟಿದೆ.

1948ರಲ್ಲಿ ಇಸ್ರೇಲ್‌ನ ಸ್ಥಾಪನೆಯಾದದ್ದೇ ಪ್ಯಾಲೆಸ್ಟೀನಿಯನ್ನರ ನೆಲದ ಮೇಲೆ ನಡೆದ ಅತಿಕ್ರಮಣದ ಫಲವಾಗಿ. ಇದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಎರಡನೇ ಮಹಾಯುದ್ಧದಲ್ಲಿ ಯುರೋಪಿನ ಯಹೂದಿಯರ ಮೇಲೆ ಹಿಟ್ಲರ್ ದೌರ್ಜನ್ಯ ನಡೆಸಿದಾಗ, ಯಹೂದಿಯರು ದೊಡ್ಡ ಸಂಖ್ಯೆಯಲ್ಲಿ ವಲಸೆ ಬಂದು ಪ್ಯಾಲೆಸ್ಟೀನ್‌ನಲ್ಲಿ ತಮ್ಮ ರಾಷ್ಟ್ರವನ್ನು ಕಟ್ಟಿಕೊಂಡರು. ನಂತರ 1967ರ ಅರಬ್- ಇಸ್ರೇಲ್ ಯುದ್ಧದಲ್ಲಿ ಅರಬ್ಬರನ್ನು ಸೋಲಿಸಿ ಪ್ಯಾಲೆಸ್ಟೀನಿಯನ್ನರಿಗೆ ಸೇರಿದ ಮತ್ತಷ್ಟು ಪ್ರದೇಶವನ್ನು ವಶಪಡಿಸಿಕೊಂಡರು. ಇಷ್ಟೇ ಅಲ್ಲ, ವೆಸ್ಟ್‌ಬ್ಯಾಂಕ್‌ನಲ್ಲಿ ಇಸ್ರೇಲ್ ತನ್ನ ನಾಗರಿಕರಿಗಾಗಿ ವಸತಿ ಪ್ರದೇಶಗಳನ್ನು ಕಟ್ಟಿ ಅತಿಕ್ರಮಣ ನಡೆಸುತ್ತಲೇ ಬಂದಿದೆ. ವೆಸ್ಟ್‌ಬ್ಯಾಂಕ್ ಮತ್ತು ಗಾಜಾ ಎರಡೂ ಪ್ರದೇಶಗಳಿಂದ ಪ್ಯಾಲೆಸ್ಟೀನಿಯನ್ನರನ್ನು ಸಂಪೂರ್ಣವಾಗಿ ಹೊರಗೆ ತಳ್ಳಿ, ಆ ಜಾಗಗಳನ್ನು ಕಬಳಿಸಿ, ಅಲ್ಲಿ ಒಂದು ಬೃಹತ್ ಇಸ್ರೇಲ್ ಸ್ಥಾಪಿಸಬೇಕು ಅನ್ನುವ ಕನಸನ್ನು ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹು ಅನೇಕ ದಶಕಗಳಿಂದ ಕಾಣುತ್ತಲೇ ಬಂದಿದ್ದಾರೆ.

ಈ ಕನಸು ನನಸಾಗಬಹುದು ಎಂಬ ಭರವಸೆ ಅವರಿಗೆ ಸಿಕ್ಕಿದ್ದು 2023ರ ಅಕ್ಟೋಬರ್ 7ರಂದು. ವಿಪರ್ಯಾಸವೆಂದರೆ, ಆ ಅವಕಾಶವನ್ನು ನೆತನ್ಯಾಹು ಅವರಿಗೆ ನೀಡಿದವರು ಗಾಜಾದಲ್ಲಿನ ಹಮಾಸ್ ಎಂಬ ಇಸ್ಲಾಮಿ ಸಂಘಟನೆಯ ಬಂಡುಕೋರರು. ಅವರು ಆ ದಿನ ಇಸ್ರೇಲ್ ಮೇಲೆ ದಾಳಿ ಮಾಡಿ ಸುಮಾರು ಒಂದು ಸಾವಿರ ನಾಗರಿಕರನ್ನು ಕೊಂದು, ಅನೇಕ ಇಸ್ರೇಲಿಯನ್ನರನ್ನು ಒತ್ತೆಯಾಳುಗಳಾಗಿ ಸೆರೆಹಿಡಿದರು. ಅವರ ಈ ಘೋರ ಅಪರಾಧ ಅತ್ಯಂತ ಖಂಡನೀಯ. ಆದರೆ ಇದನ್ನೇ ನೆಪ ಮಾಡಿಕೊಂಡು ನೆತನ್ಯಾಹು ನೇತೃತ್ವದ ಸರ್ಕಾರವು ಗಾಜಾದಲ್ಲಿ ಹದಿನೈದು ತಿಂಗಳು ನರಮೇಧ ನಡೆಸಿ 50,000ಕ್ಕೂ ಹೆಚ್ಚು ನಾಗರಿಕರನ್ನು (ಅವರಲ್ಲಿ ಮೂರನೇ ಒಂದು ಭಾಗದಷ್ಟು ಮಹಿಳೆಯರು ಮತ್ತು ಮಕ್ಕಳು) ಕೊಂದುಹಾಕಿತು. ಅಂತರರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯವು ನೆತನ್ಯಾಹು ಮತ್ತು ಹಮಾಸ್ ಬಂಡುಕೋರರನ್ನು ದೋಷಿಗಳು ಎಂದು ತೀರ್ಪು ನೀಡಿದೆ.

ಟ್ರಂಪ್ ಎರಡನೇ ಬಾರಿ ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾದಾಗ ‘ಜಗತ್ತಿನಲ್ಲಿ ಶಾಂತಿ ಸ್ಥಾಪನೆಯೇ ನನ್ನ ಪ್ರಮುಖ ಧ್ಯೇಯ’ ಎಂದು ಘೋಷಿಸಿದರು. ಯಾವುದೇ ಕಲಹದಲ್ಲಿ ನಿಷ್ಪಕ್ಷಪಾತವಾಗಿ ಮತ್ತು ನ್ಯಾಯಯುತವಾಗಿ ಇರಬೇಕಾದುದು ಶಾಂತಿದೂತನ ಆದ್ಯ ಕರ್ತವ್ಯ. ಹೀಗಿರುವಾಗ, ಗಾಜಾದಲ್ಲಿ ಅಮೆರಿಕಕ್ಕೆ ಭಾರಿ ಲಾಭ ತಂದುಕೊಡುವ ರೆಸಾರ್ಟ್ ನಿರ್ಮಿಸುವುದೇಕೆ ಎಂಬ ಪ್ರಶ್ನೆಗೆ ಟ್ರಂಪ್ ಕೊಟ್ಟ ಉತ್ತರ- ‘ಆ ಜಾಗವೆಲ್ಲ ಧ್ವಂಸಗೊಂಡಿದೆ, ಅಲ್ಲಿ ಮನುಷ್ಯರು ವಾಸಿಸಲು ಸಾಧ್ಯವಿಲ್ಲ’. ಇದು ಹಾಸ್ಯಾಸ್ಪದ. ಗಾಜಾದಲ್ಲಿನ ಪ್ಯಾಲೆಸ್ಟೀನಿಯನ್ನರ ಸುಮಾರು ಎಲ್ಲ ಮನೆಗಳು, ಶಾಲೆಗಳು, ಆಸ್ಪತ್ರೆಗಳು, ಜಮೀನುಗಳು ನಾಶವಾಗಿರುವುದು ನಿಜ. ಆದರೆ ಆ ಪ್ರದೇಶದ ಮೇಲೆ ಅವಿರತವಾಗಿ ಬಾಂಬ್ ದಾಳಿ ನಡೆಸಿ ಈ ನಿರ್ಮಾಣಗಳನ್ನೆಲ್ಲಾ ಧ್ವಂಸ ಮಾಡಿದವರು ಯಾರು? ಇಸ್ರೇಲ್ ಅಲ್ಲವೇ? ಆದರೆ ಟ್ರಂಪ್ ಅವರು ನೆತನ್ಯಾಹು ಅವರನ್ನು ಬಾಯಿ ತುಂಬಾ ಹೊಗಳಿದರೇ ವಿನಾ ‘ನೀನೇ ಇದಕ್ಕೆ ದೋಷಿ’ ಎಂದು ಹೇಳುವ ನೈತಿಕ ಶಕ್ತಿಯನ್ನು ತೋರಿಸಲಿಲ್ಲ. ಅಷ್ಟೇ ಅಲ್ಲದೆ ‘ಗಾಜಾಪಟ್ಟಿಯನ್ನು ಪ್ಯಾಲೆಸ್ಟೀನಿಯನ್ನರಿಗೆ ಒಪ್ಪಿಸಿ ಅದರ ಪುನರ್‌ನಿರ್ಮಾಣಕ್ಕಾಗಿ ಜಗತ್ತಿನ ಎಲ್ಲ ರಾಷ್ಟ್ರಗಳೂ ಮುಂದೆ ಬರೋಣ ಹಾಗೂ ಪಶ್ಚಿಮ ಏಷ್ಯಾದಲ್ಲಿ ಒಂದು ಹೊಸ ಶಾಂತಿಯುಗವನ್ನು ಸ್ಥಾಪಿಸೋಣ’ ಎಂದು ಕರೆ ಕೊಡುವ ದೊಡ್ಡ ಮನಸ್ಸನ್ನು ಟ್ರಂಪ್ ಮಾಡಲಿಲ್ಲ.

ಪ್ಯಾಲೆಸ್ಟೀನಿಯನ್ನರನ್ನು ನೆರೆಯ ಈಜಿಪ್ಟ್ ಮತ್ತು ಜೋರ್ಡನ್‌ಗೆ ತಳ್ಳಿ ಗಾಜಾದಲ್ಲಿ ರೆಸಾರ್ಟ್ ಕಟ್ಟಿ ಸ್ವರ್ಗದಂತೆ ಮಾಡುವೆ ಎಂಬ ಟ್ರಂಪ್ ಅವರ ದರ್ಪೋಕ್ತಿಯನ್ನು ಎಲ್ಲ ಅರಬ್, ಆಫ್ರಿಕನ್ ರಾಷ್ಟ್ರಗಳಲ್ಲದೆ ಚೀನಾ, ರಷ್ಯಾ, ಫ್ರಾನ್ಸ್‌ನಂತಹ ದೇಶಗಳೂ ಟೀಕಿಸಿವೆ. ಆದರೆ ಮೌನವಾಗಿರುವ ಕೆಲವೇ ಕೆಲವು ದೇಶಗಳಲ್ಲಿ ಭಾರತ ಸೇರಿದೆ. ಗಾಜಾದಲ್ಲಿ ಇಸ್ರೇಲ್ ನರಸಂಹಾರ ಮಾಡುತ್ತಿದ್ದಾಗಲೂ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮತ್ತು ನೆತನ್ಯಾಹು ಅವರ ಪ್ರಶಂಸಕರಾದ, ಆಡಳಿತಾರೂಢ ಬಿಜೆಪಿಗೆ ಸೇರಿದವರು ಕಣ್ಣು-ಬಾಯಿ ಮುಚ್ಚಿಕೊಂಡಿದ್ದರು.

ಪ್ಯಾಲೆಸ್ಟೀನ್- ಇಸ್ರೇಲ್ ಕಲಹದಲ್ಲಿ ಈ ಹಿಂದೆ ಭಾರತ ಮೌನವಾಗಿ ಇರಲಿಲ್ಲ. ಉದಾಹರಣೆಗೆ, ಈ ವಿಷಯದ ಬಗ್ಗೆ ಮಹಾತ್ಮ ಗಾಂಧಿ, ಪಂಡಿತ್ ದೀನದಯಾಳ್ ಉಪಾಧ್ಯಾಯ ಮತ್ತು ಅಟಲ್ ಬಿಹಾರಿ ವಾಜಪೇಯಿ ಏನು ಹೇಳಿದ್ದರು ಎಂಬುದನ್ನು ನೋಡೋಣ. ‘ಇಂಗ್ಲೆಂಡ್ ಇಂಗ್ಲಿಷ್‌ಗೆ ಅಥವಾ ಫ್ರಾನ್ಸ್ ಫ್ರೆಂಚ್‌ಗೆ ಸೇರಿದಂತೆಯೇ ಪ್ಯಾಲೆಸ್ಟೀನ್ ಅರಬ್ಬರಿಗೆ ಸೇರಿದೆ’ ಎಂದು ಗಾಂಧೀಜಿ ತಮ್ಮ ‘ಹರಿಜನ’ ಪತ್ರಿಕೆಯಲ್ಲಿ ಬರೆದಿದ್ದರು. ಹಿಟ್ಲರ್‌ನ ಜರ್ಮನಿಯಲ್ಲಿ ಯಹೂದಿಯರ ಮೇಲೆ ನಡೆದ ಹತ್ಯಾಕಾಂಡದಿಂದಾಗಿ ಗಾಂಧೀಜಿಗೆ ಅವರ ಬಗ್ಗೆ ಆಳವಾದ ಸಹಾನುಭೂತಿ ಇತ್ತು. ಆದರೆ ಅವರು ‘ಯಹೂದಿಯರನ್ನು ಅರಬ್ಬರ ಮೇಲೆ ಹೇರುವುದು ತಪ್ಪು ಮತ್ತು ಅಮಾನವೀಯ’ ಎಂದು ಸ್ಪಷ್ಟವಾಗಿ ಹೇಳಿದ್ದರು.

ಬಿಜೆಪಿ ಮತ್ತು ಅದರ ಹಿಂದಿನ ಅವತಾರವಾದ ಭಾರತೀಯ ಜನಸಂಘದ ಸೈದ್ಧಾಂತಿಕ ಗುರುಗಳಾದ ಉಪಾಧ್ಯಾಯ ಅವರು, 1967ರಲ್ಲಿ ಅರಬ್-ಇಸ್ರೇಲ್ ಯುದ್ಧ ಪ್ರಾರಂಭವಾದಾಗ, ಅವರ ಪಕ್ಷದ ಬಹುತೇಕ ಎಲ್ಲರೂ ಇಸ್ರೇಲ್ ಪರವಾಗಿದ್ದರೂ ಒಂದು ಎಚ್ಚರಿಕೆಯ ಮಾತನ್ನು ಹೇಳಿದ್ದರು. ‘ಕಾಂಗ್ರೆಸ್ ಕುರುಡಾಗಿ ಅರಬ್ ಪರವಾಗಿದೆ ಎಂದ ಮಾತ್ರಕ್ಕೆ ನಾವೂ ಕುರುಡಾಗಿ ಇಸ್ರೇಲ್ ಪರವಾಗಿ ಇರಬಾರದು. ಈ ಜಗತ್ತು ದೇವತೆಗಳು ಮತ್ತು ರಾಕ್ಷಸರಿಂದ ತುಂಬಿದೆ ಎಂದು ನಾವು ನಂಬಬಾರದು. ಪ್ರತಿ ವಿಷಯವನ್ನೂ ಅದರ ಅರ್ಹತೆಯ ಆಧಾರದ ಮೇಲೆ ನಾವು ನಿರ್ಣಯಿಸಬೇಕು’ (ಇದನ್ನು ಎಲ್.ಕೆ. ಅಡ್ವಾಣಿ ತಮ್ಮ ಆತ್ಮಚರಿತ್ರೆಯಲ್ಲಿ ಉಲ್ಲೇಖಿಸಿದ್ದಾರೆ).

ಇದೇ ರೀತಿ ಜನತಾ ಪಕ್ಷದ ನೇತೃತ್ವದ ಸರ್ಕಾರದಲ್ಲಿ ಭಾರತದ ವಿದೇಶಾಂಗ ಸಚಿವರಾಗಿದ್ದ ವಾಜಪೇಯಿ ಕೂಡ, ‘ಪ್ಯಾಲೆಸ್ಟೀನಿಯನ್ನರ ಭೂಮಿಯನ್ನು ಇಸ್ರೇಲ್ ಅಕ್ರಮವಾಗಿ ಆಕ್ರಮಿಸಿಕೊಂಡಿದೆ. ಅದನ್ನು ಇಸ್ರೇಲ್ ಖಾಲಿ ಮಾಡಲೇಬೇಕು’ ಎಂದು ಸ್ಪಷ್ಟವಾಗಿ ಹೇಳಿದ್ದರು. ‘ಇಸ್ರೇಲ್ 1967ರ ಹಿಂದಿನ ಸೀಮೆಗೆ ಹಿಂತಿರುಗಬೇಕು ಹಾಗೂ ಪ್ಯಾಲೆಸ್ಟೀನಿಯನ್ನರು ತಮ್ಮ ಸ್ವತಂತ್ರ ರಾಷ್ಟ್ರವನ್ನು ಸ್ಥಾಪಿಸಲು ಅನುವು ಮಾಡಿಕೊಡಬೇಕು’ ಎಂದು ಅವರು ಆಗ್ರಹಿಸಿದ್ದರು.

ಪ್ರಬಲನೇ ಜಗತ್ತಿನ ಒಡೆಯ ಎಂಬ ‘ಜಂಗ್ಲಿ’ ಕಾನೂನನ್ನು ವಿಶ್ವಗುರು ಆಗಬಯಸುವ ಭಾರತ ಒಪ್ಪಬೇಕೇ? ಇದಕ್ಕೆ ಮೋದಿ ಅವರ ಸಮರ್ಥಕರೇ ಉತ್ತರಿಸಬೇಕು.

ಚುರುಮುರಿ

ಹೂ-ಡಿಕೆ ಚರ್ಚೆ!

• ತುರುವೇಕೆರೆ ಪ್ರಸಾದ್

‘ಅದೇನೋ ಇನ್‌ವೆಸ್ಟ್ ಕರ್ನಾಟಕ ಅಂತೆ, 10 ಲಕ್ಷ ಕೋಟಿ ದುಡ್ಡು ಹರ್ಕಂಡ್ ಬತ್ತದಂತೆ ಕಣ್ಲಾ’ ಎಂದ ಗುದ್ಲಿಂಗ ಹರಟೆಕಟ್ಟೇಲಿ.

‘ಅದು ಇನ್‌ವೆಸ್ಟ್ ಅಲ್ಲಲೇ, ಇನ್‌ವೆಸ್ಟ್ ಕರ್ನಾಟಕ’ ತಿದ್ದಿದ ಮಾಲಿಂಗ. ‘ಅದ್ರೆ ನಮ್ ರಾಜಕೀಯದೋರ್ಗೆ ಉಪ್ಯೋಗ ಆಗೋ ಅಂತದ್ದೇನೂ ಕಂಡಂಗಾಗ್ಲಿಲ್ಲ’ ಎಂದ ಗುದ್ಲಿಂಗ.

‘ದುಡ್ಡು ಬರ್ಬೇಕು ಅಂತ ನೋಟು ಇಂಡಸ್ಟ್ರಿ ಮಾಡಕ್ಕಾಗುತ್ತೇನ್ಲಾ? ಕೂತ್ಕಳ್ಳ ಸುಮ್ಕೆ’ ಎಂದ ಕಲ್ಲೇಶಿ.

‘ಅಂಗಲ್ಲಲೇ, ಈಗ ನೋಡು, ಸರ್ಕಾರ ಲಕ್ಷಾಂತರ ಎಕರೆ ಒತ್ತುವರಿ ತೆರವು ಮಾಡಕ್ಕೆ ಒಂಟದೆ. ಅಂದ್‌ಮ್ಯಾಗೆ ಬುಲ್ಡೋಜರ್ ಕಂಪನಿಗೆ ಪ್ರೋತ್ಸಾಹ ಕೊಡ್ಬೇಕಲ್ವಾ?’

‘ಅದ್ಯಾವುದೋ ಊರಲ್ಲಿ ಕಟ್ಟಿದ ಮನೇನೆ ಅನಾಮತ್ ತಳಪಾಯದ ಸಮೇತ ಹಿಂದಕ್ಕೆ ಸರಿಸವ್ರಂತೆ. ಇಂಗೇ ಇವತ್ತು ಹಿಂದಕ್ಕೆ ಸರ್ಸದು, ಸರ್ವೆ ಆದ್‌ಮ್ಯಾಗೆ ಮತ್ತೆ ಎತ್ತಿ ಮುಂದಕ್ಕೆ ಮಡಿಕ್ಕಳಾದು. ಒಡೆಯೋ ಪ್ರಶ್ನೇನೆ ಬರಕ್ಕಿಲ್ವಲ್ಲ’.

‘ಅಂಗಾರೆ ಆ ‘ಹೌಸ್ ಮೂವರ್’ ಕಂಪನಿನೇ ತಂದು ನಮ್ ರಾಜ್ಯದಲ್ಲಿ ಮಡಿಕ್ಕಬೇಕು ಬುಡು. ಉದ್ಯೋಗನೂ ಸೃಷ್ಟಿ ಆಯ್ತದೆ’.

‘ಉದ್ಯೋಗದ ವಿಷಯ ಬಿಡ್ಲಾ. ಯಾರಿಗ್ ಬೇಕು ಹೂಡಿಕೆ? ಉದ್ಯೋಗ? ಇಂಡಸ್ಟ್ರಿಯೋರು, ರಾಜಕೀಯದೋರು ಇಬ್ರೂ ತಮ್ ಮೂಲ ಸೌಕರ್ಯ ನೋಡ್ಕತಾರೆ ಅಷ್ಟೇ!

‘ಅದೇನೋ ಸರೀನೆ, ಈಗ ಅಕ್ಕಿ ತಯಾರ್ ಮಾಡೋ ಕಂಪನಿಗಳಿದ್ರೆ ಅರ್ಜೆಂಟ್ ಕರುಸ್ಬೇಕು’.

‘ಇಂಡಸ್ಟ್ರಿ ಮಾಡ್ತೀವಿ ಅಂತ ಸಾವಿರಾರು ಎಕ್ರೆ ರೈತನ್ ನೆಲ ಗೆಬರ್ಕಂಡ್ರೆ ಅಕ್ಕಿ ಏನ್ ಆಕಾಶದಿಂದ ಉದುರುತ್ತೇನ್ಲಾ?’

‘ಅಂಗಿದ್ಮೇಲೆ ಊರಾಗಿರೋ ಬಂಡೆ ಗಿಂಡೆ ಎಲ್ಲಾ ಎಂಗೂ ಅರ್ಧಕ್ಕರ್ಧ ಒಡ್ದವ್ರೆ. ಪೂರಾ ಒಡೆದು ಸಮತಟ್ ಮಾಡ್ಬುಟ್ರೆ ಭತ್ತ ಬೆಳೀಬಹುದು. ಬಂಡೆ ಒಡೆಯೋ ಇಂಡಸ್ಟ್ರಿಗೇ ಮೊದ್ಲು ಪ್ರಿಫರೆನ್ಸ್ ಕೊಟ್ರಾಯ್ತು’.

‘ಈಗ ಮಾಡ್ತಿರೋದು ಅದೇ! ಬಂಡೆ ಒಡೆಯೋ ಕೆಲಸ. ಈ ಮೈತ್ರಿ, ಕೂಡಿಕೆ ಅಂದ್ರೆ ಹೂಡಿಕೆಗೆ ಬಂಡೆನೇ ಬೇಕಾಗಿತ್ತು. ಈಗ ಹೂ-ಡಿಕೆ? ಎನ್ನುವಂತಾಗಿದೆ’ ಎಂದ ಪರ್ಮೇಶಿ.

ಎಲ್ಲಾ ಗೊಳ್ಳನೆ ನಕ್ಕರು.

ದಿನದ ಟ್ವೀಟ್

ನದಿಗಳ ಪಾವಿತ್ರ್ಯ ಕಾಪಾಡೋಣ

ನಮ್ಮ ಜನರಿಗೆ ಯಾವಾಗ ಬುದ್ಧಿ ಬರುತ್ತದೋ. ಪವಿತ್ರ ನದಿಯನ್ನು ನಾವೇ ಕಲುಷಿತ ಮಾಡುತ್ತಿದ್ದೇವೆ ಎಂಬ ಪರಿಜ್ಞಾನವನ್ನು ಕಳೆದುಕೊಂಡಿದ್ದಾರೆ.

ಪ್ರಕಾಶ್ ಶೇಷರಾಘವಾಚಾರ್, ವಕ್ತಾರ, ಬಿಜೆಪಿ ರಾಜ್ಯ ಘಟಕ

ಕಿಡಿನುಡಿ

ಐವರಲ್ಲ, 30ಕ್ಕೂ ಹೆಚ್ಚು ರೌಡಿಗಳು ಅಲ್ಲಿದ್ದರು... ಎಲ್ಲರನ್ನೂ ಬಂಧಿಸಬೇಕು ಮತ್ತು ಯರವಡಾ ಜೈಲಿಗೆ ಕಳುಹಿಸಬೇಕು.

(ಬೆಂಗಳೂರಿನ ಡಿ.ಜೆ. ಹಳ್ಳಿ ಮತ್ತು ರಾಮಮೂರ್ತಿನಗರ ಪ್ರದೇಶಗಳಲ್ಲಿ ಕತ್ತಿ ಬೀಸುತ್ತಾ ವ್ಹೀಲಿಂಗ್ ಮಾಡುತ್ತಿದ್ದ ಐವರು ಯುವಕರನ್ನು ಬೆಂಗಳೂರು ಪೂರ್ವ ವಿಭಾಗದ ಪೊಲೀಸರು ಬಂಧಿಸಿರುವುದಕ್ಕೆ ಪ್ರತಿಕ್ರಿಯೆ)

ದತ್ತಾತ್ರಿ

25 ವರ್ಷಗಳ ಹಿಂದೆ — ಮಂಗಳವಾರ, 22-2-2000

• **ಕೃಷಿ ಮಾರುಕಟ್ಟೆ ಶುಲ್ಕ ಸಂಗ್ರಹ ಖಾಸಗಿಯವರಿಗೆ**

ಹುಬ್ಬಳ್ಳಿ, ಫೆ. 21– ರಾಜ್ಯದ ಎಲ್ಲ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಶುಲ್ಕ ಸಂಗ್ರಹ (ಸೆಸ್ ಕಲೆಕ್ಷನ್) ಹೊಣೆಯನ್ನು ಖಾಸಗಿಯವರಿಗೆ ವಹಿಸಿಕೊಡುವ ನಿಟ್ಟಿನಲ್ಲಿ ಸರ್ಕಾರ ಪರಿಶೀಲಿಸುತ್ತಿದೆ ಎಂದು ಕೃಷಿ ಮಾರುಕಟ್ಟೆ ರಾಜ್ಯ ಸಚಿವ ಆರ್.ಬಿ. ತಿಮ್ಮಾಪುರ ಹೇಳಿದರು.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತ, ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಶೇಕಡ 50ರಷ್ಟು ಸೋರಿಕೆ ಉಂಟಾಗಿರುವುದರಿಂದ ‘ಸೆಸ್ ಕಲೆಕ್ಷನ್’ ಜವಾಬ್ದಾರಿಯನ್ನು ಖಾಸಗಿಯವರಿಗೆ ವಹಿಸಿಕೊಡುವ ಸಂಬಂಧ ತಜ್ಞರೊಂದಿಗೆ ಸಮಾಲೋಚಿಸಿ ನಿರ್ಧರಿಸಲಾಗುವುದು ಎಂದರು.

ದಲ್ಲಾಳಿಗಳು ಮತ್ತು ಅಧಿಕಾರಿಗಳು ಶಾಮೀಲಾಗಿ ಸರ್ಕಾರದ ಬೊಕ್ಕಸಕ್ಕೆ ಬರಬೇಕಾಗಿರುವ ಮಾರುಕಟ್ಟೆ ಶುಲ್ಕದ ಮೊತ್ತದಲ್ಲಿ ಭಾರೀ ಪ್ರಮಾಣದ ನಷ್ಟ ಉಂಟು ಮಾಡಿದ್ದಾರೆ. ಈ ವರ್ಷ ಕೇವಲ 70 ಕೋಟಿ ಸೆಸ್ ಹಣ ಸಂಗ್ರಹವಾಗಿದೆ ಎಂದ ಅವರು, ಖಾಸಗಿಯವರಿಗೆ ಈ ಜವಾಬ್ದಾರಿ ಹೊರಿಸುವುದರಿಂದ ಎರಡು ಪಟ್ಟು ‘ಸೆಸ್’ ಸಂಗ್ರಹವಾಗುವ ಆಶಯ ವ್ಯಕ್ತಪಡಿಸಿದರು.

• **‘ರೈತ ಬಜಾರ್’ ಮಾರ್ಚ್‌ನಿಂದ ಆರಂಭ**

ಹುಬ್ಬಳ್ಳಿ, ಫೆ. 21– ರೈತರು ಬೆಳೆದ ತರಕಾರಿ, ಹಣ್ಣು, ಹಂಪಲುಗಳನ್ನು ರೈತರೇ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ‘ರೈತ ಬಜಾರ್’ ಅನ್ನು ಹುಬ್ಬಳ್ಳಿಯಲ್ಲಿ ಮಾರ್ಚ್ ತಿಂಗಳಿಂದ ಆರಂಭಿಸಲಾಗುವುದು ಎಂದು ರಾಜ್ಯ ಕೃಷಿ ಮಾರುಕಟ್ಟೆ ಸಚಿವ ಆರ್.ಬಿ. ತಿಮ್ಮಾಪುರ ಇಂದಿಲ್ಲಿ ಪ್ರಕಟಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರೈತರು ತಾವು ಬೆಳೆದ ತರಕಾರಿ, ಹಣ್ಣುಗಳನ್ನು ಹೊಲಗಳಿಂದ ಮಾರುಕಟ್ಟೆಗೆ ತಂದು ಗ್ರಾಹಕರಿಗೆ ಮುಟ್ಟಿಸುವಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ‘ರೈತ ಬಜಾರ್’ಗಳನ್ನು ಆರಂಭಿಸಲಾಗುವುದು ಎಂದರು.

50 ವರ್ಷಗಳ ಹಿಂದೆ — ಶನಿವಾರ, 22-2-1975

• **ಅಡುಗೆ ಎಣ್ಣೆ, ಬೆಲ್ಲ, ಸಿದ್ಧ ಉಡುಪು, ನಿತ್ಯಬಳಕೆ ವಸ್ತು ದುಬಾರಿ**

ಬೆಂಗಳೂರು, ಫೆ. 21– ನಿಮ್ಮ ಮನೆಯಲ್ಲಿ ಪ್ರತಿದಿನ ಬಳಸುವ ಎಲ್ಲ ಬಗೆಯ ಎಣ್ಣೆಗಳು ಇನ್ನು ಮುಂದೆ ಇನ್ನಷ್ಟು ದುಬಾರಿ. ಜತೆಗೆ ನೀವು ತೊಡುವ ಸಿದ್ಧ ಉಡುಪು ಕೂಡ ನಿಮ್ಮ ಕಿಸೆಗೆ ಭಾರವಾಗಲಿದೆ.

ನಿತ್ಯ ಬಳಕೆಯ ಪದಾರ್ಥಗಳಾದ ಅಡಿಕೆ, ಬೆಲ್ಲ, ಮೆಣಸು ಮತ್ತು ಗೋಡಂಬಿಗೂ ನೀವು ಹೆಚ್ಚು ಬೆಲೆ ತೆರಬೇಕು.

1975–76ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಕಂಡುಬಂದಿರುವ 30.07 ಕೋಟಿ ರೂ. ಕೊರತೆಯನ್ನು ಸರಿದೂಗಿಸಲು ಹಣಕಾಸು ಸಚಿವ ಎಂ.ವೈ. ಘೋರ್ಪಡೆ ಅವರು ಇಂದು ಸೂಚಿಸಿದ ಕರ ಏರಿಕೆ ಹಾಗೂ ತೆರಿಗೆಗಳ ಪರಿಷ್ಕರಣದ ಪರಿಣಾಮ ಇದು.

ಈ ತೆರಿಗೆ ಕ್ರಮಗಳಿಂದ ಬರುವ ಹೆಚ್ಚಿನ ಆದಾಯ 14.65 ಕೋಟಿ ರೂ. ಆದರೂ 17.42 ಕೋಟಿ ರೂ. ಕೊರತೆ ಇನ್ನೂ ಉಳಿದಿರುತ್ತದೆ. ಇದರಲ್ಲಿ 3.47 ಕೋಟಿ ರೂ. ಕಳೆದ ವರ್ಷದ ಖೋತಾ ಸೇರಿದೆ.

• **ಕನ್ನಡ ಚಿತ್ರಗಳಿಗೆ ಲಕ್ಷ ರೂ. ಸಬ್ಸಿಡಿ**

ಬೆಂಗಳೂರು, ಫೆ. 21– ರಾಜ್ಯದಲ್ಲಿ ತಯಾರಾದ ಕನ್ನಡ ಚಲನಚಿತ್ರಗಳಿಗೆ ನೀಡುವ ಸಹಾಯಧನವನ್ನು ಕಪ್ಪು– ಬಿಳುಪು ಚಿತ್ರಕ್ಕೆ ಒಂದು ಲಕ್ಷ ರೂ. ಗಳಿಗೆ, ವರ್ಣಚಿತ್ರವಾದರೆ ಒಂದೂವರೆ ಲಕ್ಷ ರೂ. ಗಳಿಗೆ ಹೆಚ್ಚಿಸಲಾಗಿದೆ.

ಹಣಕಾಸು ಸಚಿವ ಎಂ.ವೈ. ಘೋರ್ಪಡೆ ಅವರು ಈ ವಿಷಯವನ್ನು ಇಂದು ತಮ್ಮ ಬಜೆಟ್ ಭಾಷಣದಲ್ಲಿ ವಿಧಾನಸಭೆಯಲ್ಲಿ ಪ್ರಸ್ತಾಪಿಸಿದರು.

ಈವರೆಗೆ ನೀಡುತ್ತಿದ್ದ ಸಹಾಯಧನ ಪ್ರತಿ ಚಿತ್ರಕ್ಕೆ 50,000 ರೂ.

ಸಂಗತ

ಸರ್ಕಾರದ ನೆಮ್ಮದಿ ಕೆಡಿಸಿದ ಮೀನು!

ಆಕ್ರಮಣಕಾರಿ ಮೀನುಗಳು ಸೊಳ್ಳೆಗಳ ಸಂತತಿಯನ್ನಷ್ಟೇ ಕಡಿಮೆ ಮಾಡುವುದಿಲ್ಲ, ದೇಸಿ ಮೀನುಗಳ ಸಂತತಿಯನ್ನೂ ನಾಶ ಮಾಡುತ್ತವೆ

• ಶ್ರೀಗುರು

ಹೆಚ್ಚುತ್ತಿರುವ ಸೊಳ್ಳೆಯ ಕಾಟದಿಂದ ಜನರನ್ನು ಪಾರು ಮಾಡಲು ಮಾಡಿದ ಪ್ರಯತ್ನವೊಂದು ಕೇಂದ್ರ ಸರ್ಕಾರವನ್ನು ಹಸಿರು ನ್ಯಾಯಮಂಡಳಿಯ ಕಟಕಟೆಗೆ ತಂದು ನಿಲ್ಲಿಸಿದೆ. ಕೆರೆ, ಕುಂಟೆ, ನಾಲೆ, ಹಿನ್ನೀರು ಮತ್ತು ನದಿಗಳಿಗೆ ಸೊಳ್ಳೆ ಮೀನು ಮತ್ತು ಗಪ್ಪಿ ಮೀನುಗಳನ್ನು ಸೇರಿಸಿ, ದೇಶದ ಹಲವು ರಾಜ್ಯಗಳಲ್ಲಿ ಸೊಳ್ಳೆಗಳ ನಿಯಂತ್ರಣಕ್ಕಾಗಿ ಮಾಡಿದ ಕೆಲಸವು ಪರಿಸರ ತಜ್ಞರಿಂದಲೂ ಟೀಕೆಗೆ ಒಳಗಾಗಿದೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿದ್ದು, ಚಟುವಟಿಕೆಯನ್ನು ಈ ಕೂಡಲೇ ನಿಲ್ಲಿಸಬೇಕು ಮತ್ತು ಸೂಕ್ತ ವಿವರಣೆ ನೀಡಬೇಕು ಎಂದು ತಾಕೀತು ಮಾಡಿದೆ.

ನಡೆದಿರುವುದು ಇಷ್ಟು. ಜನವಸತಿ ಪ್ರದೇಶಗಳಿಗೆ ಹತ್ತಿರವಿರುವ ನೀರಿನ ತಾಣಗಳಿಂದ ಸೊಳ್ಳೆಗಳು ಹರಡುವುದು ಸಾಮಾನ್ಯ ವಿದ್ಯಮಾನ. ಸೊಳ್ಳೆಗಳ ಕಚ್ಚುವಿಕೆಯಿಂದ ಜನರ ಆರೋಗ್ಯ ಹದಗೆಡುವುದು, ಅವರು ಆಸ್ಪತ್ರೆ ಸೇರುವುದು, ಕೆಲವು ಸಂದರ್ಭಗಳಲ್ಲಿ ಸೂಕ್ತ ಚಿಕಿತ್ಸೆ ದೊರಕದೆ ಪ್ರಾಣಹಾನಿ ಆಗುವುದು ನಡೆದೇ ಇರುತ್ತದೆ. ಕಾಲಕಾಲಕ್ಕೆ ಹೆಚ್ಚುವ ಸೊಳ್ಳೆಯ ಕಾಟದಿಂದ ಜನರನ್ನು ರಕ್ಷಿಸಲು ಮುಂದಾದ ಕೇಂದ್ರ ಸರ್ಕಾರವು ಸೊಳ್ಳೆಗಳನ್ನು ತಿಂದು ನಾಶ ಮಾಡುವ ಎರಡು ಬಗೆಯ ಮೀನುಗಳನ್ನು ನೀರಿನ ತಾಣಗಳಿಗೆ ಸೇರಿಸಲು ಮುಂದಾಯಿತು. ಯೋಜನೆಯೊಂದನ್ನು ಸಿದ್ಧಪಡಿಸಿ, ವಿವಿಧ ರಾಜ್ಯಗಳ ಸಹಯೋಗದೊಂದಿಗೆ ಸೊಳ್ಳೆ ಮೀನು (ಗಂಬೂಸಿಯ ಅಫಿನಿಸ್) ಮತ್ತು ಗಪ್ಪಿ (ಪೋಸಿಲಿಯ ರೆಟಿಕುಲಾಟ) ಪ್ರಭೇದದ ಮೀನುಗಳನ್ನು ಕರ್ನಾಟಕ, ಅಸ್ಸಾಂ, ಅರುಣಾಚಲ ಪ್ರದೇಶ, ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನ, ತಮಿಳುನಾಡು, ಉತ್ತರಪ್ರದೇಶ, ಆಂಧ್ರಪ್ರದೇಶ, ಪಂಜಾಬ್ ಮತ್ತು ಒಡಿಶಾ ರಾಜ್ಯಗಳ ನೀರಿನ ತಾಣಗಳಲ್ಲಿ ಬಿಡಲಾಯಿತು.

ಈ ಸೊಳ್ಳೆ ಮೀನು ಮತ್ತು ಗಪ್ಪಿ ಮೀನುಗಳು ವಿಶ್ವದ ಅತ್ಯಂತ ಆಕ್ರಮಣಕಾರಿ ಮೀನುಗಳೆಂದೇ ಕುಖ್ಯಾತಿ ಪಡೆದಿವೆ. ಇವು ತಾವು ಪ್ರವೇಶಿಸುವ ನೀರಿನಲ್ಲಿರುವ ಸೊಳ್ಳೆಗಳನ್ನು ಆಪೋಶನ ತೆಗೆದುಕೊಳ್ಳುತ್ತವೆ. ಅಲ್ಲಿಗೆ ಸೊಳ್ಳೆಗಳ ನಿಯಂತ್ರಣವಾಗುತ್ತದೆ. ಇದು ಇಲ್ಲಿಗೇ ಮುಗಿಯುವುದಿಲ್ಲ. ಈ ಮೀನುಗಳು ಬೇರೆ ಜಾತಿಯ ಮೀನುಗಳ ಸಣ್ಣ ಮರಿಗಳನ್ನು ಹಿಡಿದು ತಿಂದುಬಿಡುತ್ತವೆ. ಸೊಳ್ಳೆಗಳ ನಿಯಂತ್ರಣಕ್ಕಾಗಿ ನೀರು ಸೇರುವ ಈ ಮೀನುಗಳು ಬೇರೆ ಮೀನುಗಳ ಸಂತತಿಯನ್ನು ನಾಶ ಮಾಡುತ್ತವೆ. ಇವು ಬಕಾಸುರನಂತೆ ಆಹಾರ ಸೇವಿಸುವುದರಿಂದ ದೇಸಿ ಮೀನುಗಳಿಗೆ ಆಹಾರದ ಕೊರತೆ ಉಂಟಾಗುತ್ತದೆ. ಇದರಿಂದಾಗಿ ನೀರಿನೊಳಗಿನ ಜೀವಿ ಆವಾಸದಲ್ಲಿ ದೊಡ್ಡ ಪಾರಿಸರಿಕ ಏರುಪೇರು ಸಂಭವಿಸುತ್ತದೆ. ಈ ಕಾರಣದಿಂದ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಈ ಎರಡೂ ಜಾತಿಯ ಮೀನುಗಳಿಗೆ ಶಾಶ್ವತ ನಿಷೇಧ ಹೇರಿವೆ.

ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವೇ ಈ ಎರಡು ಬಗೆಯ ಮೀನುಗಳನ್ನು ‘ಆಕ್ರಮಣಕಾರಿ’ ಮತ್ತು ‘ಪರಕೀಯ’ (ನಮ್ಮ ವಾತಾವರಣಕ್ಕೆ ಹೊಂದದ) ಪ್ರಭೇದಗಳು ಎಂದು ಘೋಷಿಸಿರುವಾಗ ಅದು ಹೇಗೆ ಅದೇ ಮೀನುಗಳನ್ನು ನಮ್ಮ ನೀರಿಗೆ ಸೇರಿಸಲಾಯಿತು ಎಂಬ ಪ್ರಶ್ನೆ ಎತ್ತಿರುವ ಹಸಿರು ನ್ಯಾಯಮಂಡಳಿಯು ಇಂತಹ ಕೆಲಸಗಳನ್ನು ನಿಯಂತ್ರಿಸಬೇಕಾದ ಸರ್ಕಾರವೇ ಹೀಗೆ ಮಾಡಬಹುದೇ ಎಂದು ಪ್ರಶ್ನಿಸಿದೆ. ಸ್ಥಳೀಯ ಜೀವಿ ಪರಿಸರಕ್ಕೆ ಧಕ್ಕೆ ಉಂಟುಮಾಡುವ ಯಾವುದೇ ಪ್ರಯತ್ನಕ್ಕೆ ಯಾರೂ ಮುಂದಾಗಕೂಡದು ಎಂದು ಎಚ್ಚರಿಕೆ ನೀಡಿದೆ.

ನೋಟಿಸ್ ಸ್ವೀಕರಿಸಿರುವ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ನ್ಯಾಷನಲ್ ಸೆಂಟರ್ ಫಾರ್ ವೆಕ್ಟರ್ ಬೋರ್ನ್ ಡಿಸೀಸಸ್ ಕಂಟ್ರೋಲ್ ಈಗ ಉತ್ತರ ನೀಡಬೇಕಿದೆ.

ಯಾವುದಾದರೂ ಒಂದು ಜೀವಿ ಪರಿಸರದಲ್ಲಿ ಕ್ರಿಮಿ, ಕೀಟ, ಪ್ರಾಣಿ, ಜೀವಿಗಳ ಸಂಖ್ಯೆ ಮಿತಿಮೀರಿದರೆ ಅವುಗಳ ನಿಯಂತ್ರಣಕ್ಕೆ ಹೊರಗಿನಿಂದ ಅಥವಾ ಆವಾಸಕ್ಕೆ ಹೊರತಾದ ಜೀವಿ ಪ್ರಭೇದಗಳನ್ನು ಸೇರಿಸುವುದು ಮತ್ತು ಮಿತಿಮೀರಿದ ಸಂಖ್ಯೆಯನ್ನು ಕಡಿಮೆ ಮಾಡುವುದು ಜೀವಜಾಲದಲ್ಲಿ ನಡೆಯುವ ಸಾಮಾನ್ಯ ಚಟುವಟಿಕೆ ಆಗಿರುತ್ತದೆ. ಈ ಕ್ರಮ ಯಶಸ್ವಿಯಾಗದಿದ್ದರೆ ಸಾಮೂಹಿಕ ವಧೆ ಮಾಡಲಾಗುತ್ತದೆ. ಐದು ವರ್ಷಗಳ ಹಿಂದೆ ಉತ್ತರ ಭಾರತದ ಹಲವು ಪ್ರದೇಶಗಳಲ್ಲಿ ರೈತರ ಬೆಳೆಗಳನ್ನು ತಿಂದು ಮುಗಿಸುತ್ತಿದ್ದ ‘ನೀಲಗಾಯ್’ಗಳ ವಧೆಗೆ ರಾಜ್ಯ ಸರ್ಕಾರಗಳು ಮುಂದಾಗಿದ್ದವು. ಪರಿಸರ ಆಸಕ್ತರು ಮತ್ತು ನ್ಯಾಯಾಲಯಗಳ ಮಧ್ಯಪ್ರವೇಶದಿಂದ ಅದು ಸಾಧ್ಯವಾಗಲಿಲ್ಲ.



ಹತ್ತು ವರ್ಷಗಳ ಹಿಂದೆ ಉತ್ತರಪ್ರದೇಶದಲ್ಲಿ ಆಫ್ರಿಕಾದ ಕ್ಯಾಟ್‌ಫಿಶ್ ಕೃಷಿಯನ್ನು ನಿಷೇಧಿಸಲಾಗಿತ್ತು. ಈ ಮೀನುಗಳಲ್ಲಿ ಹೆಚ್ಚಿನ ಪ್ರೋಟೀನ್ ದೊರಕುತ್ತದೆ ಎಂಬ ಕಾರಣಕ್ಕೆ ಜನ ಕ್ಯಾಟ್‌ಫಿಶ್‌ಗಳನ್ನು ಸಾಕುತ್ತಿದ್ದರು ಮತ್ತು ಭಕ್ಷಿಸುತ್ತಿದ್ದರು. ತಮಿಳುನಾಡಿನಲ್ಲೂ ಕ್ಯಾಟ್‌ಫಿಶ್ ಕೃಷಿ ಜೋರಾಗಿತ್ತು. ಇವು ಸಹ ಇತರ ಮೀನುಗಳ ಆಹಾರವನ್ನು ಕಬಳಿಸಿ ದೇಸಿ ಮೀನುಗಳ ಆಹಾರದ ಕೊರತೆಗೆ ಕಾರಣವಾಗುತ್ತಿದ್ದವು. ಎರಡೂ ರಾಜ್ಯಗಳಲ್ಲಿ ಕ್ಯಾಟ್‌ಫಿಶ್‌ಗಳ ನಿಷೇಧ ಈಗಲೂ ಮುಂದುವರಿದಿದೆ.

ಜಗತ್ತಿನಲ್ಲಿ ಒಂದು ನೂರು ಬಗೆಯ ಆಕ್ರಮಣಕಾರಿ ಮೀನಿನ ಪ್ರಭೇದಗಳಿವೆ. ಈಗ ನಮ್ಮ ನೀರನ್ನು ಪ್ರವೇಶಿಸಿರುವ ಗಂಬೂಸಿಯ ಮತ್ತು ಪೋಸಿಲಿಯ ಮೀನುಗಳು ಇದೇ ಗುಂಪಿಗೆ ಸೇರಿವೆ. ಒಟ್ಟಿನಲ್ಲಿ ಸೊಳ್ಳೆಗಳ ಕಾಟ ಕಡಿಮೆ ಮಾಡಲು ಬಂದ ಮೀನುಗಳೀಗ ಸರ್ಕಾರದ ನೆಮ್ಮದಿ ಕೆಡಿಸಿವೆ.

ವಾಚಕರ ವಾಣಿ

ಕೃಷಿ ಜಮೀನಿನಲ್ಲಿ ಮನೆ: ಆಗಲಿ ಸಕ್ರಮ

ಪಾಲಿಕೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಕಂದಾಯ ಭೂಮಿಯಲ್ಲಿ ನಿರ್ಮಿಸಿದ ಅನಧಿಕೃತ ಬಡಾವಣೆಗಳಲ್ಲಿ ನಿವೇಶನಗಳನ್ನು ಖರೀದಿಸಿ ಮನೆಗಳನ್ನು ನಿರ್ಮಾಣ ಮಾಡಿಕೊಂಡಿರುವವರಿಗೆ ‘ಬಿ’ ಖಾತಾ ಮಾಡಿಕೊಟ್ಟು ಸಕ್ರಮಗೊಳಿಸುವ ವಿಶೇಷ ಅಭಿಯಾನಕ್ಕೆ ಸರ್ಕಾರ ಇತ್ತೀಚೆಗೆ ಚಾಲನೆ ನೀಡಿರುವುದು ಸರಿಯಷ್ಟೆ. ಗ್ರಾಮೀಣ ಪ್ರದೇಶಗಳಲ್ಲಿ ಜನ ಗ್ರಾಮಠಾಣಾ ವ್ಯಾಪ್ತಿಯ ಹೊರಗೆ ಗ್ರಾಮಗಳಿಗೆ ಹೊಂದಿಕೊಂಡಂತೆ ಇರುವ ಕೃಷಿ ಜಮೀನುಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಇಂತಹ ಮನೆಗಳಿಗೆ ಅಧಿಕೃತವಾಗಿ ಖಾತೆ ಆಗಿರುವುದಿಲ್ಲ. ಈಗ ಇವುಗಳಿಗೆ ಅಧಿಕೃತವಾಗಿ ಖಾತೆ ಮಾಡಿಕೊಡುವ ಕೆಲಸ ಅವಶ್ಯವಾಗಿ ಆಗಬೇಕಿದೆ.

ಸಿ.ಪುಟ್ಟಯ್ಯ ಹಂದನಕೆರೆ, ತುಮಕೂರು

ಸಾರ್ವಜನಿಕ ಸಾರಿಗೆ: ಗುಣಮಟ್ಟ ಮುಖ್ಯ

‘ಬೆಂಗಳೂರನ್ನು ಬರೀ ಎರಡು-ಮೂರು ವರ್ಷಗಳಲ್ಲಿ ಬದಲಾಯಿಸಲು ಸಾಧ್ಯವಿಲ್ಲ. ಭಗವಂತ ಇಳಿದು ಬಂದರೂ ಅದು ಸಾಧ್ಯವಲ್ಲದ ಕೆಲಸ...’ ಎಂಬ ತಮ್ಮ ಹೇಳಿಕೆಯಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಗರವನ್ನು ಈಗಿನ ಸರ್ಕಾರದ ಅವಧಿಯಲ್ಲಿ ಉತ್ತಮಪಡಿಸಲು ಸಾಧ್ಯವಾಗದು ಎಂದು ಒಪ್ಪಿಕೊಂಡಂತೆ ಆಗಿದೆ. ಅಲ್ಲದೆ, ಸೆಪ್ಟೆಂಬರ್ 15ರೊಳಗೆ ನಗರದ ಎಲ್ಲ ರಸ್ತೆಗಳ ಗುಂಡಿಗಳನ್ನೂ ಮುಚ್ಚದಿದ್ದರೆ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೋದ ವರ್ಷ ತಾವೇ ನೀಡಿದ್ದ ಖಡಕ್ ಎಚ್ಚರಿಕೆಯನ್ನೂ ಅವರು ಮರೆತಂತಿದೆ. ಗಡುವಿನ ತರುವಾಯ, ರಸ್ತೆಗಳು ಗುಂಡಿಮುಕ್ತ ಆಗಲಿಲ್ಲ, ಅಧಿಕಾರಿಗಳ ವಿರುದ್ಧ ಕ್ರಮವೂ ಜರುಗಲಿಲ್ಲ. ಗುಂಡಿ ಮುಚ್ಚಲು ಮಳೆ ಅಡ್ಡಿ ಎಂಬ ಅಧಿಕಾರಿಗಳ ಸಬೂಬನ್ನು ಕೇಳುತ್ತಲೇ ಬಂದಿದ್ದ ಮತ್ತು ಈ ಬೇಸಿಗೆಯಲ್ಲಾದರೂ ರಸ್ತೆಗಳು ಗುಂಡಿಮುಕ್ತ ಆಗಬಹುದೆಂದು ನಿರೀಕ್ಷಿಸಿದ್ದ ಜನರ ಮುಖಕ್ಕೆ ತಣ್ಣೀರೆರಚಿದಂತಾಗಿದೆ. ಉಪಮುಖ್ಯಮಂತ್ರಿಯವರ ಈ ಹೇಳಿಕೆ, ಮೊದಲೇ ನಿಧಾನಗತಿಯ ಬಿಬಿಎಂಪಿ ಅಧಿಕಾರಿಗಳಿಗೆ ತಾನಾಗಿಯೇ ದೊರೆತ ವರದಾನವಾಯಿತು. ಅಲ್ಲದೆ, ಮಳೆಗಾಲಕ್ಕೆ ಮುಂಚೆ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಬೇಕಾದ ಬದ್ಧತೆಯಿಂದಲೂ ಅವರನ್ನು ಮುಕ್ತರನ್ನಾಗಿಸಿತು!

ಆಡಳಿತ ನಡೆಸುವವರು ತಮ್ಮ ಆದ್ಯತೆಗಳ ಬಗ್ಗೆ ಈಗ ಮರುಚಿಂತಿಸಬೇಕಾದ ಅಗತ್ಯವಿದೆ. ಸುರಂಗ ರಸ್ತೆಗಳ ನಿರ್ಮಾಣಕ್ಕೆ ಮುಂದಾಗುವ ಮೊದಲು ಉತ್ತಮ ರಸ್ತೆಗಳನ್ನು ನಿರ್ಮಿಸಿ, ಸಾರ್ವಜನಿಕ ಸಾರಿಗೆಯ ಗುಣಮಟ್ಟವನ್ನು ಉತ್ತಮಪಡಿಸಬೇಕು. ಪ್ರಯಾಣಿಕರಿಗೆ ಕೈಗೆಟಕುವ ದರವನ್ನು ನಿಗದಿಪಡಿಸಬೇಕು. ಆಗ ಹೆಚ್ಚಿನವರು ಸ್ವಂತ ವಾಹನ ಹೊಂದುವುದು ಕಡಿಮೆಯಾಗಿ, ಅಷ್ಟರಮಟ್ಟಿಗೆ ರಸ್ತೆಗಳ ಮೇಲಿನ ಒತ್ತಡ ಸಹಜವಾಗಿಯೇ ತಗ್ಗುತ್ತದೆ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಪ್ರಾಮಾಣಿಕತೆಗೆ ಹೆಚ್ಚುವರಿ ಅಂಕ!

ವೆಬ್‌ಕಾಸ್ಟಿಂಗ್ ವ್ಯವಸ್ಥೆಯಡಿ ಮಕ್ಕಳಿಗೆ ಪರೀಕ್ಷೆ ಬರೆಸುವುದು ಪರಸ್ಪರ ಅಪನಂಬಿಕೆಗೆ ಹಿಡಿದ ಕೈಗನ್ನಡಿ ಎಂದು ಅಭಿಪ್ರಾಯಪಟ್ಟಿರುವ ಸದಾಶಿವ್ ಸೊರಟೂರು ಅವರ ಲೇಖನ (ಸಂಗತ, ಫೆ. 20) ವಾಸ್ತವ ಪರಿಸ್ಥಿತಿ ಹಾಗೂ ವಿದ್ಯಾರ್ಥಿ ಸಮೂಹದಲ್ಲಿ ಆಗಬೇಕಾಗಿರುವ ಬದಲಾವಣೆಗೆ ಕನ್ನಡಿ ಹಿಡಿದಿದೆ. ಮೂರು ದಶಕಗಳ ಹಿಂದೆ ನಾನು ಬೆಳಗಾವಿಯ ಬಿ.ಕೆ. ಮಾಡೆಲ್ ಶಾಲೆಯಲ್ಲಿ ಹತ್ತನೇ ತರಗತಿ ಕಲಿಯುತ್ತಿದ್ದೆ. ಅರ್ಧವಾರ್ಷಿಕ ಪರೀಕ್ಷೆಯ ಸಂದರ್ಭದಲ್ಲಿ ‘ಬಿಟ್ಟ ಸ್ಥಳ’ವೊಂದು ನನಗೆ ಗೊತ್ತಿರಲಿಲ್ಲ. ಆದರೆ ಮೇಲ್ವಿಚಾರಕರಾಗಿದ್ದ ಶಿಕ್ಷಕಿ ಹೊರಹೋದ ಸಂದರ್ಭದಲ್ಲಿ ವಿದ್ಯಾರ್ಥಿಯೊಬ್ಬ ಅದರ ಉತ್ತರವನ್ನು ಇಡೀ ತರಗತಿಗೆ ಕೇಳುವಂತೆ ಕೂಗಿ ಹೇಳಿದ್ದ. ಅದು ಶಿಕ್ಷಕಿ ಸುಲಭಾ ಒಡೆಯರ್ ಅವರ ಗಮನಕ್ಕೂ ಬಂದಿತ್ತು. ಆದರೆ ಅವನು ಹೇಳುವುದಕ್ಕೆ ಮುನ್ನ ನನಗೆ ಆ ಉತ್ತರ ಗೊತ್ತಿರದಿದ್ದ ಕಾರಣ, ಬಿಟ್ಟ ಸ್ಥಳವನ್ನು ತುಂಬದೆ ಹಾಗೆಯೇ ಬಿಟ್ಟಿದ್ದೆ. ಉತ್ತರ ಪತ್ರಿಕೆಯ ಮೌಲ್ಯಮಾಪನದ ಸಂದರ್ಭದಲ್ಲಿ ನನ್ನನ್ನು ಕರೆಸಿದ್ದ ಶಿಕ್ಷಕಿ, ಪ್ರಾಮಾಣಿಕತೆಗೆ ಎಂದು ಒಂದು ಹೆಚ್ಚುವರಿ ಅಂಕವನ್ನು ನೀಡಿ, ಪ್ಲಸ್ ಒನ್ ಎಂದು ಬರೆದು ಹುರಿದುಂಬಿಸಿದ್ದರು. ಮೇಲ್ವಿಚಾರಕರಿಲ್ಲದೆ ವಿದ್ಯಾರ್ಥಿಗಳು ಆತ್ಮಸಾಕ್ಷಿಗೆ ಅನುಗುಣವಾಗಿ ಪರೀಕ್ಷೆ ಬರೆದರೆ, ವಿದ್ಯಾರ್ಥಿಗಳಿಗೆ ನೀಡಿರುವ ಶಿಕ್ಷಣ-ಸಂಸ್ಕಾರ ಸಾರ್ಥಕವಾದೀತು.

ಸುಘೋಷ ಸ. ನಿಗಳೆ, ಬೆಂಗಳೂರು

ಪ್ರೀತಿ ಇಲ್ಲದ ಮೇಲೆ...

ಅನಾರೋಗ್ಯದಿಂದ ಬಳಲುತ್ತಿದ್ದ ತಾಯಿಯನ್ನು ಕೋಣೆಯೊಂದರಲ್ಲಿ ಕೂಡಿಹಾಕಿ, ವ್ಯಕ್ತಿಯೊಬ್ಬ ಕುಟುಂಬಸಹಿತ ಮಹಾ ಕುಂಭಮೇಳಕ್ಕೆ ತೆರಳಿದ್ದು ಜಾರ್ಖಂಡ್ ರಾಜ್ಯದಿಂದ ವರದಿಯಾಗಿದೆ (ಪ್ರ.ವಾ., ಫೆ. 21). ತಾಯಿಗೆ ಅಗತ್ಯವಾದ ಆಹಾರ, ನೀರು, ಔಷಧ ಸೇರಿದಂತೆ ಎಲ್ಲ ವ್ಯವಸ್ಥೆ ಮಾಡಿಯೇ ತಾನು ತೆರಳಿರುವುದಾಗಿ ಮಗ ಸಮರ್ಥಿಸಿಕೊಂಡಿದ್ದಾನೆ. ತಂದೆ-ತಾಯಿ ಮಕ್ಕಳಿಂದ ನಿರೀಕ್ಷಿಸುವುದು ಬರೀ ಊಟ, ಔಷಧೋಪಚಾರವನ್ನಷ್ಟೇ ಅಲ್ಲ. ಅವರು ಮಕ್ಕಳ ಸಾಮೀಪ್ಯವನ್ನು, ಅವರ ಪ್ರೀತಿಯನ್ನು ಬಯಸುತ್ತಾರೆ ಎಂಬ ಅರಿವು ಇರಬೇಕಾಗುತ್ತದೆ. ತಂದೆ-ತಾಯಿಗಿಂತ ಮಿಗಿಲಾದ ದೇವರು, ಪುಣ್ಯಕ್ಷೇತ್ರ ಎಲ್ಲೂ ಇಲ್ಲ ಎಂಬುದನ್ನು ನಿರೂಪಿಸುವ ಅನೇಕ ಕಥೆಗಳು ನಮ್ಮಲ್ಲಿವೆ. ಅಂಥ ಕಥೆಗಳನ್ನು ಓದಿಯೂ ಜನ ಕಣ್ಣೆದುರಿನ ದೇವರನ್ನು ಕಡೆಗಣಿಸಿ, ಕಾಣದ ದೇವರಿಗೆ ಹಂಬಲಿಸುವುದು ವಿಚಿತ್ರವಾಗಿ ಕಾಣುತ್ತದೆ.

ಸಿ.ಚಿಕ್ಕತಿಮ್ಮಯ್ಯ, ಬೆಂಗಳೂರು

ತಿದ್ದುಪಡಿಯ ವಿವರ ಪ್ರಕಟವಾಗಲಿ

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಮಸೂದೆ– 2025 ಸಿದ್ಧವಾಗಿದೆ ಎಂದು ವರದಿಯಾಗಿದೆ (ಪ್ರ.ವಾ., ಫೆ. 21). ಈ ಹಿಂದೆ 2000ದಲ್ಲಿ ವಿಶ್ವವಿದ್ಯಾಲಯಗಳ ಕಾಯ್ದೆಗೆ ಸಮಗ್ರ ತಿದ್ದುಪಡಿಯಾಗಿ ಜಾರಿಗೆ ಬಂದಿತ್ತು. ಸಿಂಡಿಕೇಟ್, ಅಕಡೆಮಿಕ್ ಕೌನ್ಸಿಲ್‌ಗಳಿಗೆ ಸದಸ್ಯರನ್ನು ಚುನಾವಣೆ ಮತ್ತು ನಾಮನಿರ್ದೇಶನ ಪದ್ಧತಿಯ ಮೂಲಕ ನೇಮಿಸುವ ಬದಲಿಗೆ ಸದಸ್ಯರನ್ನು ಸರ್ಕಾರ ನಾಮನಿರ್ದೇಶನ ಮಾಡುವ ಪದ್ಧತಿ ಜಾರಿಗೆ ಬಂದಿತು. ಅಂದಿನಿಂದ, ಆಡಳಿತಾರೂಢ ಪಕ್ಷದ ಕಾರ್ಯಕರ್ತರು, ಪಕ್ಷಕ್ಕೆ ನಿಷ್ಠರಾಗಿ ಇರುವವರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುತ್ತಾ ಬರಲಾಗಿದೆ.

ಈಗಿನ ತಿದ್ದುಪಡಿಯಲ್ಲಿ ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸಲಾಗುತ್ತಿದೆ ಎಂದು ಹೇಳಲಾಗಿದೆ. ಮತ್ತೇನೇನು ಇದೆಯೋ ಗೊತ್ತಿಲ್ಲ. ಸರ್ಕಾರ ತಿದ್ದುಪಡಿಯ ಕರಡನ್ನು ಸಮಸ್ತ ಭಾಗಿದಾರರ ಓದಿಗಾಗಿ, ಸಲಹೆಗಾಗಿ ಜಾಲತಾಣದಲ್ಲಿ ಪ್ರಕಟಿಸಿ, ಬಂದ ಸಲಹೆಗಳನ್ನು ಪರಾಮರ್ಶಿಸಿ ಮುಂದುವರಿಯುವುದು ಜಾಣ್ಮೆಯ ನಡೆ.

ವೆಂಕಟೇಶ್ ಮುದಗಲ್, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚುವ ಸಂಪುಟ ಉಪಸಮಿತಿಯ ಪ್ರಸ್ತಾವ ಸರಿಯೇ?

ವಿಶ್ವವಿದ್ಯಾಲಯ ಕಡಿಮೆ ಇರಲಿ ಶಿಕ್ಷಣದ ಗುಣಮಟ್ಟ ಹೆಚ್ಚಾಗಲಿ



ವಿಶ್ವವಿದ್ಯಾಲಯಗಳೆಂಬ ಬಿಳಿಯಾನೆಗಳನ್ನು ಸಾಕುವ ಅನಿವಾರ್ಯ ಒತ್ತಡದಲ್ಲಿ ರಾಜಕಾರಣದ ದುರುದ್ದೇಶಗಳೂ ಬೆರೆತು ಅತ್ಯುತ್ತಮ ಬೌದ್ಧಿಕ ಸಂವಾದ ಕೇಂದ್ರಗಳಾಗಬೇಕಿದ್ದ ವಿಶ್ವವಿದ್ಯಾಲಯಗಳು ಬಹುಪಾಲು ಅಶೈಕ್ಷಣಿಕ ಚಟುವಟಿಕೆಗಳ ಆಡುಂಬೊಲವಾಗಿವೆ. ಹೀಗಿರುವಾಗ ಕೇವಲ ಸಂಖ್ಯೆಗಳ ಬೆನ್ನು ಬೀಳದೆ ಹಿಂದೆ ಇದ್ದ ವಿ.ವಿಗಳಲ್ಲಿಯೇ ಜಾಗತಿಕ ಗುಣಮಟ್ಟವನ್ನು ಸಾಧಿಸಬೇಕಾಗಿದೆ

ಪ್ರಜಾವಾಣಿ ಚರ್ಚೆ

• ದಾದಾಪೀರ್ ನವಿಲೇಹಾಳ್

ರಾಜ್ಯದ ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚುವ ರಾಜ್ಯ ಸಂಪುಟ ಉಪಸಮಿತಿಯ ಪ್ರಸ್ತಾವ ಸಕಾಲಿಕವಾಗಿದೆ. ಎರಡು ಮೂರು ದಶಕಗಳಿಂದ ರಾಜ್ಯದ ಉನ್ನತ ಶಿಕ್ಷಣದ ಗುಣಮಟ್ಟ ಆಶಾದಾಯಕವಾಗಿಲ್ಲ. ವಿಶ್ವವಿದ್ಯಾಲಯದ ಮುಖ್ಯ ಪರಿಕಲ್ಪನೆಗಳಾದ ಅಧ್ಯಯನ, ಅಧ್ಯಾಪನ, ಪರೀಕ್ಷೆ, ಮೌಲ್ಯಮಾಪನ, ಸಂಶೋಧನೆ ಮತ್ತು ಪ್ರಸಾರಾಂಗಗಳ ವಿಷಯದಲ್ಲಿ ನಾವು ಕಳೆದ ಶತಮಾನದ ಗುಣಮಟ್ಟವನ್ನು ಮೀರುವುದಿರಲಿ; ಉಳಿಸಿಕೊಳ್ಳಲೂ ಆಗಿಲ್ಲ. ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಮಾತ್ರವಲ್ಲ, ವಿದ್ಯಾರ್ಥಿಗಳ ಆಸಕ್ತಿ ಕೇಂದ್ರಗಳು ಬದಲಾಗಿವೆ. ಅವರ ನಿರೀಕ್ಷೆಗಳು ವಿಪರೀತವಾಗಿವೆ. ಭಾಷೆಯನ್ನು ಒಳಗೊಂಡಂತೆ ಮಾನವಿಕ ಮತ್ತು ವಿಜ್ಞಾನ ವಿಷಯಗಳ ಕಲಿಕೆಯಲ್ಲಿ ತೀವ್ರ ಹಿನ್ನಡೆ ಕಾಣುತ್ತಿರುವ ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಮಾತ್ರವೇ ಪ್ರಗತಿ ಸಾಧ್ಯವಿಲ್ಲ.

ಜಿಲ್ಲೆಗೊಂದರಂತೆ ವಿವಿಯನ್ನು ಸ್ಥಾಪಿಸಲು ಹೊರಡುವ ಮನೋಧರ್ಮದ ಹಿಂದೆ ಬಡವರಿಗೆ, ಹಿಂದುಳಿದವರಿಗೆ ಉನ್ನತ ಶಿಕ್ಷಣದ ಅವಕಾಶಗಳನ್ನು ಹೆಚ್ಚಿಸಬೇಕೆನ್ನುವ ಕಾಳಜಿಗಿಂತ ಚುನಾವಣೆಗಳಲ್ಲಿ ರಾಜಕೀಯ ಲಾಭ ಪಡೆಯುವ ಉದ್ದೇಶವೇ ಎದ್ದು ಕಾಣುತ್ತದೆ. ಅಥವಾ ತಮ್ಮ ರಾಜಕೀಯ ಎದುರಾಳಿಗಳಿಗೆ 'ನೀನು ಮಾಡಲಾಗದ್ದನ್ನು ನಾನು ಮಾಡಿದ್ದೇನೆ' ಎಂದು ತೊಡೆತಟ್ಟಿ ಉತ್ತರ ಕೊಡಬೇಕೆನ್ನುವ ಪೈಪೋಟಿ ಕಾಣುತ್ತದೆ. ವಿಶ್ವವಿದ್ಯಾಲಯದ ಸ್ಥಾಪನೆಯಿಂದ ಜನರಿಗಾದ ಪ್ರಯೋಜನವೇನು ಎಂಬುದನ್ನು ಜನರೂ ಯೋಚಿಸುವುದಿಲ್ಲ, ರಾಜಕಾರಣಿಗೂ ಅದು ಬೇಕಾಗಿಲ್ಲ.

ಕರ್ನಾಟಕದಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆ ನಂತರ ಜಾನಪದ, ಸಂಗೀತ, ಸಂಸ್ಕೃತ, ಲಲಿತಕಲೆಗಳು, ಪಂಚಾಯತ್ ರಾಜ್ ಹೀಗೆ ವಿಭಿನ್ನ ಜ್ಞಾನ ಶಿಸ್ತುಗಳಿಗೆ ಒಂದೊಂದು ವಿವಿಗಳನ್ನು ಸ್ಥಾಪಿಸಲಾಯಿತು. ಇದರಿಂದ ಈ ಎಲ್ಲ ಜ್ಞಾನ ಶಿಸ್ತುಗಳನ್ನು ಕನ್ನಡದಲ್ಲಿ ಕಾಣುವ, ಕನ್ನಡಕ್ಕೆ ಜೋಡಿಸುವ ಮೂಲಕ ಕನ್ನಡ ವಿಶ್ವವಿದ್ಯಾಲಯವನ್ನು ದೇಸೀ ಭಾಷೆಗಳ ಸೃಜನಶೀಲ ಅಸ್ಮಿತೆಯನ್ನು ಪ್ರತಿನಿಧಿಸುವ ಉನ್ನತ ಶೈಕ್ಷಣಿಕ ಕೇಂದ್ರವನ್ನಾಗಿ ರೂಪಿಸುವ ಅದ್ಭುತ ಅವಕಾಶವೊಂದನ್ನು ಕೈಚೆಲ್ಲಿದಂತಾಯಿತು. ಆದರೆ, ಅಂಥ ವಿಶ್ವವಿದ್ಯಾಲಯಗಳ ಸ್ಥಾಪನೆಯ ಹಿಂದಿನ ಸದಾಶಯಗಳು ಎಷ್ಟರಮಟ್ಟಿಗೆ ಸಾಧಿತವಾಗಿವೆ ಎಂಬುದಕ್ಕೆ ಆಯಾ ವಿಶ್ವವಿದ್ಯಾಲಯಗಳ ಆಡಳಿತ ಮತ್ತು ಬೌದ್ಧಿಕ ಸಮುದಾಯ ಉತ್ತರದಾಯಿಗಳಾಗಿವೆಯೇ ಎನ್ನುವುದು ಪ್ರಶ್ನೆ.

ವಿಶ್ವವಿದ್ಯಾಲಯಗಳ ಸಂಖ್ಯೆ ಹೆಚ್ಚಾದಂತೆ ಕಟ್ಟಡವೂ ಒಳಗೊಂಡಂತೆ ಮೂಲಸೌಕರ್ಯಗಳನ್ನು ಒದಗಿಸಬೇಕಾದುದು ಸರ್ಕಾರದ ಹೊಣೆಗಾರಿಕೆ. ಉನ್ನತ ಶಿಕ್ಷಣ ಕ್ಷೇತ್ರವನ್ನು ಅನುತ್ಪಾದಕ ಎಂದು ಪರಿಭಾವಿಸಿರುವ ವ್ಯವಸ್ಥೆಯಲ್ಲಿ ಅಧ್ಯಾಪಕರನ್ನು, ಮಾನವ ಸಂಪನ್ಮೂಲವನ್ನು ವಿಸ್ತರಿಸುವ ಬೌದ್ಧಿಕ ಸೃಷ್ಟಿ ಕೇಂದ್ರಗಳನ್ನಾಗಿ ನೋಡುವ ದೃಷ್ಟಿಕೋನವೇ ಬತ್ತಿಹೋಗುತ್ತಿದೆ. ಅಧ್ಯಾಪಕರು ಮತ್ತು ಕುಲಪತಿಗಳ ನೇಮಕಾತಿಯಲ್ಲಿ ನಡೆಯುವ ಬ್ರಹ್ಮಾಂಡ ಭ್ರಷ್ಟಾಚಾರ ಎಲ್ಲರಿಗೂ ತಿಳಿದಿರುವಂತಹದ್ದಾಗಿದೆ.

ಅಧ್ಯಾಪಕರ ನೇಮಕಾತಿಗೆ ನೆಟ್ (NET) ಅಥವಾ ಕೆ-ಸೆಟ್‌ನಲ್ಲಿ (K-SET) ಅರ್ಹತೆ ಪಡೆಯುವುದು ಅಥವಾ ಪಿಎಚ್. ಡಿ. ಪದವಿ ಪಡೆಯುವುದು ಕಡ್ಡಾಯವಾಗಿದೆ. ಕೆ-ಸೆಟ್ ನಡೆಸುವವರ ವಿಶ್ವಾಸಾರ್ಹತೆಯೇ ಪ್ರಶ್ನಾರ್ಹವಾಗಿದೆ. ಯಾಕೆಂದರೆ ಕೆ –ಸೆಟ್ ಅರ್ಹತೆ ಪಡೆದ ಕೆಲವರು ತಾವು ಕೊಟ್ಟ ಲಕ್ಷಗಳ ಬಗ್ಗೆ ಲಜ್ಜೆ ಬಿಟ್ಟು ಬೀಗುತ್ತಿರುತ್ತಾರೆ. ಪಿಎಚ್.ಡಿ ಪದವಿಗಳ ಮೌಲ್ಯಮಾಪನ ಪ್ರಕ್ರಿಯೆಯಂತೂ ಹಾಸ್ಯಾಸ್ಪದವಾಗಿದೆ. ವಿಶ್ವವಿದ್ಯಾಲಯಗಳಲ್ಲಿ ಕಳೆದೆರಡು ದಶಕಗಳಲ್ಲಿ ದುಡ್ಡು ಕೊಟ್ಟು ನೇಮಕಗೊಂಡವರಲ್ಲಿ ಕೆಲವು ಅಧ್ಯಾಪಕರು ತಾವು ಮಾರ್ಗದರ್ಶಕರಾಗಲು, ತಾವೇ ಮಹಾಪ್ರಬಂಧ ಬರೆಸಿಕೊಡಲು ಇಂತಿಷ್ಟು ದರ ನಿಗದಿ ಮಾಡಿ ವ್ಯಾಪಾರಕ್ಕಿಳಿದಿರುವುದು ಮುಚ್ಚಿಟ್ಟ ಸಂಗತಿಯೇನೂ ಅಲ್ಲ. ಪಿಎಚ್.ಡಿ ಪದವಿ ಆಕಾಂಕ್ಷಿಗಳು ಇದೆಲ್ಲಾ ವ್ಯವಹಾರವನ್ನು ನಿರ್ವಹಿಸಿ ನಿರಾಯಾಸವಾಗಿ ಪದವಿ ಪಡೆದು 'ಇಷ್ಟು ಲಕ್ಷ ಹೋಯಿತು, ಅಂತೂ ಡಾಕ್ಟರ್ ಆದೆ, ಇನ್ನೇನಿದ್ದರೂ ಕುಲಪತಿಗಳ ಸೂಟ್‌ಕೇಸ್ ತುಂಬಿಸುವುದಷ್ಟೆ ಬಾಕಿ' ಅನ್ನುತ್ತಾರೆ.

ನೇಮಕಾತಿ ನಂತರವೂ ಬಡ್ತಿಗಾಗಿ ನಡೆಸುವ ಪ್ರಯತ್ನಗಳು ಇನ್ನೂ ಅಸಹ್ಯವಾಗಿವೆ. ಸಹ ಪ್ರಾಧ್ಯಾಪಕ/ ಪ್ರಾಧ್ಯಾಪಕರಾಗಲು ನಿಗದಿತ ಅವಧಿಯಲ್ಲಿ ಇಂತಿಷ್ಟು ಪ್ರಕಟಣೆಗಳು ಇರಬೇಕು; ಅವುಗಳು ಐಎಸ್ಎಸ್ಎನ್/ಐಎಸ್‌ಬಿಎನ್ ನಂಬರ್ ಹೊಂದಿರಬೇಕು ಮತ್ತು ಯುಜಿಸಿ ಕೇರ್‌ಲಿಸ್ಟ್‌ನಲ್ಲಿರುವ ನಿಯತಕಾಲಿಕಗಳಲ್ಲಿ ಪ್ರಕಟವಾಗಿರಬೇಕು ಎಂಬೆಲ್ಲಾ ನಿಯಮಗಳಿವೆ. ಈ ಯಾವುವೂ ಅಧ್ಯಾಪಕರಿಗೆ ಸಮಸ್ಯೆಯೇ ಅಲ್ಲ ಎನ್ನುವಷ್ಟರ ಮಟ್ಟಿಗೆ ಆನ್‌ಲೈನ್ ನಿಯತಕಾಲಿಕಗಳಲ್ಲಿ ಬೇಕಾದವರಿಗೆ ಬೇಕಾದ ಅವಧಿಗೆ ಪ್ರಕಟಣೆಗಳನ್ನು ಹೊಂದಿಸಿಕೊಡುವ ದೊಡ್ಡ ಜಾಲವೇ ಇದೆ.

ಪ್ರಶ್ನಿಸಲಾರದ ಅಸಹಾಯಕತೆ ಅನೇಕರನ್ನು ಕಾಡುತ್ತಿದೆ. ಬೌದ್ಧಿಕ ಭ್ರಷ್ಟಾಚಾರದ ಈ ವ್ಯಾಪಕತೆಯು ಇಡೀ ಉನ್ನತ ಶಿಕ್ಷಣದ ಮೌಲಿಕತೆಯನ್ನೇ ನಾಶಪಡಿಸಿದೆ. ಪ್ರಾಮಾಣಿಕ, ಅಧ್ಯಯನಶೀಲ ಪ್ರಾಧ್ಯಾಪಕರು ತಮ್ಮ ಪಾಡಿಗೆ ತಾವಿರುವ ಸುರಕ್ಷಿತ ಪಥದಲ್ಲಿ ಇರುವುದು ಅನಿವಾರ್ಯವಾಗಿದೆ. ಒಟ್ಟಾರೆ, ಉನ್ನತ ಶಿಕ್ಷಣದಲ್ಲಿ ಉನ್ನತ ಆಲೋಚನೆಗಳು ಇಳಿಮುಖವಾಗುತ್ತಿರುವುದಂತೂ ಸತ್ಯ.

ಈ ಹೊತ್ತಿನ ವಿದ್ಯಾರ್ಥಿಗಳಲ್ಲಿ ಭಾಷೆ, ಸಂಸ್ಕೃತಿ, ವಿಜ್ಞಾನ ವಿಷಯಗಳ ಕುರಿತಾಗಿ ಆಳವಾದ ಜ್ಞಾನ ಪಡೆಯಬೇಕೆಂಬ ಉತ್ಸಾಹವೇ ಕಾಣುತ್ತಿಲ್ಲ. ಕಲಿಕೆ ಮತ್ತು ಬೋಧನಾ ವಿಧಾನಗಳಲ್ಲಿ ತಂತ್ರಜ್ಞಾನದ ಅತಿ ಬಳಕೆಯಿಂದ ಮಾಹಿತಿ ಪಡೆಯುವುದು ಮುಖ್ಯವಾಗಿದೆಯೇ ವಿನಾ ಮಾಹಿತಿಯನ್ನು ಜ್ಞಾನವನ್ನಾಗಿಸುವ, ಜ್ಞಾನವನ್ನು ವಿವೇಕವನ್ನಾಗಿಸುವ ಪ್ರಯತ್ನಗಳೇ ಕಾಣುತ್ತಿಲ್ಲ. ಯುವಜನರು ಕೌಶಲರಹಿತ ಪದವಿಗಳ ಪ್ರಮಾಣಪತ್ರಗಳನ್ನು ಪಡೆದು ಕನ್ನಡ, ಇಂಗ್ಲಿಷ್ ಭಾಷೆಗಳ ಪರಿಣಾಮಕಾರಿ ಸಂವಹನ ಸಾಧ್ಯವಾಗದೆ ಇತ್ತ ಕೃಷಿ, ಕರಕುಶಲ ಕೈಗಾರಿಕೆಗಳಲ್ಲಿ ಸೃಷ್ಟಿಶೀಲರಾಗಿ ತೊಡಗಿಸಿಕೊಳ್ಳಲಾಗದೆ ಅತಂತ್ರರಾಗುತ್ತಿದ್ದಾರೆ. ಪದವಿಯಲ್ಲಿ ಸೆಮಿಸ್ಟರ್‌ಗಳ ಕಾರಣದಿಂದ ಅಂಕಗಳಿಕೆ ಏರುಮುಖವಾಗಿದೆಯೇ ವಿನಾ ಅದು ಜ್ಞಾನ ಮತ್ತು ಕೌಶಲಗಳ ಪ್ರಕಾಶದಲ್ಲಿ ಕಾಣುತ್ತಿಲ್ಲ. ಈ ಬಗೆಯ ಕೊರತೆ ಸ್ನಾತಕೋತ್ತರ ಪದವಿಗಳಲ್ಲೂ ಮುಂದುವರಿದು, ಪದವಿ ಪ್ರಮಾಣಪತ್ರ ಪ್ರದಾನದ ಸಂಖ್ಯೆಯ ಏರುಗತಿ ಮಾತ್ರ ರಾಚುತ್ತದೆ. ಪ್ರಮಾಣಪತ್ರ ಹಿಡಿದು ಹೊರಟವರ ಕೈಗೆ ಉದ್ಯೋಗ ಸಿಗುತ್ತಿಲ್ಲ. ನೀರೇ ಇಲ್ಲದ ಕೆರೆಗಳಲ್ಲಿ ಮೀನು ಹಿಡಿಯಲು ಬಲೆ ಕೊಟ್ಟು ಕಳಿಸುವಂತಾಗಿದೆ ನಮ್ಮ ಉನ್ನತ ಶಿಕ್ಷಣ.

ಸಮಾಜದ ಓರೆಕೋರೆ ತಿದ್ದುವ ಸಾಮರ್ಥ್ಯ ತೋರಬೇಕಾದ ಅಧ್ಯಾಪಕರಲ್ಲಿ ಅನೇಕರು ಬೌದ್ಧಿಕ ಕ್ಷಮತೆ ಹೊಂದಿಲ್ಲದಿರುವುದು ಮಾತ್ರವಲ್ಲ, ಪಿಎಚ್.ಡಿ ಮಾರ್ಗದರ್ಶನಕ್ಕಾಗಿ ಸಂಶೋಧನಾ ವಿದ್ಯಾರ್ಥಿಗಳ ಶೋಷಣೆ ಮಾಡುತ್ತಿರುವುದು ಕಂಡೂ ಕಾಣದಂತಹ ಸತ್ಯವಾಗಿದೆ. ಹೀಗಿರುವಾಗ ಕೇವಲ ಸಂಖ್ಯೆಗಳ ಬೆನ್ನು ಬೀಳದೆ ಹಿಂದೆ ಇದ್ದ ವಿವಿಗಳಲ್ಲಿಯೇ ಜಾಗತಿಕ ಗುಣಮಟ್ಟವನ್ನು ಸಾಧಿಸಬೇಕಾಗಿದೆ. ದೇಶದ ಸಾವಿರಕ್ಕೂ ಹೆಚ್ಚು ವಿವಿಗಳಲ್ಲಿ ಕೇವಲ ಎರಡು ಮಾತ್ರ ಜಾಗತಿಕ ಗುಣಮಟ್ಟದೊಂದಿಗೆ ಸ್ಪರ್ಧಿಸಬಲ್ಲವು ಎಂಬ ಸಮೀಕ್ಷೆಯೇ ವಿವಿಗಳು ಯಾಕೆ ಬೇಕು ಎನ್ನುವ ಪ್ರಶ್ನೆಗೆ ಉತ್ತರ.

ಎಲ್ಲರಿಗೂ ಎಲ್ಲೆಡೆಯೂ ಶಿಕ್ಷಣ ಎಂಬ ಸದಾಶಯವನ್ನು ಕೇವಲ ಪ್ರಮಾಣಪತ್ರಗಳ ಸರಕಾಗಿಸದೆ ವಿದ್ಯೆಯ ವಿವೇಕದ ಮೂಲಕ ಮಾನವೀಯ ಸಮಾಜ ನಿರ್ಮಾಣದ ಸಾಧನವನ್ನಾಗಿ ಮಾಡಬೇಕಾಗಿದೆ. ವಿಶ್ವವಿದ್ಯಾಲಯಗಳೆಂಬ ಬಿಳಿಯಾನೆಗಳನ್ನು ಸಾಕುವ ಅನಿವಾರ್ಯ ಒತ್ತಡದಲ್ಲಿ ರಾಜಕಾರಣದ ದುರುದ್ದೇಶಗಳೂ ಬೆರೆತು ಅತ್ಯುತ್ತಮ ಬೌದ್ಧಿಕ ಸಂವಾದ ಕೇಂದ್ರಗಳಾಗಬೇಕಿದ್ದ ವಿಶ್ವವಿದ್ಯಾಲಯಗಳು ಬಹುಪಾಲು ಅಶೈಕ್ಷಣಿಕ ಚಟುವಟಿಕೆಗಳ ಆಡುಂಬೊಲವಾಗಿವೆ. ಆದ ಕಾರಣ ಸಮಸಮಾಜದ ಕನಸುಳ್ಳ ಅಧ್ಯಾಪಕ ಸಮುದಾಯ, ನಿಷ್ಠುರ ಹಾಗೂ ಪಾರದರ್ಶಕ ಆಡಳಿತ ಮತ್ತು ವೈಜ್ಞಾನಿಕ ಎಚ್ಚರವನ್ನು ಸಾಧಿಸುವ ಗುರಿಯೊಂದಿಗೆ ಸಂಖ್ಯೆ ಕಡಿಮೆಯಾದರೂ ಕಳಪೆಯಾಗದಂತಹ ಗುಣಪ್ರಕಾಶನ ಕೇಂದ್ರಗಳಾಗಿ ವಿಶ್ವವಿದ್ಯಾಲಯಗಳು ಬೆಳಗಬೇಕು.

ಲೇಖಕ: ನಿವೃತ್ತ ಪ್ರಾಧ್ಯಾಪಕ

ರಾಜ್ಯದ ಯುವಜನರನ್ನು ಉನ್ನತ ಶಿಕ್ಷಣದಿಂದ ಹೊರಗಿಡುವ ಕ್ರಮ



ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಒಂಬತ್ತು ವಿ.ವಿಗಳನ್ನು ಮುಚ್ಚುವ ಬಗ್ಗೆ ಮಾತನಾಡುವ ಉನ್ನತ ಶಿಕ್ಷಣ ಸಚಿವರಿಗೆ, ಕಾಂಗ್ರೆಸ್ ನೇತೃತ್ವದ ಸರ್ಕಾರವೇ ಪ್ರಾರಂಭಿಸಿದ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಕೇವಲ 10 ಜನ ಕಾಯಂ ಬೋಧಕರು ಹಾಗೂ ಕೋಲಾರದ ಉತ್ತರ ವಿಶ್ವವಿದ್ಯಾಲಯದಲ್ಲಿ ಒಬ್ಬರೇ ಕಾಯಂ ಬೋಧಕರು ಇರುವುದು ಗಮನಕ್ಕೆ ಬಂದಿಲ್ಲವೆ?

• ಕೆ.ವೈ.ನಾರಾಯಣಸ್ವಾಮಿ/ಮೇಟಿ ಮಲ್ಲಿಕಾರ್ಜುನ

ಶಿಕ್ಷಣ ಎನ್ನುವುದು ಒಂದು ಆಯುಧ. ಅದು ಮನುಷ್ಯರನ್ನು ಬಡತನ, ಶೋಷಣೆ, ಗುಲಾಮಗಿರಿತನ ಹಾಗೂ ಮೂಢನಂಬಿಕೆ-ಕಂದಾಚಾರಗಳಿಂದ ಬಿಡುಗಡೆಗೊಳಿಸುವ ದಾರಿ ಎಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಹೇಳಿದ್ದಾರೆ.

ಕರ್ನಾಟಕದಲ್ಲಿ ದೇವರಾಜ ಅರಸು ಸರ್ಕಾರದ ಮುನ್ನೋಟದ ಫಲವಾಗಿ ಸಾವಿರಾರು ವಿದ್ಯಾರ್ಥಿ ನಿಲಯಗಳು ಆರಂಭಗೊಂಡಿದ್ದರಿಂದ ತಳಸಮುದಾಯಗಳ ಮಕ್ಕಳು ಬೆರಳೆಣಿಕೆಯಷ್ಟಾದರೂ ಉನ್ನತ ಶಿಕ್ಷಣದ ಪ್ರಯೋಜನವನ್ನು ಪಡೆಯಲು ಅವಕಾಶವಾಯಿತು. ರಾಜ್ಯ ಮತ್ತು ಕೇಂದ್ರದ ಸರ್ಕಾರಿ ಮತ್ತು ಅರೆಸರ್ಕಾರಿ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅರ್ಹ ಅಭ್ಯರ್ಥಿಗಳು ಇಲ್ಲದೆ ಖಾಲಿ ಉಳಿದಿರುವ ಲಕ್ಷಾಂತರ ಬ್ಯಾಕ್‌ಲಾಗ್ ಹುದ್ದೆಗಳು, ಉನ್ನತ ಶಿಕ್ಷಣ ಸಂಸ್ಥೆಗಳ ಅಸಮರ್ಪಕ ಲಭ್ಯತೆ ಮತ್ತು ಹಂಚಿಕೆಯ ಕೊರತೆಯನ್ನು ಎತ್ತಿತೋರಿಸುತ್ತವೆ. ಕರ್ನಾಟಕದ ಉದಾಹರಣೆಯನ್ನೇ ನೋಡುವುದಾದರೆ, ಇಂದು 18ರಿಂದ 24ರ ವಯೋಮಾನದ ಸುಮಾರು 1.5 ಕೋಟಿ ಯುವಜನರಿದ್ದು, ಉನ್ನತ ಶಿಕ್ಷಣದ ಎಲ್ಲಾ ವಲಯಗಳೂ ಸೇರಿ ಕೇವಲ 24 ಲಕ್ಷ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿದ್ದಾರೆ. ಆದರೆ ಉನ್ನತ ಶಿಕ್ಷಣದಿಂದ ದೂರ ಉಳಿದ ಸುಮಾರು 1.20 ಕೋಟಿಗಿಂತಲೂ ಹೆಚ್ಚು ಯುವಜನರು ಯಾವ ಸಾಮಾಜಿಕ ಸಮುದಾಯಗಳಿಗೆ ಸೇರಿದವರು ಮತ್ತು ಇವರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಎಷ್ಟು ಎಂಬ ಸಂಗತಿಯನ್ನು ಗಮನಿಸಿದರೆ ಕರ್ನಾಟಕದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಉನ್ನತ ಶಿಕ್ಷಣ ಸಂಸ್ಥೆಗಳ ಪ್ರಮಾಣ ಕಡಿಮೆ ಇರುವುದು ಕೂಡ ಮುಖ್ಯವಾದ ಸಂಗತಿ ಎಂಬುದು ಮನವರಿಕೆಯಾದೀತು.

ಹೀಗಾಗಿಯೇ, ಉನ್ನತ ಶಿಕ್ಷಣದಲ್ಲಿ ಜಿಇಆರ್ (ಗ್ರಾಸ್ ಎನ್‌ರೋಲ್‌ಮೆಂಟ್ ರೇಶಿಯೊ) ಅನ್ನು ಹೆಚ್ಚು ಮಾಡುವ ಸಲುವಾಗಿಯೇ ಜಿಲ್ಲೆಗೊಂದು ವಿಶ್ವವಿದ್ಯಾಲಯ ತೆರೆಯುವ ಪ್ರಸ್ತಾಪವನ್ನು ಯುಜಿಸಿ ಮಂಡಿಸಿದೆ. ಇಂದು ಕರ್ನಾಟಕದ ಜಿಇಆರ್ ದಕ್ಷಿಣ ರಾಜ್ಯಗಳಲ್ಲಿಯೇ ಕಡಿಮೆ ಇದೆ (36.2%). ಪಕ್ಕದ ತಮಿಳುನಾಡಿನಲ್ಲಿ ಇದು ಶೇ 47 ಇದೆ. ಇಂತಹ ವಾಸ್ತವದ ಸ್ಥಿತಿಯನ್ನು ಮರೆಮಾಚಿ, ರಾಜ್ಯ ಸರ್ಕಾರದ ಸಂಪುಟ ಉಪಸಮಿತಿಯು ಹಿಂದಿನ ಬಿಜೆಪಿ ಸರ್ಕಾರ ಯಾವುದೇ ಪೂರ್ವಸಿದ್ಧತೆ ಇಲ್ಲದೆ ಏಳು ವಿವಿಗಳನ್ನು ಆರಂಭಿಸಿತು ಎಂಬ ರಾಜಕೀಯ ಕಾರಣವನ್ನು ಮುಂದು ಮಾಡಿ ವಿವಿಗಳನ್ನು ಮುಚ್ಚುವ, ಇಲ್ಲವೇ ಹತ್ತಿರದ ಹಳೆಯ ವಿವಿಗಳಲ್ಲಿ ವಿಲೀನಗೊಳಿಸುವ ಅವೈಜ್ಞಾನಿಕ ಪ್ರಸ್ತಾವವನ್ನು ಮುಂದಿಟ್ಟಿರುವುದು ಹಿಂದುಳಿದ ಪ್ರದೇಶಗಳ ಬಡ ವಿದ್ಯಾರ್ಥಿಗಳನ್ನು ಮುಖ್ಯವಾಗಿ ಹೆಣ್ಣುಮಕ್ಕಳನ್ನು ಉನ್ನತ ಶಿಕ್ಷಣದಿಂದ ವಂಚಿಸುವ ಕೆಲಸವೇ ಆಗಿದೆ.

ಯಾವ ಪೂರ್ವಸಿದ್ಧತೆ ಇಲ್ಲದೆ ವಿವಿಗಳನ್ನು ಆರಂಭಿಸಲಾಗಿದೆ ಎಂದು ಆಪಾದಿಸುವ ಕಾಂಗ್ರೆಸ್ ನೇತೃತ್ವದ ಸರ್ಕಾರ, ಯಾವುದೇ ಪೂರ್ವಸಿದ್ಧತೆ ಇಲ್ಲದೆ ಅವುಗಳನ್ನು ಮುಚ್ಚುವ ಪ್ರಸ್ತಾವ ಮಾಡಿರುವುದು ಕೂಡ ಅಂತಹುದೇ ಆತುರದ ನಿರ್ಧಾರವಾಗುವುದಿಲ್ಲವೆ? ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ವಿವಿಗಳನ್ನು ಮುಚ್ಚುವ ಬಗ್ಗೆ ಮಾತನಾಡುವ ಶಿಕ್ಷಣ ಸಚಿವರಿಗೆ, ಕಾಂಗ್ರೆಸ್ ನೇತೃತ್ವದ ಸರ್ಕಾರವೇ ಪ್ರಾರಂಭಿಸಿದ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಕೇವಲ 10 ಜನ ಕಾಯಂ ಬೋಧಕರು ಹಾಗೂ ಕೋಲಾರದ ಉತ್ತರ ವಿಶ್ವವಿದ್ಯಾಲಯದಲ್ಲಿ ಒಬ್ಬರೇ ಕಾಯಂ ಬೋಧಕರು ಕಾರ್ಯನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿಲ್ಲವೆ? ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟವೇ ವಿಶ್ವವಿದ್ಯಾಲಯವನ್ನು ಮುಚ್ಚುವ ಮಾನದಂಡವಾದರೆ ಮೊದಲು ನಗರ ಹಾಗೂ ಉತ್ತರ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಮೂಲಕ ವಿದ್ಯಾರ್ಥಿಗಳ ಹಿತಕಾಯುವುದು ನ್ಯಾಯವಲ್ಲವೆ?

2016ರಲ್ಲಿ ಇದೇ ಕಾಂಗ್ರೆಸ್ ನೇತೃತ್ವದ ಸರ್ಕಾರ ಶಿಕ್ಷಣದ ವಿಕೇಂದ್ರೀಕರಣದ ಮೂಲಕ ಪ್ರಾದೇಶಿಕ ನ್ಯಾಯವನ್ನು ಮುಂದು ಮಾಡಿ ಪ್ರಾರಂಭಿಸಿದ ಕೋಲಾರ ಉತ್ತರ ವಿವಿಗೆ ಅಗತ್ಯವಿರುವ ಕನಿಷ್ಠ ಸಂಖ್ಯೆಯ ಬೋಧಕರನ್ನು ನೇಮಿಸಲು ಮುಂದಾಗದ ಸರ್ಕಾರ ಹೊಸ ವಿವಿಗಳನ್ನು ಬಲಗೊಳಿಸಲು ಉನ್ನತ ಶಿಕ್ಷಣ ಪರಿಷತ್ತು ವಿನಂತಿಸಿದ್ದ ₹370 ಕೋಟಿ ಹಣ ಮಂಜೂರು ಮಾಡಲು ಕೈಚೆಲ್ಲಿರುವುದು ವಿಷಾದದ ಸಂಗತಿ. ಅಲ್ಲದೆ, ನೂರು ವರ್ಷ ಕಂಡಿರುವ ಮೈಸೂರು ವಿವಿಯೂ ಸೇರಿದಂತೆ ಹಳೆಯ, ಹೊಸ ವಿಶ್ವವಿದ್ಯಾಲಯಗಳಲ್ಲಿ ಮಂಜೂರಾದ ಹುದ್ದೆಗಳ (4,158) ಪೈಕಿ ಶೇ 59ರಷ್ಟು ಹುದ್ದೆಗಳು (2,266) ಹತ್ತಾರು ವರ್ಷಗಳಿಂದ ಖಾಲಿ ಇರುವುದು ಸಚಿವ ಸಂಪುಟದ ಸದಸ್ಯರ ಕಣ್ಣಿಗೆ ಕಾಣದಿರುವುದು ಪವಾಡವೇ ಸರಿ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಿವೃತ್ತ ಅಧ್ಯಾಪಕರಿಗೆ ನೀಡಲು ಪಿಂಚಣಿ ಹಣವಿಲ್ಲವೆಂಬುದು ವರದಿಯಾಗಿದೆ. ಆಂತರಿಕ ಸಂಪನ್ಮೂಲವಿದ್ದೂ ನಿವೃತ್ತಿವೇತನ ನೀಡಲಾಗದ ವಿವಿಯನ್ನು ಮುಚ್ಚುವ ನಿರ್ಧಾರವನ್ನು ಮುಂದೊಂದು ದಿನ ಸರ್ಕಾರ ತೆಗೆದುಕೊಂಡರೆ ಅಚ್ಚರಿಪಡಬೇಕಾಗಿಲ್ಲ.

ಮಾರುಕಟ್ಟೆ ನಿರ್ದೇಶಿತ ಸರ್ಕಾರಗಳಿಗೆ ವಿಶ್ವವಿದ್ಯಾಲಯಗಳೂ ಉತ್ಪಾದನಾ ಸಂಸ್ಥೆಗಳಂತೆ ಕಾಣುತ್ತಿರುವುದು ದುರಂತದ ಸಂಗತಿ. ಪ್ರಪಂಚದ ಮುಂದುವರಿದ ದೇಶಗಳು ಶಿಕ್ಷಣಕ್ಕೆ ಆದ್ಯತೆಯನ್ನು ಕೊಟ್ಟು ಗುಣಮಟ್ಟದ ಶಿಕ್ಷಣ ಮತ್ತು ಸಂಶೋಧನೆಗಳಿಗೆ ನೀಡಿದ ಆರ್ಥಿಕ ಉತ್ತೇಜನದಿಂದಾಗಿ ಆ ದೇಶಗಳ ವಿಶ್ವವಿದ್ಯಾಲಯಗಳು ಎಲ್ಲಾ ಕ್ಷೇತ್ರಗಳಲ್ಲಿ ಹೊಸ ಆವಿಷ್ಕಾರಗಳನ್ನು ಕಂಡುಹಿಡಿಯಲು ಸಾಧ್ಯವಾಯಿತು. ಅಮೆರಿಕ, ಬ್ರಿಟನ್‌ನಂತಹ ದೇಶಗಳ ಕೈಗಾರಿಕೆಗಳು ವಿಶ್ವವಿದ್ಯಾಲಯಗಳಿಂದ ನಿರಂತರವಾಗಿ ಜ್ಞಾನವನ್ನು ಪಡೆಯುತ್ತಿರುವ ಕಾರಣ ಆ ದೇಶಗಳ ಪ್ರಗತಿಗೆ ಶಿಕ್ಷಣವೇ ತಳಹದಿಯಾಗಿದೆ. ಸರ್ವೋದಯ ಮತ್ತು ಸಾಮಾಜಿಕ ನ್ಯಾಯವನ್ನು ತಮ್ಮ ಚುನಾವಣಾ ಭಾಷಣಗಳಿಗೆ ಸೀಮಿತ ಮಾಡಿರುವ ನಮ್ಮ ಸರ್ಕಾರಗಳು ಉನ್ನತ ಶಿಕ್ಷಣಕ್ಕೆ ನೀಡಿರುವ ಮಹತ್ವವನ್ನು ತಿಳಿಯಲು ವಾರ್ಷಿಕ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಮೀಸಲಿಟ್ಟ ಹಣವನ್ನು ಗಮನಿಸಿದರೆ ಮನವರಿಕೆಯಾಗುತ್ತದೆ.

2019-20ರಲ್ಲಿ ರಾಜ್ಯ ಬಜೆಟ್‌ನ ಗಾತ್ರ ₹2,26,625 ಕೋಟಿ. ಇದರಲ್ಲಿ ಉನ್ನತ ಶಿಕ್ಷಣಕ್ಕೆ ₹5,487 ಕೋಟಿಗಳನ್ನು ನೀಡಲಾಗಿತ್ತು. 2024-25ರಲ್ಲಿ ರಾಜ್ಯದ ಬಜೆಟ್‌ನ ಗಾತ್ರ ₹3,71,383 ಕೋಟಿಗಳಾಗಿದ್ದು ಉನ್ನತ ಶಿಕ್ಷಣಕ್ಕೆ ಕೇವಲ ₹5,771 ಕೋಟಿ ಕಾಯ್ದಿರಿಸಲಾಗಿತ್ತು. ರಾಜ್ಯದ ಬಜೆಟ್ ಮೊತ್ತ ₹1,44,758 ಕೋಟಿಯಷ್ಟು ಹೆಚ್ಚಾದರೂ ಉನ್ನತ ಶಿಕ್ಷಣಕ್ಕೆ ಸಿಕ್ಕ ಹೆಚ್ಚು ಹಣ ಕೇವಲ ₹284 ಕೋಟಿ. ಈ ಅಂಕಿ ಅಂಶಗಳೇ ಸರ್ಕಾರದ ಮಲತಾಯಿ ಧೋರಣೆಯನ್ನು ಎತ್ತಿತೋರಿಸುತ್ತಿವೆ. ಸರ್ಕಾರ ತನ್ನ ಲೋಪಗಳನ್ನು ಮರೆಮಾಚಲು, ಆಂತರಿಕ ಸಂಪನ್ಮೂಲಗಳ ಕೊರತೆ ನೆಪವೊಡ್ಡಿ ಈಚೆಗೆ ಪ್ರಾರಂಭವಾಗಿದ್ದ ಹೊಸ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಮೂಲಕ ಬಹುದೊಡ್ಡ ಸಂಖ್ಯೆಯ ಯುವಜನರನ್ನು ಉನ್ನತ ಶಿಕ್ಷಣದಿಂದ ಹೊರಗಿಡುತ್ತಿದೆ. ಅಲ್ಲದೇ, ಈ ಪ್ರಕ್ರಿಯೆ ಉನ್ನತ ಶಿಕ್ಷಣದ ಖಾಸಗೀಕರಣಕ್ಕೆ ರತ್ನಗಂಬಳಿ ಹಾಸುತ್ತಿದೆ.

ಲೇಖಕರು: ಕೆ.ವೈ.ನಾರಾಯಣಸ್ವಾಮಿ ಅವರು ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿವಿಯಲ್ಲಿ ಪ್ರಾಧ್ಯಾಪಕ

ಮೇಟಿ ಮಲ್ಲಿಕಾರ್ಜುನ ಅವರು ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜಿನ ಭಾಷಾಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ

ಪ್ರಿಯಾ, ಶ್ರೇಯಸ್

'ವಿಷ್ಣು–ಪ್ರಿಯಾ'ಳ ಗಂಭೀರ ಪ್ರೇಮಕಥೆ

ನಾವು ನೋಡಿದ ಸಿನಿಮಾ

ವಿಷ್ಣುಪ್ರಿಯ (ಕನ್ನಡ)

- **ನಿರ್ದೇಶನ:** ವಿ.ಕೆ.ಪ್ರಕಾಶ್
- **ನಿರ್ಮಾಣ:** ಕೆ.ಮಂಜು
- **ತಾರಾಗಣ:** ಶ್ರೇಯಸ್ ಮಂಜು, ಪ್ರಿಯಾ ವಾರಿಯರ್, ಸುಚೇಂದ್ರ ಪ್ರಸಾದ್, ಅಚ್ಯುತ್ ಕುಮಾರ್ ಮತ್ತಿತರರು

ಕನ್ನಡದಲ್ಲಿ ಮಲಯಾಳದ ರೀತಿಯ ಸಿನಿಮಾಗಳು ಬರುವುದಿಲ್ಲ ಎಂಬುದಕ್ಕೆ ಅಪವಾದದಂತಿರುವ ಚಿತ್ರ 'ವಿಷ್ಣುಪ್ರಿಯ'. ನಿಧಾನವಾದ ಆರಂಭ, ಮಧ್ಯದಲ್ಲಿ ಟ್ವಿಸ್ಟ್, ಕುತೂಹಲಕಾರಿ ಅಂತ್ಯದೊಂದಿಗೆ ಮಲಯಾಳ ಸಿನಿಮಾದ ಅನುಭವ ನೀಡುವ ಚಿತ್ರವಿದು. ಇದಕ್ಕೆ ಕಾರಣ ನಿರ್ದೇಶಕ ವಿ.ಕೆ.ಪ್ರಕಾಶ್ ಮತ್ತು ಸಂಗೀತ ನಿರ್ದೇಶಕ ಗೋಪಿಸುಂದರ್. ಇಬ್ಬರೂ ಮಲಯಾಳ ಚಿತ್ರರಂಗದಲ್ಲಿ ಹೆಸರು ಮಾಡಿದವರು. ಆದರೂ ಇದು ಅಪ್ಪಟ ಕನ್ನಡದ ಚಿತ್ರ. ಈ ಹಿಂದೊಂದು ಕನ್ನಡ ಚಿತ್ರ ಮಾಡಿದ್ದ ನಿರ್ದೇಶಕರಿಗೆ ಕನ್ನಡ ಗೊತ್ತಿರುವುದರಿಂದ ಎಲ್ಲಿಯೂ ನೇಟಿವಿಟಿಗೆ ಧಕ್ಕೆ ಬರದಂತೆ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ.

ಕಥೆ ನಡೆಯುವುದು ಚಿಕ್ಕಮಗಳೂರಿನ ಗಿರಿಶಿಖರದ ತುತ್ತತುದಿಯಲ್ಲಿ. ಹೀಗಾಗಿ ದೃಶ್ಯ ವೈಭವದಿಂದಲೇ ಚಿತ್ರ ಪ್ರಾರಂಭವಾಗುತ್ತದೆ. ಶೀರ್ಷಿಕೆಯೇ ಹೇಳುವಂತೆ ಇದು ಕಾಲೇಜು ಹುಡುಗ ವಿಷ್ಣು ಮತ್ತು ಪ್ರಿಯಾಳ ಕಥೆ. ಆದರೆ ಮೊದಲಾರ್ಧದಲ್ಲಿ ಕಾಲೇಜಿನ ಸನ್ನಿವೇಶಗಳು ಹೆಚ್ಚು ಬರುವುದಿಲ್ಲ. ಈ ಎರಡು ಪಾತ್ರಗಳ ಮೇಲೆಯೇ ಅರ್ಧ ಸಿನಿಮಾ ಸಾಗುತ್ತದೆ. ಅವರಿಬ್ಬರ ಪ್ರೀತಿಯನ್ನು ನಿಧಾನಕ್ಕೆ ಕಟ್ಟಿಕೊಡುತ್ತ ಹೋಗುತ್ತಾರೆ. ಕಥೆ ಎಲ್ಲಿಗೂ ಸಾಗುತ್ತಲೇ ಇಲ್ಲ ಎನ್ನಿಸುವ ಹೊತ್ತಿಗೆ ಕೌಟಂಬಿಕ ಟ್ವಿಸ್ಟ್ ತರುತ್ತಾರೆ. ಅಲ್ಲಿಂದ ಚಿತ್ರ ವೇಗ ಪಡೆದುಕೊಳ್ಳುತ್ತದೆ.

ಇದು 90ರ ಕಾಲಘಟ್ಟದಲ್ಲಿ ನಡೆಯುವ ಕಥೆ. ಹೀಗಾಗಿ ಕಥೆ ಒಂದು ಚೌಕಟ್ಟಿನಲ್ಲಿ ನಡೆಯುತ್ತದೆ. ಸುತ್ತಲಿನ ಪರಿಸರ ಆ ಕಾಲಘಟ್ಟದ್ದು ಎಂದು ತೋರಿಸಲು ನಿರ್ದೇಶಕರು ಯತ್ನಿಸಿದ್ದಾರೆ. ಆದರೆ ನಟನಟಿಯರ ವೇಷಭೂಷಣದ ಮೇಲೆ ಸ್ವಲ್ಪ ಗಮನಹರಿಸುವ ಅಗತ್ಯವಿತ್ತು. ಚಿತ್ರದ ಮೊದಲಾರ್ಧದಲ್ಲಿ ಹೆಚ್ಚೇನು ಕಥೆ ನಡೆಯುವುದಿಲ್ಲ. ವಿಷ್ಣು ಮತ್ತು ಪ್ರಿಯಾಳ ಪ್ರೇಮದ ನಡುವೆ ಇಬ್ಬರ ಕುಟುಂಬದ ನಡುವಿನ ಸಂಘರ್ಷವನ್ನು ತಂದಿಡುತ್ತಾರೆ. ಅದನ್ನು ಬಿಡಿಸುವುದು ಚಿತ್ರದ ದ್ವಿತೀಯಾರ್ಧ.

ಹಾಸ್ಯ ಕುರಿತು ನಿರ್ದೇಶಕರು ಹೆಚ್ಚು ತಲೆಕೆಡಿಸಿಕೊಂಡಂತೆ ಕಾಣುವುದಿಲ್ಲ. ಭಾವತೀವ್ರವಾದ, ಗಂಭೀರವಾದ ಪ್ರೇಮಕಥೆಯನ್ನೇ ಹೇಳಿಕೊಂಡು ಹೋಗುತ್ತಾರೆ.

ಇಡೀ ಚಿತ್ರದ ಶಕ್ತಿ ಗೋಪಿಸುಂದರ್ ಹಿನ್ನೆಲೆ ಸಂಗೀತ ಮತ್ತು ವಿನೋದ್ ಭಾರತಿ ಅವರ ಛಾಯಾಚಿತ್ರಗ್ರಹಣ. ಆದರೆ ಹಾಡಿನಲ್ಲಿ ಈ ಸೊಬಗು ಕಾಣುವುದಿಲ್ಲ. ಒಂದು ಹಾಡು ಮಾತ್ರ ಮತ್ತೆ ಗುನುಗಿಕೊಳ್ಳುವಂತಿದೆ. ಶ್ರೇಯಸ್ ಮಂಜು ನಟನೆಯಲ್ಲಿ ಹಿಂದಿನ ಸಿನಿಮಾಗಳಿಗಿಂತ ತುಸು ಪಕ್ವವಾಗಿದ್ದಾರೆ. ಪ್ರಿಯಾ ವಾರಿಯರ್ ಕಣ್ಸನ್ನೆಯಿಂದಲೇ ಮಾತಾಡುತ್ತಾರೆ. ಅದದೇ ಜಾಗ, ಅದದೇ ಪಾತ್ರಗಳ ಸುತ್ತ ಕಥೆ ಸಾಗುವುದನ್ನು ಸ್ವಲ್ಪ ತಗ್ಗಿಸಿ ಚಿತ್ರದ ಅವಧಿಯನ್ನು 15–20 ನಿಮಿಷ ಕಡಿಮೆ ಮಾಡುವ ಅವಕಾಶ ನಿರ್ದೇಶಕರಿಗಿತ್ತು.

ವಿನಾಯಕ ಕೆ.ಎಸ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5961

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

3.ರಣಧೀರನು ಕಾಳಗ ನಡೆಸಿದ ಜಾಗ (4)
5.ಯಜಮಾನನ ಸ್ವಭಾವ (4)
6.ದಾರಿಯಲ್ಲಿ ನಡೆದು ಹೋಗುತ್ತಿರುವವನು (4)
8.ಕಳ್ಳನ ಬಗ್ಗೆ ಇಷ್ಟು ಆಸಕ್ತಿಯೇ? (4)
11.ಜೇನುನೊಣ ಹೀರುತ್ತಿರುವ ಹೂವಿನ ಸಿಹಿರಸ (4)
14.ಸವಿಯಾದ ವಿವರಗಳನ್ನೊಳಗೊಂಡಿದ್ದು! (4)
15.ಪ್ರಯಾಣದ ನಡುವೆ ಕರವಿಟ್ಟ ಘಟನೆ! (4)
16.ನಡುವೆ ಗರ ತಿರುಗಿಸಿದರೆ ಆಧೀನ (4)

ಮೇಲಿಂದ ಕೆಳಕ್ಕೆ

1.ಬ್ರಹ್ಮ ಎನ್ನುವ ಅರ್ಥದ ಸಂವತ್ಸರ (4)
2.ನಡುವಿರುವ ಮಾಣಿ ಬಲು ನಂಬಿಕಸ್ಥ! (4)
3.ದಾಳಿ ನಡೆಸಿ ತಿಂದಿದ್ದು ಶ್ರೇಷ್ಠಕಬ್ಬು (4)
4.ಗಣಕ್ಕೆಲ್ಲಾ ಗಣಿತ ಕಲಿಸಿದ ಕರಣಿಕ (3)
7.ಹೇಳಿಕೆಯಿಂದಲೇ ಮಾಡಿದ ಸಾಮ್ಯ! (3)
9.ಕಳ್ಳನಿಗೆ ದೋಷ ಅಂಟಿಕೊಂಡಿದೆಯಲ! (3)
10.ಕೊಡದಂತಹ ದೊಡ್ಡ ಪಾತ್ರೆ (3)
11.ಮರದ ಕೆಳಗೆ ಸಿಕ್ಕಿರುವ ಪಚ್ಚೆ (4)
12.ಕಸರತ್ತು ಮಾಡಿ ಹಾಕಿದ ಸಹಿ (4)
13.ಈ ಪರಿ ಆಗಿರುವ ಲಗ್ನ (4)
14.ಸರಿಗೆ ತಂದವನು ಸರಿಸಮನಾದವನು (3)

5960ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಂಕರಿ 4.ಮದನ
6.ಅರಮನೆ 7.ಸೊಡರು
8.ಕನ 9.ನಾರಿ
12.ಪರದೆ 14.ವಾನಪ್ರಸ್ಥ
15.ಸನ್ಯಾಸಿ 16.ಜನನಿ

ಮೇಲಿಂದ ಕೆಳಕ್ಕೆ:
2.ಕನ್ನಡ 3.ಶರವರ್ಷ
4.ಮನೆತನ 5.ನಗೆಯಮಾರಿತಂದೆ
7.ಸೊಡ್ಡಳಬಾಚರಸ
10.ಬನವಾಸಿ 11.ದಿನಂಪ್ರತಿ
13.ರಸನ

ಸುಡೊಕು 6346

6		4				7		8
	9			7	1			
1				4	8			6
		1				9		
			3	9	7		5	4
7		9				8		
5				6		4		
4					3		2	
	6				4		7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6345 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಫೆಬ್ರುವರಿ 22, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ನವಮಿ ಗಂ. 13-20 ನಕ್ಷತ್ರ: ಜ್ಯೇಷ್ಠ ಗಂ. 17-40 ಯೋಗ: ಹರ್ಷಣ ಗಂ. 11-56 ಕರಣ: ಗರ ಗಂ. 13-20, ಕುಂಭ ಮಾಸದ 10 ನೇ ದಿನ, ಮಳೆನಕ್ಷತ್ರ: ಶತಭಿಷ 1.

ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-54 **ಸೂರ್ಯಾಸ್ತ :** 06-34
ಮುಸ್ಲಿಂ ದಿನಾಂಕ : 23 ಶಬನ್
ಅದೃಷ್ಟ ಸಂಖ್ಯೆ : 1, 9

ಮೇಷ: ಕಠಿಣ ಪ್ರಯತ್ನಗಳು ಫಲಕಾರಿಯಾಗಿ, ಆರ್ಥಿಕವಾಗಿ ಅನುಕೂಲ ಉಂಟಾಗುವುದು. ದೊಡ್ಡ ಸಾಧನೆಯ ನಂತರದಲ್ಲಿ ವಿರಾಮವನ್ನು ಯೋಚಿಸಲಿಕ್ಕೂ ಹೋಗಬೇಡಿ. ಹಿನ್ನಡೆ ಉಂಟುಮಾಡುತ್ತದೆ.

ವೃಷಭ: ಕಾರ್ಯಕ್ಷೇತ್ರದಲ್ಲಿ ಅತಿ ಚಾಣಾಕ್ಷ ವರ್ತನೆ ತೋರಿಸುವುದರಿಂದ ಊರಿನಲ್ಲಿ ಅಥವಾ ವಂಶದಲ್ಲಿ ಮುಖ್ಯಸ್ಥನಾಗುವ ಯೋಗವಿದೆ. ಕುಟುಂಬದ ಜತೆಯಲ್ಲಿ ಸಮಯವನ್ನು ಕಳೆಯುವಿರಿ.

ಮಿಥುನ: ವಿದ್ಯಾರ್ಥಿಗಳು ಕೇವಲ ಶೈಕ್ಷಣಿಕ ಪಾಠವಲ್ಲದೇ, ಇತರೆ ಚಟುವಟಿಕೆಗಳಿಗೂ ಅಲ್ಪಸಮಯ ನೀಡಿ. ಶೀಘ್ರ ಹಾಗೂ ಸಕಾಲಿಕ ನಿರ್ಧಾರಗಳು ಹಣಕಾಸಿನ ಲಾಭ ತರುತ್ತದೆ. ರೈತಾಪಿ ವರ್ಗದವರು ನೆನೆಸಿದ ಕಾರ್ಯಗಳು ಕೈಗೂಡುವುದು.

ಕರ್ಕಾಟಕ: ವೈಯಕ್ತಿಕ ಜೀವನದಲ್ಲಿನ ಅಸ್ಪಷ್ಟ ವಿಚಾರಗಳನ್ನು ಸ್ಪಷ್ಟಪಡಿಕೊಳ್ಳುವ ದಿಕ್ಕಿನಲ್ಲಿ ಅತ್ಯಂತ ಆಪ್ತರು ಅಥವಾ ಗುರುವಿನೊಂದಿಗೆ ಸಂಭಾಷಣೆ ಮಾಡಬೇಕಾಗುತ್ತದೆ.

ಸಿಂಹ: ವಿನಾ ಕಾರಣ ಯಾವುದೇ ವಿವಾದಕ್ಕೆ ಸಿಲುಕದಿರಿ. ಹೊರ ದೇಶಕ್ಕೆ ಹೋಗುವ ನಿಮ್ಮ ಕನಸಿಗೆ ಪುಷ್ಟಿ ಸಿಗುವುದು. ಸಂಸ್ಥೆಯ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳುವಿರಿ.

ಕನ್ಯಾ: ದೇಹದಲ್ಲಿ ರಕ್ತದ ಒತ್ತಡ ಅಥವಾ ಮೂತ್ರ ಸಂಬಂಧದ ದೋಷಗಳ ಬಗ್ಗೆ ಜಾಗ್ರತೆ ವಹಿಸಿ. ಧೈರ್ಯ ಮತ್ತು ಬುದ್ಧಿವಂತಿಕೆಯ ಮಾತುಗಳು ಕಾಪಾಡಲಿವೆ. ದೈವಾನುಗ್ರಹದಿಂದ ಅಭೀಷ್ಟ ನೆರವೇರುವುದು.

ತುಲಾ: ಚಟುವಟಿಕೆಗಳಿಂದ ಸಮಾಜದಲ್ಲಿ ಉತ್ತಮ ಸಂಪರ್ಕ ಆಗುವುದು. ಲೇವಾದೇವಿ ವ್ಯವಹಾರದಲ್ಲಿ ಭಾಗಶಃ ಅನುಕೂಲವಿದೆ. ಕೈಗೊಂಡ ನಿರ್ಧಾರವನ್ನು ಬದಲಿಸಬೇಕಾಗಬಹುದು.

ವೃಶ್ಚಿಕ: ಧಾರ್ಮಿಕ ವ್ಯಕ್ತಿಯ ಭೇಟಿಯು ಬದುಕಿನಲ್ಲಿ ಆಶ್ಚರ್ಯಕರ ಬದಲಾವಣೆಯನ್ನು ಮಾಡುವುದು. ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲು ಸರಿಯಾದ ದಿನ. ಭೂ ಖರೀದಿಯ ಯೋಗವಿದೆ.

ಧನು: ಮನಸ್ಸಿನ ಅವ್ಯಕ್ತ ಭಾವನೆಗಳನ್ನು ಆತ್ಮೀಯರೊಡನೆ ವ್ಯಕ್ತಪಡಿಸಲು ಸೂಕ್ತ. ಮನೆಗೆ ಆಲಂಕಾರಿಕ ಅಥವಾ ಗೃಹೋಪಯೋಗಿ ವಸ್ತುಗಳನ್ನು ಖರೀದಿಸಬಹುದು. ಸಾಲದ ಮರುಪಾವತಿಯ ಬಗ್ಗೆ ಹೆಚ್ಚಿನ ಗಮನವಿರಲಿ.

ಮಕರ: ನೂತನ ಮನೆ ಖರೀದಿಯ ಅಥವಾ ನಿವೇಶನ ಖರೀದಿಯ ಆಲೋಚನೆಗಳಿಗೆ ಪೂರಕ ವಾತಾವರಣ ಸ್ನೇಹಿತರಿಂದ ಸಿಗಲಿದೆ. ವಿಳಂಬವಾಗಿದ್ದ ಕಾರ್ಯಗಳು ಸಮೂಹಕಾರ್ಯದಿಂದ ಚುರುಕುಗೊಳ್ಳುವುದು.

ಕುಂಭ: ಕೆಲಸದಲ್ಲಿ ಪ್ರಮುಖ ಬದಲಾವಣೆಯನ್ನು ಜಾರಿಗೊಳಿಸಬೇಕಾಗುವುದು. ಇಲ್ಲವಾದಲ್ಲಿ ನಷ್ಟದ ಪರಿಸ್ಥಿತಿಯು ಗಮನಕ್ಕೆ ಬರಲಿದೆ. ಬಹಳ ದಿನಗಳ ನಂತರ ಸಾಲ ಮಾರುಪಾವತಿ ಮಾಡಲು ಕಾಲ ಕೂಡಿಬರಲಿದೆ.

ಮೀನ: ಸತ್ಕಾರ್ಯಗಳ ನಿರ್ವಹಣೆಗೆ ಸಹಾಯ ಕೋರಿ ಬರುವವರಿಗೆ ನಿಮ್ಮಿಂದಾಗುವ ಸಹಾಯವನ್ನು ಮಾಡುವುದರಿಂದ ಶ್ರೀರಕ್ಷೆಯಾಗಲಿದೆ. ಏಕಾಗ್ರತೆ ಹೆಚ್ಚಿಸಲು ಧ್ಯಾನ ಮಾಡಿ.

ನಕಲಿ ನೋಟು ಮುದ್ರಣ ಘಟಕ ಪತ್ತೆ: ಆರೋಪಿಗಳ ಸೆರೆ

ನವದೆಹಲಿ (ಪಿಟಿಐ): ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ದೇಶದ ವಿವಿಧೆಡೆ ಕಾರ್ಯಾಚರಣೆ ನಡೆಸಿ ನಕಲಿ ನೋಟು ಮುದ್ರಿಸುತ್ತಿದ್ದ ಏಳು ಘಟಕಗಳನ್ನು ಪತ್ತೆ ಹಚ್ಚಿದ್ದಾರೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಶುಕ್ರವಾರ ತಿಳಿಸಿದೆ.

ಮಹಾರಾಷ್ಟ್ರ, ಹರಿಯಾಣ, ತೆಲಂಗಾಣ, ತಮಿಳುನಾಡು ಹಾಗೂ ಬಿಹಾರದ ಒಟ್ಟು 11 ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಲಾಗಿದೆ. ₹50 ಹಾಗೂ ₹100 ಮುಖಬೆಲೆಯ ನಕಲಿ ನೋಟುಗಳ ಮುದ್ರಣದಲ್ಲಿ ತೊಡಗಿದ್ದನ್ನು ಪತ್ತೆ ಹಚ್ಚಿದ್ದಾರೆ ಎಂದು ತಿಳಿಸಿದೆ.

ಕಾನೂನುಬಾಹಿರ ಕೃತ್ಯದಲ್ಲಿ ತೊಡಗಿದ್ದ ಆರೋಪಿಗಳನ್ನು ಬಂಧಿಸಿದ್ದು, ಪ್ರಕರಣ ದಾಖಲಿಸಲಾಗಿದೆ. ಬಂಧಿತರಿಂದ ಲ್ಯಾಪ್‌ಟಾಪ್, ಪೆನ್ ಡ್ರೈವ್ ಸೇರಿದಂತೆ ನೋಟು ಮುದ್ರಿಸಲು ಬಳಸುತ್ತಿದ್ದ ಪರಿಕರಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದೆ.

ಷೇರುಪೇಟೆ ವಹಿವಾಟು 424



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,913
ಇಂದಿನ ಅಂತ್ಯ	22,795
▼	117
ದಿನದ ಕನಿಷ್ಠ	22,720

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹485
12 ಕ್ಕೆ	₹66
ಮೈಸೂರು	
100ಕ್ಕೆ	₹485

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹388-672
ದ್ವಿತಳಿ (ಬಿ.ವಿ)	₹236-830

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹187.50
ಆರ್‌ಎಸ್‌ಎಸ್-5	₹182.50
ಗುಡ್ ಲಾಟ್	₹177.50

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹27000
ಎಸಿ	₹16240
ಆರ್‌ಪಿ	₹23500
ಆರ್‌ಸಿ	₹12960

ಮುಂಬೈ ಧಾರಣೆ (ಶೇಂಗಾ)

21-02-2025

ಜಾವಾ 70/80(ಹೊಸ)	9900-10000
ಜಾವಾ 80/90(ಹೊಸ)	9400-9500
ದಪ್ಪ ಮಧ್ಯಪ್ರದೇಶ(ಹೊಸ)	7800-7900
ದಪ್ಪ ಗುಜರಾತ್(ಹೊಸ)	8100-8200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1450 (1450)
ಒಂದು ವಾರದ ಡೆಲಿವರಿ	1445 (1445)
ಪಾಮ್ ವಾರದ ಡೆಲಿವರಿ	1378 (1373)
ಸೂರ್ಯಕಾಂತಿ ಎಣ್ಣೆ ಕಚ್ಚಾ	1380 (1375)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹**85,700** (86,150)

ಬೆಳ್ಳಿ ಕೆ.ಜಿ ₹**97,200** (97,750)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹14100-14100
ಮಧುಗಿರಿ	₹10000-15000
ತುರುವೇಕೆರೆ	₹13800-14000

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ	
ಅಪಿ	49400-49800
ಬೆಟ್ಟೆ	23600-24000
ಕೆಂಪುಗೋಟು	19600-20000
ರಾಶಿ	48900-49300
ಕುಮಟ	
ಚಾಲಿ	32569-37000
ಚಿಪ್ಪು	14569-25019
ಕೋಕ	5019-13599
ಫ್ಯಾಕ್ಟರಿ	4069-22899
ಹೊಸಚಾಲಿ	27741-34299
ಶಿವಮೊಗ್ಗ	
ಬೆಟ್ಟೆ	49099-56700
ಗೊರಬಲು	18010-30669
ರಾಶಿ	35009-51899
ಸರಕು	57100-87310
ಸಿದ್ದಾಪುರ	
ಬಿಳಿಗೋಟು	20399-23869
ಚಾಲಿ	32699-36899
ಕೋಕ	18299-22609
ಹೊಸಚಾಲಿ	26609-35589
ಕೆಂಪುಗೋಟು	16289-18899
ರಾಶಿ	41819-49159
ತಟ್ಟಿಬೆಟ್ಟೆ	28469-42099
ಶಿರಸಿ	
ಬೆಟ್ಟೆ	28019-40099
ಬಿಳಿಗೋಟು	13200-28899
ಚಾಲಿ	32129-35840
ಕೆಂಪುಗೋಟು	12869-27299
ರಾಶಿ	43089-47099
ಯಲ್ಲಾಪುರ	
ಅಪಿ	60899-71889
ಬಿಳಿಗೋಟು	11899-27969
ಚಾಲಿ	28415-38749
ಕೋಕ	4609-17699
ಕೆಂಪುಗೋಟು	14199-27399
ರಾಶಿ	39819-58910

ದರ ನಿಯಂತ್ರಣ: ಚಿಲ್ಲರೆ, ಸಗಟುದಾರರ ದಾಸ್ತಾನಿಗೆ ಮಿತಿ ಹೇರಿದ ಕೇಂದ್ರ

ಗೋಧಿ ಬಂಪರ್ ಉತ್ಪಾದನೆ?

ನವದೆಹಲಿ (ಪಿಟಿಐ): ದೇಶದಲ್ಲಿ ಹಿಂಗಾರು ಅವಧಿಯಲ್ಲಿ ಬಿತ್ತನೆಯಾಗಿರುವ ಗೋಧಿ ಫಸಲು ಸಮೃದ್ಧವಾಗಿದೆ. ಹಾಗಾಗಿ, ಈ ಬಾರಿ ಬಂಪರ್ ಉತ್ಪಾದನೆಯನ್ನು ನಿರೀಕ್ಷಿಸಲಾಗಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '2023-24ನೇ ಮಾರುಕಟ್ಟೆ ವರ್ಷದಲ್ಲಿ (ಜುಲೈನಿಂದ ಜೂನ್) 1,132.92 ಲಕ್ಷ ಟನ್ ಗೋಧಿ ಉತ್ಪಾದನೆಯಾಗಿತ್ತು. ಹವಾಮಾನ ಕೂಡ ಬೆಳೆಗೆ ಪೂರಕವಾಗಿದೆ. ಹಾಗಾಗಿ, 2024-25ನೇ ಮಾರುಕಟ್ಟೆ ವರ್ಷದಲ್ಲಿ ಹೆಚ್ಚಿನ ಉತ್ಪಾದನೆಯಾಗುವ ನಿರೀಕ್ಷೆಯಿದೆ' ಎಂದರು.

ಕಳೆದ ವರ್ಷದ ಹಿಂಗಾರು ಅವಧಿಯಲ್ಲಿ 315.63 ಲಕ್ಷ ಹೆಕ್ಟೇರ್‌ನಲ್ಲಿ ಗೋಧಿ ಬಿತ್ತನೆಯಾಗಿತ್ತು. ಈ ಬಾರಿ 320 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ.

ಬೆಲೆ ನಿಯಂತ್ರಣಕ್ಕೆ ಕ್ರಮ: ಚಿಲ್ಲರೆ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸುವ ಉದ್ದೇಶದಿಂದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಗೋಧಿ ದಾಸ್ತಾನಿಗೆ ಸಂಬಂಧಿಸಿದಂತೆ ಹಲವು ಕ್ರಮಗಳನ್ನು ಕೈಗೊಂಡಿದೆ.

ಸಗಟುದಾರರು, ಚಿಲ್ಲರೆ ಮಾರಾಟಗಾರರು ಮತ್ತು ಸಂಸ್ಕರಣಾಗಾರರ ದಾಸ್ತಾನಿಗೆ ಮಿತಿ ಹೇರಿದೆ.

ದಾಸ್ತಾನಿನ ಬಗ್ಗೆ ನಿಗಾ ವಹಿಸಲಾಗಿದೆ. ಮಾರುಕಟ್ಟೆಯಲ್ಲಿ ಕೃತಕ ಅಭಾವ ಸೃಷ್ಟಿಸದಂತೆ ಎಚ್ಚರಿಕೆ ವಹಿಸಲಾಗಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯಾದರೆ ಸರ್ಕಾರವು ಮಧ್ಯಪ್ರವೇಶಿಸಲಿದೆ ಎಂದು ಹೇಳಿದೆ.

ವರ್ತಕರು, ಸಗಟುದಾರರಿಗೆ ಈ ಮೊದಲು 1 ಸಾವಿರ ಟನ್‌ನಷ್ಟು ಗೋಧಿ ದಾಸ್ತಾನಿಗೆ ಅವಕಾಶ ಕಲ್ಪಿಸಲಾಗಿತ್ತು. ಸದ್ಯ ಇದನ್ನು 250 ಟನ್‌ಗೆ ಮಿತಿಗೊಳಿಸಿದೆ. ಚಿಲ್ಲರೆ ಮಾರಾಟಗಾರರ ಮಿತಿಯನ್ನು 5 ಟನ್‌ನಿಂದ 4 ಟನ್‌ಗೆ ಕಡಿತಗೊಳಿಸಿದೆ. ಈ ಪರಿಷ್ಕೃತ ದಾಸ್ತಾನು ಮಿತಿ ಆದೇಶವು ಮಾರ್ಚ್ 31ರ ವರೆಗೆ ಜಾರಿಯಲ್ಲಿ ಇರಲಿದೆ ಎಂದು ತಿಳಿಸಿದೆ.

ಸಂಸ್ಕರಣಾಗಾರರು ಮಾಸಿಕ ಸಂಸ್ಕರಣಾ ಸಾಮರ್ಥ್ಯದ ಶೇ 50ರಷ್ಟು ಗೋಧಿಯನ್ನಷ್ಟೇ ದಾಸ್ತಾನಿಟ್ಟುಕೊಳ್ಳಲು ಅವಕಾಶವಿದೆ. ಏಪ್ರಿಲ್‌ವರೆಗೆ ಪರಿಷ್ಕೃತ ಆದೇಶ ಜಾರಿಯಲ್ಲಿ ಇರಲಿದೆ. ಪ್ರತಿ ಶುಕ್ರವಾರವು ಇಲಾಖೆಯ ಪೋರ್ಟಲ್‌ನಲ್ಲಿ ದಾಸ್ತಾನು ವಿವರವನ್ನು ನಮೂದಿಸಬೇಕಿದೆ ಎಂದು ಸೂಚಿಸಿದೆ.

'ಒಣಮೆಣಸಿನಕಾಯಿ ಖರೀದಿ ಶೀಘ್ರ'

ನವದೆಹಲಿ (ಪಿಟಿಐ): ಬೆಲೆ ಕುಸಿತದಿಂದ ಕಂಗಾಲಾಗಿರುವ ಆಂಧ್ರಪ್ರದೇಶದ ಒಣಮೆಣಸಿನಕಾಯಿ ಬೆಳೆಗಾರರಿಗೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ (ಎಂಐಎಸ್) ಆರ್ಥಿಕ ನೆರವು ಕಲ್ಪಿಸಲಾಗುವುದು ಎಂದು ಕೇಂದ್ರ ತಿಳಿಸಿದೆ.

ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಶುಕ್ರವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರೊಟ್ಟಿಗೆ ಬೆಲೆ ಕುಸಿತದ ಬಗ್ಗೆ ಚರ್ಚಿಸಿದರು. ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ. ಹಾಗಾಗಿ, ಕೇಂದ್ರವು ತ್ವರಿತವಾಗಿ ಖರೀದಿ ಆರಂಭಿಸಬೇಕು ಎಂದು ಕೋರಿದರು. ಇದಕ್ಕೆ ಉತ್ತರಿಸಿದ ಸಚಿವ ಚೌಹಾಣ್, 'ಒಣಮೆಣಸಿನಕಾಯಿ ರಫ್ತಿಗೆ ಸಂಬಂಧಿಸಿದಂತೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ. ಆ ಮೂಲಕ ಬೆಳೆಗಾರರಿಗೆ ನೆರವು ನೀಡಲಿದೆ' ಎಂದರು.

ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಟೊಮೆಟೊ, ಈರುಳ್ಳಿ, ಆಲೂಗೆಡ್ಡೆ ಸೇರಿದಂತೆ ಬಹುಬೇಗ ಕೊಳೆತು ಹೋಗುವಂತಹ ಕೃಷಿ ಹುಟ್ಟುವಳಿಗಳನ್ನು ಖರೀದಿಸಲು ಅವಕಾಶವಿದೆ.

ಮಾರುಕಟ್ಟೆಯಲ್ಲಿ ಉತ್ಪನ್ನಗಳ ಬೆಲೆಯು ಹಿಂದಿನ ವರ್ಷಕ್ಕಿಂತ ಶೇ 10ರಷ್ಟು ಇಳಿಕೆಯಾದಾಗ ರಾಜ್ಯಗಳ ಕೋರಿಕೆ ಮೇರೆಗೆ ಅಂತಹ ಉತ್ಪನ್ನಗಳನ್ನು ಕೇಂದ್ರವು ಖರೀದಿಸಲಿದೆ.

ಮೆಮರಿ ಲೀಗ್: ಭಾರತದ ವಿದ್ಯಾರ್ಥಿಗೆ ಗೆಲುವು

ನ್ಯೂಯಾರ್ಕ್ (ಪಿಟಿಐ): 'ಮೆಮರಿ ಲೀಗ್ ವಿಶ್ವ ಚಾಂಪಿಯನ್‌ಷಿಪ್-2025' ಸ್ಪರ್ಧೆಯಲ್ಲಿ ಭಾರತೀಯ ವಿದ್ಯಾರ್ಥಿ ವಿಶ್ವಾ ರಾಜ್‌ಕುಮಾರ್ ಅವರು ವಿಜೇತರಾಗಿದ್ದಾರೆ. 13.50 ಸೆಕೆಂಡ್‌ನಲ್ಲಿ ಅವರು 80 ಸಂಖ್ಯೆಗಳನ್ನು ಮತ್ತು 8.40 ಸೆಕೆಂಡ್‌ಗಳಲ್ಲಿ 30 ಚಿತ್ರಗಳನ್ನು ನೆನಪಿಟ್ಟುಕೊಂಡಿದ್ದರು.

'ಮೆಮರಿ ಲೀಗ್ ವಿಶ್ವ ಚಾಂಪಿಯನ್‌ಷಿಪ್' ಆನ್‌ಲೈನ್ ಸ್ಪರ್ಧೆಯಾಗಿದೆ. ವೆಬ್‌ಸೈಟ್ ಪ್ರಕಾರ ರಾಜ್‌ಕುಮಾರ್ ಅವರು 5,000 ಸ್ಕೋರ್ ಮೂಲಕ ಪ್ರಥಮ ರ‍್ಯಾಂಕ್ ಪಡೆದಿದ್ದಾರೆ.

ರಾಜ್‌ಕುಮಾರ್ ಅವರ ಲಿಂಕ್ಡ್‌ಇನ್ ಪ್ರೊಫೈಲ್ ಪ್ರಕಾರ, ಅವರು ಪುದುಚೇರಿಯ ಮನಕುಲ-ವಿನಯಗರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿದ್ಯಾರ್ಥಿ.

'ಸಾಕಷ್ಟು ನೀರು ಕುಡಿಯುವುದರಿಂದ ಮಿದುಳಿಗೆ ಸಹಾಯವಾಗುತ್ತದೆ. ವಸ್ತುಗಳನ್ನು ನೆನಪಿಟ್ಟುಕೊಳ್ಳುವ ಸಂದರ್ಭದಲ್ಲಿ ಸಾಮಾನ್ಯವಾಗಿ ಮನಸ್ಸಿನಲ್ಲಿಯೇ ಹೇಳಿಕೊಳ್ಳುತ್ತಿರುತ್ತೇವೆ. ಹೆಚ್ಚು ನೀರು ಕುಡಿಯುವುದರಿಂದ ಗಂಟಲು ಸ್ಪಷ್ಟವಾಗಿರುತ್ತದೆ' ಎಂದು ಅವರು ಹೇಳಿದ್ದಾರೆ.

ಪೋಪ್ ಆರೋಗ್ಯದಲ್ಲಿ ಸ್ವಲ್ಪ ಚೇತರಿಕೆ

ರೋಮ್ (ಎಪಿ): ನ್ಯುಮೋನಿಯಾ ಮತ್ತು ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿರುವ ಪೋಪ್ ಫ್ರಾನ್ಸಿಸ್ ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ ಎಂದು ವ್ಯಾಟಿಕನ್ ಹೇಳಿದೆ.

'ಪೋಪ್ ಆರೋಗ್ಯದಲ್ಲಿ ಸ್ವಲ್ಪ ಚೇತರಿಕೆ ಕಂಡುಬಂದಿದೆ. ರಾತ್ರಿಯಿಡೀ ಅವರ ಆರೋಗ್ಯ ಸ್ಥಿರವಾಗಿತ್ತು. ಬೆಳಿಗ್ಗೆ ಉಪಾಹಾರ ಸೇವಿಸಿದರು' ಎಂದು ಶುಕ್ರವಾರ ಬೆಳಿಗ್ಗೆ ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದೆ. ಶ್ವಾಸಕೋಶದಲ್ಲಿ ಸೋಂಕು ಕಾಣಿಸಿಕೊಂಡಿದ್ದರಿಂದ ಪೋಪ್ ಅವರನ್ನು ಫೆ.14ರಂದು ರೋಮ್‌ನ ಜೆಮೆಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಅನಾರೋಗ್ಯದಿಂದ ಸಂಪೂರ್ಣ ಚೇತರಿಸಿಕೊಳ್ಳಲು ಸಾಧ್ಯವಾಗದಿದ್ದರೆ ಫ್ರಾನ್ಸಿಸ್ ಅವರು ಪೋಪ್ ಹುದ್ದೆಗೆ ರಾಜೀನಾಮೆ ನೀಡಬಹುದು ಎಂಬ ಮಾತುಗಳೂ ಈ ನಡುವೆ ಕೇಳಿಬಂದಿವೆ. ರಾಜೀನಾಮೆ ಕುರಿತ ಪ್ರಶ್ನೆಗೆ ಫ್ರಾನ್ಸ್‌ನ ಮಾರ್ಸೇಯ್‌ನ ಆರ್ಚ್‌ಬಿಷಪ್ ಆಗಿರುವ ಕಾರ್ಡಿನಲ್ ಜೀನ್ ಮಾರ್ಕ್ ಆವೆಲಿನ್ ಅವರು 'ಎಲ್ಲವೂ ಸಾಧ್ಯ' ಎಂದು ಪ್ರತಿಕ್ರಿಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಿನ್ನದ ದರ ಇಳಿಕೆ

ನವದೆಹಲಿ (ಪಿಟಿಐ): ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದ್ದ ಚಿನ್ನದ ಧಾರಣೆಯು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹700 ಇಳಿಕೆಯಾಗಿ ₹88,750 ಆಗಿದೆ. ಆಭರಣ ಚಿನ್ನದ ಬೆಲೆಯು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿದ್ದು, ₹88,350 ಆಗಿದೆ.

ಆಭರಣ ತಯಾರಕರು ಹಾಗೂ ದಾಸ್ತಾನುಗಾರರಿಂದ ಬೇಡಿಕೆ ಕಡಿಮೆಯಾಗಿದೆ. ಇದರಿಂದ ಹಳದಿ ಲೋಹದ ಬೆಲೆಯಲ್ಲಿ ಇಳಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಳ್ಳಿ ಧಾರಣೆ ಕೂಡ ಇಳಿಕೆಯಾಗಿದೆ. ಪ್ರತಿ ಕೆ.ಜಿಗೆ ₹300 ಕಡಿಮೆಯಾಗಿದ್ದು, ₹1 ಲಕ್ಷ ಆಗಿದೆ.

ಪಿಎಂ-ಕಿಸಾನ್: ₹22 ಸಾವಿರ ಕೋಟಿ ಬಿಡುಗಡೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಪಿಎಂ-ಕಿಸಾನ್ ಯೋಜನೆಯಡಿ 19ನೇ ಕಂತಿನ ₹22 ಸಾವಿರ ಕೋಟಿ ಮೊತ್ತವನ್ನು ಬಿಡುಗಡೆ ಮಾಡಿದ್ದಾರೆ. 9.8 ಕೋಟಿ ರೈತರಿಗೆ ಇದರಿಂದ ಅನುಕೂಲವಾಗಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಈ ಯೋಜನೆಯಡಿ ಪ್ರತಿ ಫಲಾನುಭವಿಗೆ ವಾರ್ಷಿಕ ₹6 ಸಾವಿರ ನೀಡಲಾಗುತ್ತದೆ. ಪ್ರತಿ ನಾಲ್ಕು ತಿಂಗಳಿಗೆ ಮೂರು ಬಾರಿ ರೈತರಿಗೆ ₹2 ಸಾವಿರವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗುತ್ತದೆ.

18ನೇ ಕಂತಿನಲ್ಲಿ 9.6 ಕೋಟಿ ಇದ್ದ ಫಲಾನುಭವಿಗಳ ಸಂಖ್ಯೆಯು ಈ ಬಾರಿ ಹೆಚ್ಚಳವಾಗಿದೆ. ಸದ್ಯ ಬಿಡುಗಡೆ ಆಗಿರುವ ಮೊತ್ತವು ಸೇರಿದರೆ ಇಲ್ಲಿಯವರೆಗೆ ಈ ಯೋಜನೆಯಡಿ ಬಿಡುಗಡೆಯಾಗಿರುವ ಮೊತ್ತ ₹3.68 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಇಎಸ್‌ಐಸಿ: ಹೊಸದಾಗಿ 17 ಲಕ್ಷ ಸದಸ್ಯರ ನೋಂದಣಿ

ನವದೆಹಲಿ (ಪಿಟಿಐ): ಕಾರ್ಮಿಕರ ರಾಜ್ಯ ವಿಮಾ ನಿಗಮದಡಿ (ಇಎಸ್‌ಐಸಿ) ಡಿಸೆಂಬರ್ ತಿಂಗಳಿನಲ್ಲಿ 17.01 ಲಕ್ಷ ಸದಸ್ಯರು ಹೊಸದಾಗಿ ನೋಂದಣಿ ಆಗಿದ್ದಾರೆ.

ಇಎಸ್‌ಐ ಯೋಜನೆಯಡಿ 20,360 ಕಂಪನಿಗಳು ನೋಂದಣಿಯಾಗಿವೆ. ಇದರಿಂದ ಸಾಮಾಜಿಕ ಭದ್ರತಾ ಯೋಜನೆಯಡಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಸೇರ್ಪಡೆಯಾಗಲು ನೆರವಾಗಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ಶುಕ್ರವಾರ ತಿಳಿಸಿದೆ.

ಬಳ್ಳಾರಿ: ವರ್ತಕರು–ದಲ್ಲಾಳಿಗಳ ನಡುವೆ ಮುನಿಸು

ಶೇಂಗಾ ವಹಿವಾಟು ಸ್ಥಗಿತ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಶೇಂಗಾ ವರ್ತಕರು ಮತ್ತು ದಲ್ಲಾಳಿಗಳ ನಡುವೆ ಮತ್ತೆ ಮುನಿಸು ತಲೆದೋರಿದ್ದು, ಶುಕ್ರವಾರ ಇಡೀ ದಿನ ವಹಿವಾಟು ಸ್ಥಗಿತಗೊಂಡಿತ್ತು.

'ಕೆಲ ವರ್ತಕರು ರೈತರಿಂದ ನೇರವಾಗಿ ಶೇಂಗಾ ಖರೀದಿಸಿದ್ದಾರೆ. ಹೀಗೆ ಅಕ್ರಮವಾಗಿ ವ್ಯಾಪಾರ ಮಾಡಿದ ಮೂರು ಅಂಗಡಿಗಳಲ್ಲಿ ಟೆಂಡರ್ ಮಾಡಬಾರದು' ಎಂದು ದಲ್ಲಾಳಿಗಳ ಸಂಘ ಒತ್ತಾಯಿಸಿದೆ. ಆದರೆ, ಇದಕ್ಕೆ ಒಪ್ಪದ ವರ್ತಕರ ಸಂಘವು ಶೇಂಗಾ ಖರೀದಿಸದಿರಲು ನಿರ್ಧರಿಸಿದೆ.

'ಮೂರು ಅಂಗಡಿಗಳಲ್ಲಿ ಟೆಂಡರ್ ಪ್ರಕ್ರಿಯೆ ಸ್ಥಗಿತಗೊಳ್ಳುವವರೆಗೆ ಶೇಂಗಾ ಮಾರಾಟ ಮಾಡದಿರಲು ದಲ್ಲಾಳಿಗಳ ಸಂಘ ನಿರ್ಧರಿಸಿದೆ. ಅವರು ಮಾರಿದರೆ, ನಾವು ಕೂಡಲೇ ಟೆಂಡರ್ ಆರಂಭಿಸುತ್ತೇವೆ' ಎಂದು ವರ್ತಕರು ಹೇಳಿದರು.

ದೂರದ ಊರುಗಳಿಂದ ಶೇಂಗಾ ತಂದು ಮಾರಲಾಗದೆ ಬಿರು ಬಿಸಿಲಲ್ಲಿ ರೈತರು ಸಂಕಷ್ಟಕ್ಕೆ ಒಳಗಾದರು. ದಲ್ಲಾಳಿಗಳ ಸಂಘದ ಪ್ರತಿನಿಧಿಗಳೇ, ರೈತರಿಗೆ ಊಟ, ವಸತಿ ವ್ಯವಸ್ಥೆ ಮಾಡಿದರು.

'ಏಕಾಏಕಿಯಾಗಿ ಮಾರಾಟ ಸ್ಥಗಿತಗೊಳಿಸಿದ್ದಕ್ಕೆ ಎರಡು ಕಡೆಯಿಂದಲೂ ಸ್ಪಷ್ಟನೆ ಕೇಳಲಾಗಿದೆ. ರೈತರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಲು ತಿಳಿಸಲಾಗಿದೆ. ಕೂಡಲೇ, ಖರೀದಿ ಪ್ರಕ್ರಿಯೆ ಆರಂಭಿಸಲು ಕ್ರಮಕೈಗೊಳ್ಳಲಾಗುವುದು' ಎಂದು ಜಿಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ನಂಜುಂಡಸ್ವಾಮಿ ತಿಳಿಸಿದರು.

ಎಪಿಎಂಸಿಗೆ ನಿತ್ಯ 2,500 ಕ್ವಿಂಟಲ್ ಶೇಂಗಾ ಆವಕವಾಗುತ್ತಿದ್ದು, ಪ್ರತಿ ಕ್ವಿಂಟಲ್‌ಗೆ ₹6,000ರಿಂದ ₹7,800 ದರ ಇದೆ.

ನಾಲ್ಕು ದಿನದಲ್ಲಿ ಸೆನ್ಸೆಕ್ಸ್ 685 ಅಂಶ ಕುಸಿತ

ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಹೊರಹರಿವು ಮುಂದುವರಿದಿದ್ದರಿಂದ ಶುಕ್ರವಾರ ಕೂಡ ದೇಶದ ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು.

ಆಟೊ ಷೇರುಗಳ ಮೌಲ್ಯ ಕುಸಿತವು ಇದಕ್ಕೆ ನೆರವಾಯಿತು. ಅಲ್ಲದೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ನೀತಿಯು ದೇಶೀಯ ಷೇರುಪೇಟೆ ಮೇಲೆ ಪರಿಣಾಮ ಬೀರಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 424 ಅಂಶ ಇಳಿಕೆ ಕಂಡು 75,311 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ಒಂದು ಸಂದರ್ಭದಲ್ಲಿ 623 ಅಂಶ ಇಳಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 117 ಅಂಶ ಇಳಿಕೆ ಕಂಡು 22,795 ಅಂಶಗಳಲ್ಲಿ ಸ್ಥಿರಗೊಂಡಿತು.

ಕಳೆದ ನಾಲ್ಕು ದಿನಗಳಲ್ಲಿ ಕರಡಿ ಕುಣಿತದಿಂದಾಗಿ ಸೆನ್ಸೆಕ್ಸ್ 685 ಅಂಶ ಹಾಗೂ ನಿಫ್ಟಿ 163 ಅಂಶ ಇಳಿಕೆಯಾಗಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಶೇ 6ರಷ್ಟು ಇಳಿಕೆಯಾಗಿದೆ. ಅದಾನಿ ಪೋರ್ಟ್ಸ್, ಟಾಟಾ ಮೋಟರ್ಸ್, ಸನ್ ಫಾರ್ಮಾ, ಪವರ್ ಗ್ರಿಡ್, ಜೊಮಾಟೊ, ಐಸಿಐಸಿಐ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಅಲ್ಟ್ರಾಟೆಕ್ ಸಿಮೆಂಟ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಗುರುವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,311 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಭಾರತ ಮೂಲದ ಕಾಶ್ ಪಟೇಲ್‌ಗೆ ಎಫ್‌ಬಿಐ ಚುಕ್ಕಾಣಿ

ನ್ಯೂಯಾರ್ಕ್ (ಪಿಟಿಐ): ಕಾಶ್ ಪಟೇಲ್ ಅವರು ಅಮೆರಿಕ ಗುಪ್ತಚರ ಸಂಸ್ಥೆ (ಎಫ್‌ಬಿಐ) ನಿರ್ದೇಶಕರ ಹುದ್ದೆಯನ್ನೇರಿದ ಮೊದಲ ಭಾರತೀಯ-ಅಮೆರಿಕನ್ ಎನಿಸಿಕೊಂಡರು.

ಗುಜರಾತ್ ಮೂಲದ ದಂಪತಿಯ ಮಗನಾದ ಕಾಶ್ ಪಟೇಲ್ ಅವರನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ಹಿಂದೆಯೇ ಎಫ್‌ಬಿಐ ನಿರ್ದೇಶಕರನ್ನಾಗಿ ನೇಮಕ ಮಾಡಿದ್ದರು. ಅವರ ನೇಮಕವನ್ನು ಅಮೆರಿಕದ ಸೆನೆಟ್ ಗುರುವಾರ 51-49 ಮತಗಳಿಂದ ದೃಢಪಡಿಸಿದೆ.

ರಿಪಬ್ಲಿಕನ್ ಪಕ್ಷದ ಸೂಸನ್ ಕಾಲಿನ್ಸ್ ಮತ್ತು ಲೀಸಾ ಮರ್ಕೋವ್‌ಸ್ಕಿ ಅವರು ಕಾಶ್ ಅವರ ನೇಮಕದ ವಿರುದ್ಧ ಮತ ಚಲಾಯಿಸಿದರು. 44 ವರ್ಷದ ಪಟೇಲ್ ಅವರು, ಎಫ್‌ಬಿಐ ಮೇಲೆ ಅಮೆರಿಕದ ಜನರ ನಂಬಿಕೆಯನ್ನು ಮರುಸ್ಥಾಪಿಸುವ ಪ್ರತಿಜ್ಞೆ ಮಾಡಿದ್ದಾರೆ.

'ಎಫ್‌ಬಿಐನ 9ನೇ ನಿರ್ದೇಶಕನಾಗಿ ನೇಮಕಗೊಂಡಿರುವುದು ನನಗೆ ಲಭಿಸಿದ ಬಹುದೊಡ್ಡ ಗೌರವ. ನನ್ನ ಮೇಲೆ ನಂಬಿಕೆಯಿರಿಸಿದ ಅಧ್ಯಕ್ಷ ಟ್ರಂಪ್ ಮತ್ತು ಅಟಾರ್ನಿ ಜನರಲ್ ಪ್ಯಾಮ್ ಬಾಂಡಿ ಅವರಿಗೆ ಕೃತಜ್ಞತೆಸಲ್ಲಿಸುತ್ತೇನೆ' ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಅಮೆರಿಕದ ಜನರು ಪಾರದರ್ಶಕ, ಜವಾಬ್ದಾರಿಯುತ ಮತ್ತು ನ್ಯಾಯಕ್ಕೆ ಬದ್ಧವಾಗಿರುವ ಎಫ್‌ಬಿಐ ಅನ್ನು ಬಯಸುತ್ತಾರೆ. ನಮ್ಮ ನ್ಯಾಯ ವ್ಯವಸ್ಥೆಯು ರಾಜಕೀಕರಣಗೊಂಡಿದ್ದರಿಂದ ಜನರು ಎಫ್‌ಬಿಐ ಮೇಲೆ ನಂಬಿಕೆ ಕಳೆದುಕೊಂಡಿದ್ದರು. ಆದರೆ ಅದು ಈಗ ಅಂತ್ಯಗೊಂಡಿದ್ದು, ಎಫ್‌ಬಿಐ ಹೊಸ ದಿಕ್ಕಿನತ್ತ ಮುನ್ನಡೆಯಲಿದೆ' ಎಂದಿದ್ದಾರೆ.

ಗುಜರಾತ್ ಮೂಲ...

ಕಾಶ್ ಪಟೇಲ್ ತಂದೆ- ತಾಯಿ ಗುಜರಾತ್ ಮೂಲದವರು. ಮೊದಲು ಕೆನಡಾದಲ್ಲಿದ್ದ ಕಾಶ್ ಪೋಷಕರು 1970ರಲ್ಲಿ ಅಮೆರಿಕಕ್ಕೆ ಬಂದು ನೆಲಸಿದರು. 1980ರಲ್ಲಿ ನ್ಯೂಯಾರ್ಕ್‌ನ ಗಾರ್ಡನ್ ಸಿಟಿಯಲ್ಲಿ ಜನಿಸಿದ ಕಾಶ್, ನ್ಯೂಯಾರ್ಕ್ ಮತ್ತು ವರ್ಜೀನಿಯಾದ ರಿಚ್ಮಂಡ್‌ನಲ್ಲಿ ಶಿಕ್ಷಣ ಪೂರೈಸಿದರು.

ವಕೀಲರಾದ ಅವರು ಅಂತರರಾಷ್ಟ್ರೀಯ ಭಯೋತ್ಪಾದನೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು, ನ್ಯಾಯಾಂಗ ಇಲಾಖೆ ಸೇರಿದ್ದರು. ರಾಷ್ಟ್ರೀಯ ಭದ್ರತಾ ಸಂಸ್ಥೆಯಲ್ಲಿ ಭಯೋತ್ಪಾದನಾ ಕೃತ್ಯಗಳ ವಿರುದ್ಧದ ಕಾರ್ಯಾಚರಣೆಗಳಲ್ಲಿ ಪಟೇಲ್ ಮುಖ್ಯ ಪಾತ್ರವಹಿಸಿದ್ದರು.

ವಾಯುಮಾಲಿನ್ಯ: ಶೇ 15ರಷ್ಟು ಕಂತು ಹೆಚ್ಚಳಕ್ಕೆ ಚಿಂತನೆ

ದೆಹಲಿ: ಆರೋಗ್ಯ ವಿಮೆ ದುಬಾರಿ?

ನವದೆಹಲಿ (ರಾಯಿಟರ್ಸ್): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವಾಯುಮಾಲಿನ್ಯದಿಂದಾಗಿ ಕಂಡುಬರುತ್ತಿರುವ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿ ವಿಮೆ ಕ್ಲೇಮುಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬರುತ್ತಿದೆ. ಇದು, ಹೊಸದಾಗಿ ವಿಮೆ ಪಾಲಿಸಿ ಪಡೆಯುವವರಿಗೆ ಹೊರೆಯಾಗುವ ಸಾಧ್ಯತೆ ಇದೆ.

ಹೊಸದಾಗಿ ಆರೋಗ್ಯ ವಿಮೆ ತೆಗೆದುಕೊಳ್ಳುವ ದೆಹಲಿ ನಿವಾಸಿಗಳಿಂದ, ಶೇ 10ರಿಂದ ಶೇ 15ರಷ್ಟು ಅಧಿಕ ಕಂತು ಸಂಗ್ರಹಿಸಲು ವಿಮಾ ಕಂಪನಿಗಳು ಚಿಂತನೆ ನಡೆಸಿವೆ ಎಂದು ಹೇಳಲಾಗಿದೆ.

ಕಂತು ಹೆಚ್ಚಳ ಮಾಡುವ ಕುರಿತು ವಿಮಾ ಕಂಪನಿಗಳ ನಡುವೆ ಚರ್ಚೆ ನಡೆಯುತ್ತಿದೆ. ಅಂತಿಮವಾಗಿ, ಭಾರತೀಯ ವಿಮಾ ಮತ್ತು ಅಭಿವೃದ್ಧಿ ನಿಯಂತ್ರಣ ಪ್ರಾಧಿಕಾರ (ಐಆರ್‌ಡಿಎಐ) ಕಂಪನಿಗಳ ಈ ಬೇಡಿಕೆಯನ್ನು ಅನುಮೋದಿಸಬೇಕಿದೆ. ಒಂದು ವೇಳೆ, ಈ ಬೇಡಿಕೆಗೆ ಅನುಮೋದನೆ ದೊರೆತಲ್ಲಿ, ಭಾರತದಲ್ಲಿ ಮೊದಲ ಬಾರಿಗೆ, ಆರೋಗ್ಯ ವಿಮೆ ಕಂತು ನಿರ್ಧರಿಸುವಲ್ಲಿ ವಾಯುಮಾಲಿನ್ಯವನ್ನು ಒಂದು ಅಂಶವನ್ನಾಗಿ ಪರಿಗಣಿಸಿದಂತಾಗಲಿದೆ.

ಅಲ್ಲದೇ, ಮುಂದಿನ ದಿನಗಳಲ್ಲಿ ವಿಮಾ ಕಂಪನಿಗಳು ದೇಶದ ಇತರ ನಗರಗಳಲ್ಲಿ ಆರೋಗ್ಯ ವಿಮೆಯ ಕಂತು ಹೆಚ್ಚಳ ಮಾಡುವುದನ್ನು ಸಮರ್ಥಿಸಿಕೊಳ್ಳುವುದಕ್ಕೆ ಈ ಅಂಶ ಬಳಸಿಕೊಳ್ಳಲು ದಾರಿ ಮಾಡಿಕೊಟ್ಟಂತಾಗಲಿದೆ.

ಆರೋಗ್ಯ ಸಮಸ್ಯೆ: ವಾಯುವಿನ ಗುಣಮಟ್ಟ ಕುಸಿತದಿಂದ ದೆಹಲಿ ನಿವಾಸಿಗಳಲ್ಲಿ ಕಳೆದ ವರ್ಷ ಅಸ್ತಮಾ, ಉಸಿರಾಟದ ತೊಂದರೆ (ಸಿಒಪಿಡಿ), ಹೃದಯ ಸಂಬಂಧಿ ತೊಂದರೆಗಳು ಕಾಣಿಸಿಕೊಂಡಿದ್ದವು. ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ, 2024ರಲ್ಲಿ ಇಂತಹ ಆರೋಗ್ಯ ಸಮಸ್ಯೆಯಿಂದ ಬಾಧಿತರ ಸಂಖ್ಯೆ ಹೆಚ್ಚು ಇತ್ತು ಎಂದು ವಿಮಾ ಕಂಪನಿಗಳ ಐವರು ಪ್ರತಿನಿಧಿಗಳು ಹೇಳಿದ್ದಾರೆ.

'ವಿಮಾ ಪಾಲಿಸಿಗಳ ಕಂತು ನಿಗದಿ ಮಾಡುವ ವೇಳೆ, ವಾಯುಮಾಲಿನ್ಯವನ್ನು ಪ್ರತ್ಯೇಕ ಅಂಶ ಎಂದೇ ಭಾವಿಸುವುದನ್ನು ಶುರು ಮಾಡಬೇಕಿದೆ. ಅತಿ ಹೆಚ್ಚು ವಾಯುಮಾಲಿನ್ಯ ಬಾಧಿತ ಪ್ರದೇಶಗಳಿಗೆ ನಿರ್ದಿಷ್ಟ ಕಂತು ನಿಗದಿ ಮಾಡಲು ಆರಂಭಿಸಬಹುದಾಗಿದೆ' ಎಂದು ಆರೋಗ್ಯ ವಿಮೆ ಕ್ಷೇತ್ರದಲ್ಲಿ ದೇಶದ ಮುಂಚೂಣಿ ಕಂಪನಿಯಾದ ಸ್ಟಾರ್ ಹೆಲ್ತ್‌ನ ಕಾರ್ಯಾಚರಣೆ ವಿಭಾಗದ ಮುಖ್ಯಸ್ಥ ಅಮಿತಾಭ್ ಜೈನ್ ಹೇಳುತ್ತಾರೆ.

ಮುಂಬೈ, ಕೋಲ್ಕತ್ತದಲ್ಲಿ ಮಾಲಿನ್ಯ ಹೆಚ್ಚಳ

ದೆಹಲಿಯಲ್ಲಿ ಮಾತ್ರವಲ್ಲ, ದೇಶದ ಕೆಲ ಇತರ ನಗರಗಳಲ್ಲಿ ಕೂಡ ವಾಯುವಿನ ಗುಣಮಟ್ಟ ಆತಂಕಕಾರಿ ಮಟ್ಟದಲ್ಲಿ ಇರುವುದು ದಾಖಲಾಗಿದೆ.

ಸ್ವಿಡನ್ ಮೂಲದ ಐಕ್ಯೂಏರ್ ಸಂಸ್ಥೆ ನಡೆಸುವ ಸಮೀಕ್ಷೆ ಪ್ರಕಾರ, ಅತಿ ಹೆಚ್ಚು ವಾಯುಮಾಲಿನ್ಯ ಹೊಂದಿದ ವಿಶ್ವದ ನಗರಗಳ ಪಟ್ಟಿಯಲ್ಲಿ ದೆಹಲಿ ನಂತರದ ಸ್ಥಾನಗಳಲ್ಲಿ ಮುಂಬೈ ಮತ್ತು ಕೋಲ್ಕತ್ತ ಇವೆ.

'ವಿಷಯುಕ್ತ ಗಾಳಿಯಿಂದ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟಾಗುವ ಜೊತೆಗೆ, ಪದೇಪದೇ ಆಸ್ಪತ್ರೆಗೆ ದಾಖಲಾಗುವ ಸನ್ನಿವೇಶ ಸೃಷ್ಟಿಯಾಗುತ್ತದೆ. ಈ ಬಗ್ಗೆ ವಿಸ್ತೃತ ಅಧ್ಯಯನ ನಡೆಸುವ ಅಗತ್ಯವಿದೆ' ಎಂದು ಪಿಡಬ್ಲ್ಯುಸಿ ಇಂಡಿಯಾ ಫೈನಾನ್ಶಿಯಲ್ ಸರ್ವಿಸಸ್ ಅಡ್ವೈಸರಿ ಲೀಡರ್ ಜಯದೀಪ್ ರಾಯ್ ಹೇಳುತ್ತಾರೆ.

ಹಿರಿಯ ನಾಗರಿಕರು, ಮಕ್ಕಳು, ಹೆಚ್ಚುಕಾಲ ಹೊರಗಡೆಯೇ ಕೆಲಸ ನಿರ್ವಹಿಸುವವರು ಹಾಗೂ ದೀರ್ಘಕಾಲದಿಂದ ಉಸಿರಾಟದ ತೊಂದರೆ ಹೊಂದಿರುವವರು ಹೆಚ್ಚು ಪ್ರೀಮಿಯಂ ಭರಿಸಬೇಕಾಗುತ್ತದೆ.

ವಿಮಾ ಕಂಪನಿಗಳ ಈ ಯೋಜನೆಗೆ ಒಂದು ವೇಳೆ ಪ್ರಾಧಿಕಾರವು ಅನುಮೋದನೆ ನೀಡಿದಲ್ಲಿ, ಅಗತ್ಯವಿರುವವರಿಗೆ ಆರೋಗ್ಯ ವಿಮೆ ಕೈಗೆಟುಕುವುದಿಲ್ಲ ಎಂದು ಮೂಲಗಳು ಹೇಳುತ್ತವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

25ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಜೆ. ಎಮ್. ಕರಿಯಣ್ಣ
24-12-1936 – 22-02-2000
ಸೈಂಟ್ ಸೋಫಿಯಾಸ್ ಕಾನ್‌ವೆಂಟ್ ಹೈಸ್ಕೂಲ್, ನಾಗರಬಾವಿ ಮತ್ತು ಎಸ್.ಎಮ್.ಕೆ ಗ್ರಾನೈಟ್ಸ್ ಇದರ ಸಂಸ್ಥಾಪಕರು
ನಿಮ್ಮ ಸಹನೆ, ಧೈರ್ಯ, ಛಲ, ವಾತ್ಸಲ್ಯ ಮತ್ತು ತ್ಯಾಗ ಭಾವಗಳೇ ನಮ್ಮ ದಾರಿದೀಪಗಳಾಗಲಿ.
ಸದಾ ನಿಮ್ಮನ್ನು ಸ್ಮರಿಸುವ ಕುಟುಂಬವರ್ಗದವರು ಮತ್ತು ಸಿಬ್ಬಂದಿ ವರ್ಗ.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ. ಚಂದ್ರಮತಿ ವಿ
ನಿವೃತ್ತ ಸಹಾಯಕ ಮುಖ್ಯೋಪಾಧ್ಯಾಯಿನಿ, ಸರ್ಕಾರಿ ಕಿರಿಯ ಶಾಲೆ, ಬೆಂಗಳೂರು
ದಿ. ಕೆ ಟಿ ಪ್ರಭಾಕರ್ ರವರ ಧರ್ಮಪತ್ನಿ
ಜನನ: 04.04.1935 – ನಿಧನ: 17.02.2025
ದಿ: 17.02.2025 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ
ದುಃಖತಪ್ತರು: ಜನಾರ್ಧನ್ ಮಗ, ಚೇತನಾ ಮಗಳು, ಶೇಖರ್ ಅಳಿಯ, ಕಾವ್ಯ ಸೊಸೆ, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಚಿರಸ್ಮರಣೆ

ಕೆ. ಶೇಖರ್‌ಗೌಡ
ಶ್ರೀಮತಿ ಜಯಲಕ್ಷ್ಮಮ್ಮ ಮತ್ತು ಶ್ರೀ ಬಿ.ಹೆಚ್. ಕೆಂಪಣ್ಣನವರ ಪುತ್ರ
ಜಿಂಕೆಬಚ್ಚಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆ.ಗ್ರಾ. ಜಿಲ್ಲೆ.
ನೀನು ನಮ್ಮನ್ನಗಲಿ ಇಂದಿಗೆ 15 ವರ್ಷವಾದರೂ ನಿನ್ನ ನೆನಪು ಹಚ್ಚಹಸಿರಾಗಿ ಉಳಿದಿದೆ. ನಿನ್ನ ಆತ್ಮಕ್ಕೆ ಭಗವಂತನ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ
ನಿನ್ನ ತಂದೆ, ತಾಯಿ ಮತ್ತು ಕುಟುಂಬ
ಜನನ: 27.1.1982 ಮರಣ: 22.2.2010
ಮೊ: 8722503858

3ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ರತ್ನಮ್ಮ, ಬ್ಯಾಟರಾಯನಪುರ
ನಾವು ನಿಮ್ಮನ್ನು ಕಳೆದುಕೊಂಡು ಇಂದಿಗೆ ಮೂರು ವರ್ಷವಾದರೂ ನೀವು ಪ್ರತಿಕ್ಷಣ ನಮ್ಮೊಂದಿಗಿದ್ದೀರಿ.
ಇಂತಿ: ಪತಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ತಂಗಿ, ತಮ್ಮಂದಿರು ಹಾಗೂ ಮೊಮ್ಮಕ್ಕಳು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
This is to inform the general public that my client intends to purchase the immovable property mentioned and described in the schedule here below from its owner, **Sri. K.B. Kumar,** son of Late Buddi Gowda (hereafter referred to as "Owner"). The Owner represents that the Schedule Property is free from any encumbrance, mortgage, charge, lien or litigation and he has not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence within **Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.
SCHEDULE
All that piece and parcel of the Property bearing **Nos. 3844/3 M-9/1** and **3844/4 M-9/2, new property No. 44-2-537-30** comprising a commercial building measuring **1041.628436 square meters** of built-up area, situated at Anegundi Road, Bannimantap, Tilak Nagar, Mandi Mohalla, in ward No. 44, Mysore, measuring on the **East to West (197+163)/2 feet, North to South 160 feet, measuring in total 28,800 square feet** or **2675.618 square meters** and is bounded on the:
East by : Road;
West by : Road;
North by : Property bearing Survey Nos. 3844/2-M9 and 3844/2A/M-9/A; and
South by: Road.
Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road, Bengaluru-560001 Ph.: 080 22863885
email : vinay@vinaykademane.in
Place : Bengaluru
Date : 21-02-2025

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಉದ್ಯೋಗಾವಕಾಶ

Wanted
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9148525233

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Hotel
ಬೆಂಗಳೂರು ಪೀಣ್ಯದಲ್ಲಿರುವ ಪ್ರಸಿದ್ಧ ಫ್ಯಾಕ್ಟರಿ ಕ್ಯಾಂಟೀನ್ ಒಂದಕ್ಕೆ ದಕ್ಷಿಣ ಭಾರತೀಯ ಶೈಲಿ ಅಡುಗೆಯವರು, ತರಕಾರಿ ಹೆಚ್ಚುವವರು ಬೇಕಾಗಿದ್ದಾರೆ. ಸಂಪರ್ಕಿಸಿ 9591810814

PROPERTY CORNER
ಭೂಮಿಯು ಗುತ್ತಿಗೆ ಅಥವಾ ಬಾಡಿಗೆಗೆ ಬೇಕಾಗಿದೆ
ವಾಹನ ದುರಸ್ತಿ ಕೇಂದ್ರಗಳ ಸ್ಥಾಪನೆಗಾಗಿ ಕನಿಷ್ಠ 1 ಎಕರೆ ಮೇಲ್ಪಟ್ಟ ಭೂಮಿಯನ್ನು 40 ಅಡಿ ರಸ್ತೆಗೆ ಹೊಂದಿಕೊಂಡಿರುವಂತೆ ನಾವು ಗುತ್ತಿಗೆ ಅಥವಾ ಬಾಡಿಗೆಗೆ ಹುಡುಕುತ್ತಿದ್ದೇವೆ,
ಸ್ಥಳ: ಬೆಂಗಳೂರು, ಚಿತ್ರದುರ್ಗ, ರಾಯಚೂರು, ಚಿಕ್ಕಬಳ್ಳಾಪುರ, ಹಾಸನ, ಚಿಕ್ಕಮಂಗಳೂರು, ಉಡುಪಿ, ಮಡಿಕೇರಿ, ಮಂಡ್ಯ, ಚಾಮರಾಜನಗರ, ಗುಲ್ಬರ್ಗ, ವಿಜಯನಗರ (ಹೊಸಪೇಟೆ,) ರಾಮನಗರ, ಉತ್ತರಕನ್ನಡ, ಮಂಗಳೂರು, ಕೊಪ್ಪಳ,
ಸಂಪರ್ಕಿಸಿ: 81234 13586

General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

6 ದಿನಗಳ ಬಾಲಿ ಇಂಡೋನೇಷ್ಯಾ. 8 ದಿನಗಳ ನೇಪಾಳ ಮುಕ್ತಿನಾಥ. 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 18 ದಿನಗಳ ಯುಕೆ,ಯುರೋಪ್. 20 ದಿನಗಳ ಆಸ್ಟ್ರೇಲಿಯಾ ನ್ಯೂಜಿಲೆಂಡ್. 5/9 ದಿನಗಳ ಕಾಶಿ,ಅಯೋಧ್ಯ,ಪ್ರಯಾಗ್‌ರಾಜ್ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9900099252 9880079588

ಪ್ರವಾಸ
Travel
ದೆಹಲಿ ಆಗ್ರಾ, ಅಯೋಧ್ಯೆ 7 ದಿನಗಳು. ವೈಷ್ಣೋದೇವಿ 7ದಿನಗಳು, ನೇಪಾಳ,ಮುಕ್ತಿನಾಥ ಯಾತ್ರಾ 7 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವೆಲ್ಸ್, ಮಲ್ಲೇಶ್ವರಂ ಬೆಂಗಳೂರು. 9448294477

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
@50/-* PER WORDS
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
7795158424
9900428036

ಸಂಕ್ಷಿಪ್ತ ಸುದ್ದಿ

ಭೋಲೆ ಬಾಬಾಗೆ 'ಕ್ಲೀನ್ ಚಿಟ್'

ಹಾಥರಸ್ (ಉತ್ತರ ಪ್ರದೇಶ) (ಪಿಟಿಐ): 'ಹಾಥರಸ್‌ನಲ್ಲಿ ನಡೆದಿದ್ದ ಕಾಲ್ತುಳಿತ ಪ್ರಕರಣದ ನ್ಯಾಯಾಂಗ ತನಿಖೆಗೆ ರಚಿಸಲಾಗಿದ್ದ ಆಯೋಗವು ಸ್ವಯಂ ಘೋಷಿತ ದೇವಮಾನವ ಭೋಲೆ ಬಾಬಾ ಅವರಿಗೆ 'ಕ್ಲೀನ್ ಚಿಟ್' ನೀಡಿದೆ' ಎಂದು ಅವರ ವಕೀಲರು ತಿಳಿಸಿದ್ದಾರೆ.

ಭೋಲೆ ಬಾಬಾ ಎಂದೇ ಗುರುತಿಸಲಾಗುವ ನಾರಾಯಣ ಸರ್ಕಾರ್ ಹರಿ ಅವರ ಧರ್ಮಪ್ರವಚನಕ್ಕಾಗಿ ಕಳೆದ ವರ್ಷ ಜುಲೈ 2ರಂದು ಏರ್ಪಡಿಸಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ಕಾಲ್ತುಳಿತ ಸಂಭವಿಸಿ, 121 ಜನ ಮೃತಪಟ್ಟಿದ್ದರು.

ಪ್ರಕರಣದ ತನಿಖೆಗಾಗಿ ನಿವೃತ್ತ ನ್ಯಾಯಮೂರ್ತಿ ಬ್ರಿಜೇಶ್ ಕುಮಾರ್ ಶ್ರೀವಾತ್ಸವ ಅವರ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರ ಆಯೋಗವನ್ನು ರಚಿಸಿತ್ತು. ಐಎಎಸ್ ಅಧಿಕಾರಿ ಹೇಮಂತ್ ರಾವ್, ಮಾಜಿ ಐಪಿಎಸ್ ಅಧಿಕಾರಿ ಭವೇಶ್ ಕುಮಾರ್ ಸದಸ್ಯರಾಗಿದ್ದರು.

'ಅದಾನಿ ಪ್ರಕರಣ ದೇಶಕ್ಕೆ ಸಂಬಂಧಿಸಿದ್ದು'

ರಾಯ್‌ಬರೇಲಿ (ಪಿಟಿಐ): 'ಅದಾನಿ ಸಮೂಹಕ್ಕೆ ಸಂಬಂಧಿಸಿದ ಬೆಳವಣಿಗೆ 'ಖಾಸಗಿ ವಿಷಯ, ದೇಶಕ್ಕೆ ಸಂಬಂಧಿಸಿದ್ದಲ್ಲ' ಎಂಬ ಹೇಳಿಕೆಗಾಗಿ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ವಾಗ್ದಾಳಿ ನಡೆಸಿದರು.

ಲೋಕಸಭೆಯಲ್ಲಿ ತಾನು ಪ್ರತಿನಿಧಿಸುತ್ತಿರುವ ಕ್ಷೇತ್ರದಲ್ಲಿನ ಎರಡನೇ ದಿನದ ಪ್ರವಾಸದಲ್ಲಿ, ಯುವಜನರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಪ್ರಧಾನಿಯವರೇ ಅದು ಖಾಸಗಿ ವಿಷಯವಲ್ಲ. ದೇಶಕ್ಕೆ ಸಂಬಂಧಿಸಿದ ವಿಷಯವಾಗಿದೆ' ಎಂದು ಪ್ರತಿಪಾದಿಸಿದರು.

ಇತ್ತೀಚೆಗೆ ಅಮೆರಿಕ ಪ್ರವಾಸ ಕೈಗೊಂಡಿದ್ದ ಪ್ರಧಾನಿ ಮೋದಿ ಮಾಧ್ಯಮ ಗೋಷ್ಠಿಯಲ್ಲಿ, ಗೌತಮ್ ಅದಾನಿ ಅವರ ವಿರುದ್ಧ ಸ್ಥಳೀಯ ಕೋರ್ಟ್‌ನಲ್ಲಿ ದಾಖಲಾಗಿರುವ ಪ್ರಕರಣ ಕುರಿತ ಪ್ರಶ್ನೆಗೆ 'ಅದು ಖಾಸಗಿ ವಿಷಯ' ಎಂದು ಪ್ರತಿಕ್ರಿಯಿಸಿದ್ದರು.

24 ಗಂಟೆ ಶಾಸ್ತ್ರೀಯ ನೃತ್ಯ: ದಾಖಲೆ

ಛತರ್‌ಪುರ (ಪಿಟಿಐ): ಮಧ್ಯಪ್ರದೇಶದಲ್ಲಿ ನಡೆದ 51ನೇ ಖಜುರಾಹೊ ನೃತ್ಯೋತ್ಸವದಲ್ಲಿ 139 ಕಲಾವಿದರು 24 ಗಂಟೆಗಳ ಕಾಲ ಶಾಸ್ತ್ರೀಯ ನೃತ್ಯ ಪ್ರದರ್ಶನ ನೀಡಿ ಗಿನ್ನಿಸ್ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಇದು ಸುದೀರ್ಘ ಅವಧಿಯ ಶಾಸ್ತ್ರೀಯ ನೃತ್ಯ ಎಂಬ ದಾಖಲೆ ಬರೆದಿದೆ.

ಕಲಾವಿದರು, ಬುಧವಾರ ಮಧ್ಯಾಹ್ನ 2.34ರಿಂದ ಗುರುವಾರ ಮಧ್ಯಾಹ್ನ 2.43ರವರೆಗೆ ನಿರಂತರವಾಗಿ 24 ಗಂಟೆ, 9 ನಿಮಿಷ, 6 ಸೆಕೆಂಡ್ ನೃತ್ಯ ಮಾಡಿದ್ದಾರೆ. ನೃತ್ಯ ಪ್ರದರ್ಶನದ ಬಳಿಕ ಗಿನ್ನಿಸ್ ತಂಡವು ಮುಖ್ಯಮಂತ್ರಿ ಮೋಹನ್ ಯಾದವ್ ಅವರಿಗೆ ಪ್ರಮಾಣಪತ್ರ ನೀಡಿತು.

ರಾಜ್ಯದ ಸಾಂಸ್ಕೃತಿಕ ಇಲಾಖೆಯು ಕಾರ್ಯಕ್ರಮ ಆಯೋಜಿಸಿತ್ತು. ಕಥಕ್, ಭರತನಾಟ್ಯ, ಕುಚಿಪುಡಿ, ಮೋಹಿನಿಅಟ್ಟಂ ಹಾಗೂ ಒಡಿಸ್ಸಿ ಶಾಸ್ತ್ರೀಯ ನೃತ್ಯ ಪ್ರದರ್ಶಿಸಲಾಯಿತು.

ರೈತರೊಂದಿಗೆ ಇಂದು ಸಭೆ

ಚಂಡೀಗಢ (ಪಿಟಿಐ): ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕಾನೂನು ಖಾತರಿ ಸೇರಿದಂತೆ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ರೈತರ ಜತೆಗೆ ಮತ್ತೊಂದು ಸುತ್ತಿನ ಮಾತುಕತೆಯನ್ನು ಕೇಂದ್ರ ಸರ್ಕಾರ ಶನಿವಾರ ನಡೆಸಲಿದೆ.

ಮುಂದಿನ ಸಭೆಯನ್ನು ದೆಹಲಿಯಲ್ಲಿ ನಡೆಸುವಂತೆ ರೈತರು ಸರ್ಕಾರವನ್ನು ಕಳೆದ ಸಭೆಯಲ್ಲಿ ಕೋರಿದ್ದರು. ಆದರೆ ಕೇಂದ್ರ ಸರ್ಕಾರ ಸಭೆಯನ್ನು ಚಂಡೀಗಢದಲ್ಲಿ ನಿಗದಿ ಮಾಡಿದೆ.

ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಪೂರ್ಣ ಚಂದ್ರ ಕೃಷ್ಣ ಅವರು ರೈತ ನಾಯಕರಾದ ಜಗಜಿತ್ ಸಿಂಗ್ ಡಲ್ಲೇವಾಲ್ ಮತ್ತು ಸರವಣ ಸಿಂಗ್ ಪಂಡೇರ್ ಅವರಿಗೆ ಪತ್ರ ಮುಖೇನ ಸಭೆಯ ಬಗ್ಗೆ ಮಾಹಿತಿ ನೀಡಿದ್ದಾರೆ.

ಚಂಡೀಗಢದಲ್ಲಿ ಕಳೆದ 14ರಂದು ಎಸ್‌ಕೆಎಂ (ರಾಜಕೀಯೇತರ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾ (ಕೆಎಂಎಂ) ಜತೆ ನಡೆದ ಸಭೆಯ ಮುಂದುವರಿದ ಭಾಗ ಇದೇ 22 ರಂದು (ಶನಿವಾರ) ನಡೆಯಲಿದೆ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಅಂಗವಿಕಲ ಅಭ್ಯರ್ಥಿಗಳಿಗೆ ಎಂಬಿಬಿಎಸ್ ಪ್ರವೇಶ: 2019ರ ಮಾರ್ಗಸೂಚಿಗಳಿಗೆ ಸುಪ್ರೀಂ ಕೋರ್ಟ್ ಆಕ್ಷೇಪ

'ಎಲ್ಲರಿಗೂ ಒಂದೇ ನಿಯಮ, ವಿಧಾನ ಸಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ನಿರ್ದಿಷ್ಟ ಅಂಗವೈಕಲ್ಯ' ಹೊಂದಿರುವ ಅಭ್ಯರ್ಥಿಗಳಿಗೆ ಮಾತ್ರ ಎಂಬಿಬಿಎಸ್‌ಗೆ ಪ್ರವೇಶ ನೀಡುವ ಅವಕಾಶಗಳನ್ನು ಒಳಗೊಂಡ 2019ರ ಮಾರ್ಗಸೂಚಿಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಆಕ್ಷೇಪ ವ್ಯಕ್ತಪಡಿಸಿದೆ.

'ಅಂಗವಿಕಲ ಅಭ್ಯರ್ಥಿಗಳ ಅಗತ್ಯಗಳು ಭಿನ್ನವಾಗಿರುತ್ತವೆ. ಎಲ್ಲರಿಗೂ ಒಂದೇ ರೀತಿಯ ನಿಯಮ ಅಥವಾ ಸಾರ್ವತ್ರಿಕ ಪರಿಹಾರ ಎಂಬ ವಿಧಾನ ಬೇಡ' ಎಂದಿರುವ ಸುಪ್ರೀಂ ಕೋರ್ಟ್, 'ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ–2016' ಅನ್ವಯಿಸುವಾಗ ಹೊಂದಾಣಿಕೆ ಅಗತ್ಯ' ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಕೆ.ವಿ. ವಿಶ್ವನಾಥನ್ ಅವರು ಇದ್ದ ನ್ಯಾಯಪೀಠ, ಈ ಕುರಿತ ಅರ್ಜಿಯೊಂದರ ವಿಚಾರಣೆ ನಡೆಸಿತು.

ಶೇ 58ರಷ್ಟು ಅಂಗವೈಕಲ್ಯ ಹೊಂದಿರುವ ವಿದ್ಯಾರ್ಥಿ ಅನ್ಮೋಲ್ ಅವರಿಗೆ ರಾಜಸ್ಥಾನದ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಅಂಗವಿಕಲರ (ಒಬಿಸಿ) ಕೋಟಾದಡಿ ಪ್ರವೇಶ ನೀಡುವಂತೆ ಪೀಠ ನಿರ್ದೇಶನ ನೀಡಿದೆ.

ಅನ್ಮೋಲ್‌ಗೆ ಪ್ರವೇಶ ನಿರಾಕರಿಸುವ ಕುರಿತು ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಏಐಐಎಂಎಸ್) ವೈದ್ಯಕೀಯ ಮಂಡಳಿ ನೀಡಿದ್ದ ವರದಿಯನ್ನು ತಿರಸ್ಕರಿಸಿರುವ ಪೀಠ, ಪ್ರತ್ಯೇಕ ಸದಸ್ಯರೊಬ್ಬರ ಶಿಫಾರಸನ್ನು ಮಾನ್ಯ ಮಾಡಿದೆ.

ವಿಚಾರಣೆ ವೇಳೆ, ಎಂಬಿಬಿಎಸ್‌ಗೆ ಪ್ರವೇಶ ಬಯಸುವ ಅಂಗವಿಕಲ ಅಭ್ಯರ್ಥಿಗಳಿಗೆ ಸಂಬಂಧಿಸಿ, 'ಎರಡೂ ಕೈಗಳು ಪರಿಪೂರ್ಣವಾಗಿರಬೇಕು', ಚಲನೆ ಮತ್ತು ಸಂವೇದನಾ ಸಾಮರ್ಥ್ಯ ಇರಬೇಕು ಹಾಗೂ ವ್ಯಕ್ತಿ ದೃಢವಾಗಿರಬೇಕು' ಎಂಬ ಅಂಶಗಳನ್ನು ಒಳಗೊಂಡ 2019ರ ಮಾರ್ಗಸೂಚಿಗಳಿಗೆ ಪೀಠವು ಆಕ್ಷೇಪ ವ್ಯಕ್ತಪಡಿಸಿತು.

'ಅಭ್ಯರ್ಥಿಯ ಎರಡೂ ಕೈಗಳು ಪರಿಪೂರ್ಣವಾಗಿ ಇರಬೇಕು ಎಂಬುದು ಸಂವಿಧಾನದ 41ನೇ ವಿಧಿಗೆ ವಿರುದ್ಧವಾಗಿದೆ. ಅಂಗವಿಕಲರ ಹಕ್ಕುಗಳಿಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಒಪ್ಪಂದ ಹಾಗೂ ಕಾಯ್ದೆಯಲ್ಲಿನ ಅವಕಾಶಗಳಿಗೂ ಇದು ವಿರುದ್ಧ'.

'ಈ ಮಾರ್ಗಸೂಚಿಗಳು ಅಂಗವೈಕಲ್ಯ ಇಲ್ಲದಿರುವವರನ್ನು ವೈಭವೀಕರಿಸುವಂತಿವೆ. ಬಹುಸಂಖ್ಯಾತರಿಗೆ ಸಮನಾದ ಇಲ್ಲವೇ ಅವರಿಗಿಂತಲೂ ವಿಶೇಷ ಸಾಮರ್ಥ ಉಳ್ಳ ವ್ಯಕ್ತಿಗಳು ಶ್ರೇಷ್ಠ ಎಂಬ ಸಂದೇಶ ರವಾನಿಸುವಂತಿವೆ' ಎಂದು ಹೇಳಿದೆ. ಈ ವಿಚಾರವಾಗಿ ನ್ಯಾಯಾಲಯವು ಈ ಹಿಂದೆ ನೀಡಿರುವ ತೀರ್ಪುಗಳ ಅನುಸಾರ ಪರಿಷ್ಕೃತ ಮಾರ್ಗಸೂಚಿಗಳನ್ನು ರಚಿಸಿರುವ ಕುರಿತು ಮುಂದಿನ ವಿಚಾರಣೆ ದಿನವಾದ ಮೇ 3ರ ಒಳಗಾಗಿ ಪ್ರಮಾಣಪತ್ರ ಸಲ್ಲಿಸುವಂತೆ ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ (ಎನ್‌ಎಂಸಿ) ಪೀಠವು ನಿರ್ದೇಶನ ನೀಡಿದೆ.

ಪ್ರತಿಕ್ರಿಯೆಗೆ 'ಮಹಾ', ಅಸ್ಸಾಂ ಸರ್ಕಾರಕ್ಕೆ ಸೂಚನೆ



ನವದೆಹಲಿ (ಪಿಟಿಐ): ಇಂಡಿಯಾಸ್ ಗಾಟ್ ಲ್ಯಾಟೆಂಟ್ ಶೋ ವೇಳೆ ಅಶ್ಲೀಲ ಹೇಳಿಕೆಗಳನ್ನು ನೀಡಿದ ಆರೋಪದಡಿ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು ಇಲ್ಲವೇ ಪ್ರಕರಣವನ್ನು ಮುಂಬೈಗೆ ವರ್ಗಾವಣೆ ಮಾಡಬೇಕು ಎಂದು ಕೋರಿ ಯೂಟ್ಯೂಬರ್ ಆಶಿಶ್ ಚಂಚಲಾನಿ ಸಲ್ಲಿಸಿರುವ ಮೇಲ್ಮನವಿ ಕುರಿತು ಪ್ರತಿಕ್ರಿಯೆ ನೀಡುವಂತೆ ಮಹಾರಾಷ್ಟ್ರ ಹಾಗೂ ಅಸ್ಸಾಂ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ ಹಾಗೂ ಎನ್.ಕೋಟೀಶ್ವರ ಸಿಂಗ್ ಅವರು ಇದ್ದ ಪೀಠವು ನೋಟಿಸ್ ನೀಡುವ ಜೊತೆಗೆ, ವಿಚಾರಣೆ ಬಾಕಿ ಇರುವ ಪಾಡ್‌ಕಾಸ್ಟರ್ ರಣವೀರ್ ಅಲಹಾಬಾದಿಯಾ ಅವರ ಅರ್ಜಿಯನ್ನು ಈ ಪ್ರಕರಣಕ್ಕೆ ಸೇರಿಸಿದರು.

ಸಮಯ್ ರೈನಾ ನಡೆಸಿಕೊಟ್ಟ ಯೂಟ್ಯೂಬ್ ಕಾರ್ಯಕ್ರಮವೊಂದರಲ್ಲಿ ವಿವಾದಾತ್ಮಕ ಹೇಳಿಕೆಗಳನ್ನು ನೀಡಲಾಗಿದೆ ಎನ್ನಲಾದ ಪ್ರಕರಣದಲ್ಲಿ ರಣವೀರ್ ಪ್ರಮುಖ ಆರೋಪಿಯಾಗಿದ್ದಾರೆ. ಈ ಪ್ರಕರಣ ಕುರಿತು ದಾಖಲಾಗಿರುವ ಎಫ್‌ಐಆರ್‌ನಲ್ಲಿ ಚಂಚಲಾನಿ ಹೆಸರನ್ನೂ ಉಲ್ಲೇಖಿಸಲಾಗಿದೆ. ವಿಚಾರಣೆ ವೇಳೆ, 'ಅರ್ಜಿದಾರನಿಗೆ ಈಗಾಗಲೇ ಜಾಮೀನು ನೀಡಲಾಗಿದೆ' ಎಂದು ಚಂಚಲಾನಿ ಪರ ಹಾಜರಿದ್ದ ಹಿರಿಯ ವಕೀಲರಾದ ಅಜಯ್ ತಿವಾರಿ ಹಾಗೂ ಶುಭಂ ಕುಲಶ್ರೇಷ್ಠ ಅವರನ್ನು ಉದ್ದೇಶಿಸಿ ಪೀಠ ಹೇಳಿತು.

ಈ ಮಾತಿಗೆ ಒಪ್ಪಿದ ಇಬ್ಬರೂ ವಕೀಲರು, 'ಒಂದೇ ಕಾರ್ಯಕ್ರಮಕ್ಕೆ ಸಂಬಂಧಿಸಿ ಅನೇಕ ಎಫ್‌ಐಆರ್ ದಾಖಲು ಮಾಡುತ್ತಿರುವುದಕ್ಕೆ ನನ್ನ ಕಕ್ಷಿದಾರನ ವಿರೋಧವಿದೆ' ಎಂದು ಹೇಳಿದರು.

'ಈ ಕುರಿತು ಈಗಾಗಲೇ ವಿಚಾರಣೆ ನಡೆಸಲಾಗಿದೆ' ಎಂದ ಪೀಠ, ಅರ್ಜಿ ವಿಚಾರಣೆಯನ್ನು ಮುಂದೂಡಿತು.

ಸಜ್ಜನ್‌ಗೆ ಶಿಕ್ಷೆ ಪ್ರಮಾಣ 25ಕ್ಕೆ ತೀರ್ಪು ಪ್ರಕಟ



ಸಜ್ಜನ್ ಕುಮಾರ್

ನವದೆಹಲಿ (ಪಿಟಿಐ): 1984ರ ಸಿಖ್ ವಿರೋಧಿ ದಂಗೆಗೆ ಸಂಬಂಧಿಸಿದ ಕೊಲೆ ಪ್ರಕರಣವೊಂದರ ಅಪರಾಧಿ, ಕಾಂಗ್ರೆಸ್‌ನ ಮಾಜಿ ಸಂಸದ ಸಜ್ಜನ್ ಕುಮಾರ್‌ಗೆ ವಿಧಿಸಲಾಗುವ ಶಿಕ್ಷೆಯ ಪ್ರಮಾಣದ ಕುರಿತ ತೀರ್ಪನ್ನು ದೆಹಲಿ ಹೈಕೋರ್ಟ್ ಫೆ.25ಕ್ಕೆ ಕಾಯ್ದಿರಿಸಿದೆ.

ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರ ಮುಂದೆ ಹಾಜರಾಗಿದ್ದ ದೂರುದಾರರು, 'ಸಜ್ಜನ್ ಅವರ ಪ್ರಚೋದನೆಯಿಂದಾಗಿ ತಮ್ಮ ಪತಿ ಮತ್ತು ಮಗನ ಹತ್ಯೆಯಾಗಿದೆ. ಅವರಿಗೆ ಮರಣದಂಡನೆ ವಿಧಿಸಬೇಕು' ಎಂದು ಮನವಿ ಮಾಡಿದರು.

ಸಜ್ಜನ್‌ಗೆ ಮರಣದಂಡನೆ ವಿಧಿಸುವಂತೆ ಪ್ರಾಸಿಕ್ಯೂಷನ್ ಕೂಡಾ ಮನವಿ ಮಾಡಿತ್ತು. ಈ ಬಗ್ಗೆ ಎರಡು ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ ಪ್ರತಿಕ್ರಿಯೆ ನೀಡುವಂತೆ ಸಜ್ಜನ್ ಪರ ವಕೀಲರಿಗೆ ನ್ಯಾಯಾಲಯ ಸೂಚಿಸಿದೆ. ಮುಂದಿನ ವಿಚಾರಣೆಯ ದಿನದಂದು ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸುವುದಾಗಿ ನ್ಯಾಯಾಧೀಶರು ಹೇಳಿದ್ದಾರೆ.

ತಿಹಾರ್ ಕಾರಾಗೃಹದಲ್ಲಿರುವ ಸಜ್ಜನ್ ಕುಮಾರ್ ಅವರು ಕೊಲೆ ಪ್ರಕರಣದ ಅಪರಾಧಿ ಎಂದು ಪರಿಗಣಿಸಿ ನ್ಯಾಯಾಲಯವು ಫೆ.12ರಂದು ತೀರ್ಪು ನೀಡಿತ್ತು. ಸಜ್ಜನ್ ಕುಮಾರ್ ಮಾನಸಿಕ ಸ್ಥಿತಿಯ ಬಗ್ಗೆ ವರದಿ ನೀಡುವಂತೆ ನ್ಯಾಯಾಲಯವು ತಿಹಾರ್ ಕೇಂದ್ರ ಕಾರಾಗೃಹದ ಅಧಿಕಾರಿಗಳಿಗೆ ಶುಕ್ರವಾರ ನಿರ್ದೇಶನ ನೀಡಿದೆ. ಮರಣದಂಡನೆ ವಿಧಿಸುವ ಸಂದರ್ಭಗಳಲ್ಲಿ ಇಂತಹ ವರದಿಯನ್ನು ಕೇಳಲಾಗುತ್ತದೆ.

ದೆಹಲಿಯ ಪಾಲಂ ಕಾಲೊನಿಯಲ್ಲಿ ನಡೆದಿದ್ದ ಐವರ ಹತ್ಯೆ ಪ್ರಕರಣದಲ್ಲಿ ಸಜ್ಜನ್ ಅವರಿಗೆ ದೆಹಲಿ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿತ್ತು, ಆ ಶಿಕ್ಷೆಯನ್ನು ಪ್ರಶ್ನಿಸಿ ಅವರು ಸಲ್ಲಿಸಿದ್ದ ಮೇಲ್ಮನವಿಯು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ.

'ಶಾಸಕ ಅನ್ಸಾರಿ ವಿರುದ್ಧ ತನಿಖೆ ಬಾಕಿ ಇದೆಯೇ?'

ನವದೆಹಲಿ (ಪಿಟಿಐ): ಉತ್ತರ ಪ್ರದೇಶ ಶಾಸಕ ಅಬ್ಬಾಸ್ ಅನ್ಸಾರಿ ವಿರುದ್ಧ ಗೂಂಡಾ ಕಾಯ್ದೆ ಅಡಿ ದಾಖಲಾಗಿರುವ ಪ್ರಕರಣ ಕುರಿತು ತನಿಖೆ ಇನ್ನೂ ಬಾಕಿ ಇದೆಯೇ ಎಂದು ಉತ್ತರ ಪ್ರದೇಶ ಸರ್ಕಾರವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಪ್ರಶ್ನಿಸಿದೆ.

ಅನ್ಸಾರಿ ವಿರುದ್ಧದ ಪ್ರಕರಣ ಕುರಿತ ತನಿಖೆಯನ್ನು 10 ದಿನಗಳ ಒಳಗಾಗಿ ಪೂರ್ಣಗೊಳಿಸುವಂತೆ ಸೂಚಿಸಿದ ಸುಪ್ರೀಂ ಕೋರ್ಟ್, ತನಿಖೆ ಪೂರ್ಣಗೊಂಡ ನಂತರ ಜಾಮೀನು ಕೋರಿ ಅನ್ಸಾರಿ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸುವುದಾಗಿ ಹೇಳಿದೆ.

ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಸೂರ್ಯಕಾಂತ ಹಾಗೂ ಎನ್.ಕೋಟೀಶ್ವರ ಸಿಂಗ್ ಅವರು ಇದ್ದ ನ್ಯಾಯಪೀಠ, ವಿಚಾರಣೆಯನ್ನು ಮಾರ್ಚ್ 6ಕ್ಕೆ ಮುಂದೂಡಿತು.

ಇದಕ್ಕೂ ಮುನ್ನ ವಿಚಾರಣೆ ವೇಳೆ, ಅನ್ಸಾರಿ ಪರ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್, 'ಈ ಪ್ರಕರಣ ಕುರಿತ ತನಿಖೆ ಪೂರ್ಣಗೊಂಡಿದ್ದು, ಉತ್ತರ ಪ್ರದೇಶ ಗೂಂಡಾ ಕಾಯ್ದೆಯಡಿ ಆರೋಪ ಪಟ್ಟಿ ಸಲ್ಲಿಸಲಾಗಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಅನ್ಸಾರಿ ವಿರುದ್ಧ ಯಾವ ತನಿಖೆಯೂ ಬಾಕಿ ಇಲ್ಲ. ಆದರೆ, ಪ್ರಕರಣ ಕುರಿತು ತಪ್ಪು ಪ್ರಮಾಣಪತ್ರ ಸಲ್ಲಿಸಲಾಗಿದೆ' ಎಂದೂ ಸಿಬಲ್ ಹೇಳಿದರು.

ಪಂಜಾಬ್: ಹೊಸಬರಿಗೆ ಕಾಂಗ್ರೆಸ್ ಮಣೆ

ಚಂಡೀಗಢ(ಪಿಟಿಐ): ಪಂಜಾಬ್ ವಿಧಾನಸಭೆಗೆ 2027ರಲ್ಲಿ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಕನಿಷ್ಠ 60ರಿಂದ 70 ಮಂದಿ ಹೊಸಬರಿಗೆ ಟಿಕೆಟ್ ನೀಡಲಾಗುವುದು ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಅಮರಿಂದರ್ ಸಿಂಗ್ ರಾಜ ವಾರಿಂಗ್ ಗುರುವಾರ ಹೇಳಿದ್ದಾರೆ.

ಇಲ್ಲಿ ನಡೆದ ಪಂಜಾಬ್ ಯುವ ಕಾಂಗ್ರೆಸ್ ರಾಜ್ಯ ಕಾರ್ಯಕಾರಿಣಿ ಉದ್ದೇಶಿಸಿ ಮಾತನಾಡಿದ ವಾರಿಂಗ್, 'ರಾಜ್ಯ ಘಟಕ ತೆಗೆದುಕೊಂಡಿರುವ ಈ ತೀರ್ಮಾನವು ನಮ್ಮ ರಾಜಕೀಯ ನಾಯಕತ್ವವನ್ನು ಪುನರುಜ್ಜೀವನಗೊಳಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಈ ಹೊಸ ಮುಖಗಳು ಬದಲಾವಣೆಯನ್ನು ಸಂಕೇತಿಸುವುದಲ್ಲದೆ, ಪಂಜಾಬ್‌ನ ಯುವಕರು ಮತ್ತು ಸಾಮಾನ್ಯ ಜನರ ನಂಬಿಕೆ ಹಾಗೂ ಭರವಸೆಗಳನ್ನು ಸಾಕಾರಗೊಳಿಸಲಿವೆ. ಯುವ ಕಾಂಗ್ರೆಸ್ ಸದಸ್ಯರು ಈ ಅವಕಾಶವನ್ನು ಬಳಸಿಕೊಳ್ಳಬೇಕು' ಎಂದು ಒತ್ತಿಹೇಳಿದರು.

'ಮುಂದಿನ ಚುನಾವಣೆಗೆ ನಮಗೆ ಎರಡು ವರ್ಷಗಳು ಉಳಿದಿವೆ. ಜನರ ಸಮಸ್ಯೆಗಳನ್ನು ಪರಿಹರಿಸುವ ಮತ್ತು ಅವರ ಹಕ್ಕುಗಳ ಪರ ದೃಢವಾಗಿ ನಿಲ್ಲುವ ಮೂಲಕ ನಿಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುವ ಸಮಯ ಇದು. ಯುವ ನಾಯಕರಿಗೆ ರಾಜಕೀಯ ಕ್ಷೇತ್ರದಲ್ಲಿ ಬೆಳೆಯಲು ಮತ್ತು ಮಿಂಚಲು ಅವಕಾಶಗಳನ್ನು ನೀಡಲು ಕಾಂಗ್ರೆಸ್ ಬದ್ಧವಾಗಿದೆ' ಎಂದು ಭರವಸೆ ನೀಡಿದರು.

ಎನ್‌ಇಪಿ ವಿವಾದ: ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್‌ಗೆ ತಿರುಗೇಟು

ಭಿನ್ನಾಭಿಪ್ರಾಯ ಬದಿಗಿಡಿ: ಪ್ರಧಾನ್

ಧರ್ಮೇಂದ್ರ ಪ್ರಧಾನ್

ನವದೆಹಲಿ (ಪಿಟಿಐ): ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ತಮ್ಮ ರಾಜಕೀಯ ಸ್ಥಿರತೆಗಾಗಿ ಪ್ರಗತಿಪರ ಸುಧಾರಣೆಗಳಿಗೆ ಅಡ್ಡಿ ಉಂಟುಮಾಡುತ್ತಿದ್ದಾರೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಶುಕ್ರವಾರ ಟೀಕಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಯ ಕುರಿತು ನಡೆಯುತ್ತಿರುವ ತಿಕ್ಕಾಟದ ಭಾಗವಾಗಿ ಧರ್ಮೇಂದ್ರ ಪ್ರಧಾನ್ ಅವರು ಸ್ಟಾಲಿನ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಈ ಬಗ್ಗೆ ಸ್ಟಾಲಿನ್ ಅವರಿಗೆ ಪತ್ರ ಬರೆದಿರುವ ಧರ್ಮೇಂದ್ರ ಪ್ರಧಾನ್, 'ನೀವು ರಾಜಕೀಯ ಭಿನ್ನಾಭಿಪ್ರಾಯ ಮೀರಿ ನಿಲ್ಲಬೇಕು ಮತ್ತು ಎನ್‌ಇಪಿಯಿಂದ ಪ್ರಯೋಜನ ಪಡೆದುಕೊಳ್ಳಲಿರುವ ಯುವಜನರ ಹಿತಾಸಕ್ತಿಯ ಬಗ್ಗೆ ಯೋಚನೆ ಮಾಡಬೇಕು' ಎಂದು ಹೇಳಿದ್ದಾರೆ.

ಪ್ರಧಾನಿ ಮೋದಿ ಅವರಿಗೆ ಸ್ಟಾಲಿನ್ ಅವರು ಗುರುವಾರ ಬರೆದಿದ್ದ ಪತ್ರಕ್ಕೆ ಪ್ರತಿಯಾಗಿ ಪ್ರಧಾನ್ ಅವರು ಸ್ಟಾಲಿನ್ ಅವರಿಗೆ ಪತ್ರ ಬರೆದಿದ್ದಾರೆ. 'ಸ್ಟಾಲಿನ್ ಬರೆದಿರುವ ಪತ್ರವು, ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿದೆ. ಎನ್‌ಇಪಿಯನ್ನು ತಮ್ಮ ರಾಜಕೀಯ ಹಿತಾಸಕ್ತಿಯ ರಕ್ಷಣೆಗಾಗಿ ಬಳಸಿಕೊಳ್ಳುವುದು ಸೂಕ್ತವಲ್ಲ' ಎಂದು ಧರ್ಮೇಂದ್ರ ಪ್ರಧಾನ್ ಪತ್ರದಲ್ಲಿ ಹೇಳಿದ್ದಾರೆ.

ಯಾರು ರಾಜಕೀಯ ಮಾಡುತ್ತಿದ್ದಾರೆ?

ಧರ್ಮೇಂದ್ರ ಪ್ರದಾನ್ ಹೇಳಿಕೆಗೆ ತಿರುಗೇಟು ನೀಡಿದ ತಮಿಳುನಾಡು ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರು, 'ತಮಿಳುನಾಡು ದ್ವಿಭಾಷಾ ಸೂತ್ರವನ್ನು ಮಾತ್ರ ಪಾಲಿಸುತ್ತದೆ. ತ್ರಿಭಾಷಾ ಸೂತ್ರವನ್ನು ಯಾವಾಗಲೂ ವಿರೋಧಿಸುತ್ತೇವೆ. ನಾವು ನಮ್ಮ ಪಾಲಿನ ಅನುದಾನವನ್ನು ಕೇಳುತ್ತಿದ್ದೇವೆ, ಆದರೆ ಕೇಂದ್ರ ಸರ್ಕಾರ ನಾವು ಎನ್‌ಇಪಿ ಮತ್ತು ತ್ರಿಭಾಷಾ ಸೂತ್ರವನ್ನು ಒಪ್ಪಿಕೊಳ್ಳಬೇಕೆಂದು ಬಯಸುತ್ತಿದೆ' ಎಂದು ಹೇಳಿದ್ದಾರೆ.

'ಶಿಕ್ಷಣವು ತಮಿಳರ ಹಕ್ಕು. ಈ ವಿಚಾರದಲ್ಲಿ ಯಾರು ರಾಜಕೀಯ ಮಾಡುತ್ತಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಿ' ಎಂದರು.

ನೃತ್ಯ ತಾಲೀಮು

ಪ್ರಧಾನಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ಅಸ್ಸಾಂನ ಗುವಾಹಟಿಯಲ್ಲಿ ಫೆ.24ರಂದು ನಡೆಯಲಿರುವ 'ಜುಮಾಯಿರ್ ಬಿನಂದಿನಿ' ನೃತ್ಯ ಕಾರ್ಯಕ್ರಮಕ್ಕೆ ಕಲಾವಿದರು ಶುಕ್ರವಾರ ತಾಲೀಮು ನಡೆಸಿದರು ಪಿಟಿಐ ಚಿತ್ರ

ಮಣಿಪುರ: ಸ್ವಯಂಸೇವಕರ ಬಂಧನ ಖಂಡಿಸಿ ಪ್ರತಿಭಟನೆ

ಇಂಫಾಲ್ (ಪಿಟಿಐ): ಮಣಿಪುರದ ಕಾಕ್ಚಿಂಗ್ ಜಿಲ್ಲೆಯಲ್ಲಿ ಗ್ರಾಮ ಸ್ವಯಂಸೇವಕರ ಬಂಧನ ಖಂಡಿಸಿ ಪ್ರತಿಭಟನಕಾರರು ಇಂಫಾಲ್ ಕಣಿವೆಯಾದ್ಯಂತ ಶುಕ್ರವಾರ ರಸ್ತೆಗಳಲ್ಲಿ ಟೈರ್‌ಗಳನ್ನು ಸುಟ್ಟು ಪ್ರತಿಭಟನೆ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಂಫಾಲ್ ಪೂರ್ವ, ಇಂಫಾಲ್ ಪಶ್ಚಿಮ, ತೌಬಲ್ ಮತ್ತು ಕಾಕ್ಚಿಂಗ್ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಇಂಫಾಲ್‌ನ ವಾಂಗ್‌ಖೇ, ಉರಿಪೋಕ್, ತಂಗ್‌ಮೈಬಾಂಡ್ ಮತ್ತು ಖುರೈ ಪ್ರದೇಶಗಳಲ್ಲಿ ಅಂಗಡಿಗಳು ಮತ್ತು ಮಾರುಕಟ್ಟೆಗಳನ್ನು ಪ್ರತಿಭಟನಕಾರರು ಬಂದ್ ಮಾಡಿಸಿದರು ಎಂದು ಅವರು ತಿಳಿಸಿದ್ದಾರೆ.

ಜಿಲ್ಲೆಯ ಪಂಜಾವೋ ಪಲ್ಲುಮ್ಡಾದಲ್ಲಿ ನಸುಕಿನಲ್ಲಿ ಕಾರ್ಯಾಚರಣೆ ನಡೆಸಿದ ಭದ್ರತಾ ಪಡೆ ಸಿಬ್ಬಂದಿ, 10ಕ್ಕೂ ಹೆಚ್ಚು ಗ್ರಾಮ ಸ್ವಯಂಸೇವಕರನ್ನು ಬಂಧಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲೂಟಿ ಮಾಡಿದ ಮತ್ತು ಅಕ್ರಮವಾಗಿ ಇಟ್ಟುಕೊಂಡಿರುವ ಶಸ್ತ್ರಾಸ್ತ್ರಗಳನ್ನು ವಾರದೊಳಗೆ ಸ್ವಯಂಪ್ರೇರಿತವಾಗಿ ಒಪ್ಪಿಸುವಂತೆ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರು ಗಡುವು ನೀಡಿ, ಕಠಿಣ ಕ್ರಮದ ಎಚ್ಚರಿಕೆ ಕೊಟ್ಟ ಮರು ದಿನವೇ ಭದ್ರತಾ ಪಡೆ ಸಿಬ್ಬಂದಿ ಸ್ವಯಂ ಸೇವಕರನ್ನು ಬಂಧಿಸಿದ್ದಾರೆ.

17 ಉಗ್ರರ ಬಂಧನ: ನಿಷೇಧಿತ ಸಂಘಟನೆಗಳಿಗೆ ಸೇರಿದ 17 ಮಂದಿ ಉಗ್ರರನ್ನು ಕಳೆದ 24 ತಾಸುಗಳಲ್ಲಿ ಮಣಿಪುರದ ನಾಲ್ಕು ಜಿಲ್ಲೆಗಳಲ್ಲಿ ಬಂಧಿಸಿರುವುದಾಗಿ ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

'ಸುಂದರವಾಗಿರುವೆ' ಎಂಬ ಸಂದೇಶ 'ಅಶ್ಲೀಲತೆ'ಗೆ ಸಮ

ಒಂದನೇ ಪುಟದಿಂದ...

'ದೂರುದಾರ ಮಹಿಳೆಗೆ ರಾತ್ರಿ 11ರಿಂದ 12.30 ನಡುವೆ ಚಿತ್ರಗಳನ್ನು ಮತ್ತು 'ನೀನು ತೆಳ್ಳಗೆ ಇರುವೆ', 'ನೀನು ಸುಂದರವಾಗಿ ಕಾಣುತ್ತಿ', 'ನನ್ನ ವಯಸ್ಸು 40 ವರ್ಷ', 'ನಿನಗೆ ಮದುವೆಯಾಗಿದೆಯೇ ಅಥವಾ ಇಲ್ಲವೇ?' ಹಾಗೂ 'ನಾನು ನಿನ್ನನ್ನು ಇಷ್ಟಪಡುತ್ತೇನೆ'' ಎಂಬಂತಹ ಸಂದೇಶ ಕಳುಹಿಸಿದ್ದನ್ನು ಕೋರ್ಟ್ ಗಮನಿಸಿದೆ.

'ವಾಟ್ಸ್‌ಆ್ಯಪ್ ಮೂಲಕ ಅಶ್ಲೀಲ ಚಿತ್ರಗಳನ್ನು ಕಳುಹಿಸುವುದನ್ನು ಯಾವ ವಿವಾಹಿತ ಮಹಿಳೆ ಹಾಗೂ ಆಕೆಯ ಪತಿ ಸಹಿಸುವುದಿಲ್ಲ. ತಮ್ಮಿಬ್ಬರ ನಡುವೆ ಸಂಬಂಧ ಇತ್ತು ಎಂಬುದನ್ನು ಸಾಬೀತುಪಡಿಸುವಂತಹ ಯಾವುದೇ ಸಾಕ್ಷ್ಯವನ್ನು ಕೂಡ ಆರೋಪಿಯು ಒದಗಿಸಿಲ್ಲ' ಎಂದು ನ್ಯಾಯಾಲಯ ಹೇಳಿದೆ.

ಈ ಪ್ರಕರಣದಲ್ಲಿ ವ್ಯಕ್ತಿಗೆ ಮೂರು ತಿಂಗಳು ಜೈಲು ಶಿಕ್ಷೆ ವಿಧಿಸಿ, ಮ್ಯಾಜಿಸ್ಟ್ರೇಟ್ ಕೋರ್ಟ್ 2022ರಲ್ಲಿ ಆದೇಶಿಸಿತ್ತು.

'ರಾಜಕೀಯ ದ್ವೇಷದಿಂದ ನನ್ನ ವಿರುದ್ಧ ತಪ್ಪು ಆರೋಪ ಹೊರಿಸಲಾಗಿದೆ' ಎಂದು ಹೇಳಿದ್ದ ವ್ಯಕ್ತಿ, ಮ್ಯಾಜಿಸ್ಟ್ರೇಟ್ ಕೋರ್ಟ್ ಆದೇಶ ಪ್ರಶ್ನಿಸಿ, ಸೆಷನ್ಸ್ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ.

'ಪ್ರಜಾಪ್ರಭುತ್ವ ಮೌಲ್ಯಗಳ ಮೇಲಿನ ದಾಳಿ'

ಹೆಸರು ಬಹಿರಂಗವಾಗಲಿ: ಯುಎಸ್‌ಏಡ್ ವಿವಾದದ ಬಗ್ಗೆ ಜಗದೀಪ್ ಧನಕರ್ ಹೇಳಿಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಜಗದೀಪ್ ಧನಕರ್

ನವದೆಹಲಿ: ಅಂತರರಾಷ್ಟ್ರೀಯ ಅಭಿವೃದ್ಧಿಗಾಗಿನ ಅಮೆರಿಕದ ಏಜೆನ್ಸಿಯ (ಯುಎಸ್‌ಏಡ್) ನೆರವಿನ ವಿಚಾರದಲ್ಲಿ ಎದ್ದಿರುವ ವಿವಾದದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರೂ ಮಧ್ಯ ಪ್ರವೇಶಿಸಿದ್ದು, 'ದೇಶದ ಪ್ರಜಾಪ್ರಭುತ್ವ ಮತ್ತು ಚುನಾವಣಾ ವ್ಯವಸ್ಥೆಯ ಪಾವಿತ್ರ್ಯಕ್ಕೆ ಧಕ್ಕೆ ಉಂಟುಮಾಡುವ ಪ್ರಯತ್ನದ ಭಾಗ ಇದು' ಎಂದು ಟೀಕಿಸಿದ್ದಾರೆ.

ಈ ನಡುವೆ, ಭಾರತದ ಚುನಾವಣಾ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರಲು ಯುಎಸ್‌ಏಡ್ ನಿಧಿಯನ್ನು ಬಳಲಾಗಿದೆ ಎಂಬ ಆರೋಪದ ಕುರಿತು ಕಾಂಗ್ರೆಸ್ ಮತ್ತು ಬಿಜೆಪಿ ನಡುವಣ ವಾಕ್ಸಮರ ಶುಕ್ರವಾರವೂ ಮುಂದುವರಿದಿದೆ.

'ಭಾರತದಲ್ಲಿ ಮತದಾನ ಹೆಚ್ಚಿಸಲು ನಾವೇಕೆ ₹182 ಕೋಟಿ (2.1 ಕೋಟಿ ಡಾಲರ್) ಖರ್ಚು ಮಾಡಬೇಕು? ಬಹುಶಃ ಅವರು (ಹಿಂದಿನ ಅಧ್ಯಕ್ಷ ಜೋ ಬೈಡನ್ ಆಡಳಿತ) ಭಾರತದಲ್ಲಿ ಬೇರೆ ಯಾರನ್ನೋ ಆಯ್ಕೆ ಮಾಡಲು ಪ್ರಯತ್ನಿಸುತ್ತಿದ್ದರು ಎಂದು ನಾನು ಭಾವಿಸುತ್ತೇನೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದರು.

ಟ್ರಂಪ್ ಹೇಳಿಕೆಗೆ ನವದೆಹಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಪ್ರತಿಕ್ರಿಯಿಸಿದ ಧನಕರ್, 'ಅಮೆರಿಕದ ಅಧ್ಯಕ್ಷರು ಸಂಪೂರ್ಣ ಜವಾಬ್ದಾರಿಯೊಂದಿಗೆ ಬಹಿರಂಗಪಡಿಸಿರುವ ಮಾಹಿತಿಯನ್ನು ನೋಡಿ ದಿಗ್ಭ್ರಮೆಗೊಂಡಿದ್ದೇನೆ' ಎಂದರು.

'ಅಧಿಕಾರದಲ್ಲಿರುವ ವ್ಯಕ್ತಿಯೊಬ್ಬರು ಈ ಮಾತನ್ನು ಹೇಳಿದ್ದಾರೆ ಎಂದು ನನಗೆ ಖಾತ್ರಿಯಿದೆ. ನಿಜವಾಗಿ ನಡೆದ ವಿಚಾರವನ್ನೇ ಅವರು ಹೇಳಿದ್ದಾರೆ. ನೆರವಿನ ರೂಪದಲ್ಲಿ ಒಂದು ಮೊತ್ತವನ್ನು ನೀಡಲಾಗಿದ್ದು, ಅದು ಸಣ್ಣ ಮೊತ್ತವೇನಲ್ಲ. ಇಲ್ಲಿ ನಾವು ಚಾಣಕ್ಯನ ನೀತಿಯನ್ನು ಅಳವಡಿಸಿಕೊಳ್ಳಬೇಕು. ಸಮಸ್ಯೆಯನ್ನು ಮೂಲದಿಂದಲೇ ತೊಲಗಿಸಬೇಕು. ವಿದೇಶಿ ಹಸ್ತಕ್ಷೇಪಕ್ಕೆ ನೆರವು ನೀಡಿದವರು ಯಾರು ಎಂಬುದನ್ನು ಪತ್ತೆಹಚ್ಚಬೇಕು' ಎಂದರು.

ಈ ಬೆಳವಣಿಗೆಯನ್ನು 'ನಮ್ಮ ಪ್ರಜಾಪ್ರಭುತ್ವ ಮೌಲ್ಯಗಳ ಮೇಲಿನ ಕ್ರೂರ ದಾಳಿ' ಎಂದು ಬಣ್ಣಿಸಿದ ಅವರು, 'ಆ ಶಕ್ತಿಗಳ ವಿರುದ್ಧ ಪ್ರತೀಕಾರ ತೀರಿಸುವುದು' ನಮ್ಮ ಕರ್ತವ್ಯವಾಗಿದೆ ಎಂದರು. 'ನಮ್ಮ ಚುನಾವಣಾ ವ್ಯವಸ್ಥೆಯ ಮೇಲೆ ದಾಳಿ ನಡೆಸಿದವರು ಯಾರೆಂಬುದು ಬಹಿರಂಗವಾಗಬೇಕು. ಇಂತಹ ಸಮಸ್ಯೆಗಳು ತೊಲಗಿದರೆ ಮಾತ್ರ, ಅಭಿವೃದ್ಧಿ ಹೊಂದಿದ ಭಾರತದ ಕನಸು ನನಸಾಗಲು ಸಾಧ್ಯ' ಎಂದಿದ್ದಾರೆ.

'ನೆರವು ಭಾರತಕ್ಕೆ ಅಲ್ಲ, ಬಾಂಗ್ಲಾಕ್ಕೆ'

ಯುಎಸ್‌ಏಡ್ ₹182 ಕೋಟಿ ನೆರವನ್ನು ಬಾಂಗ್ಲಾದೇಶಕ್ಕೆ ನೀಡಿದೆಯೇ ಹೊರತು, ಭಾರತಕ್ಕಲ್ಲ ಎಂದು ಪತ್ರಿಕೆಯೊಂದು ಕೆಲವು ದಾಖಲೆಗಳನ್ನು ಒದಗಿಸಿ ವರದಿ ಮಾಡಿದೆ. ಇದರ ಬೆನ್ನಲ್ಲೇ ಕಾಂಗ್ರೆಸ್ ಪಕ್ಷವು ಬಿಜೆಪಿ ಮೇಲೆ ಹರಿಹಾಯ್ದಿದ್ದು, 'ಸುಳ್ಳು ಸುದ್ದಿ ಹಬ್ಬಿಸಿದ್ದಕ್ಕೆ ಕ್ಷಮೆಯಾಚಿಸಬೇಕು' ಎಂದು ಆಗ್ರಹಿಸಿದೆ.

'ಕಾಂಗ್ರೆಸ್ ನೇತೃತ್ವದ ಹಿಂದಿನ ಸರ್ಕಾರಗಳನ್ನು ಅಸ್ಥಿರಗೊಳಿಸಲು ವಿದೇಶದಿಂದ ಹಣಕಾಸಿನ ನೆರವು ಪಡೆದಿದ್ದ ಬಿಜೆಪಿ ಇದೀಗ ಗಮನ ಬೇರೆಡೆ ಸೆಳೆಯಲು ಈ ಸಂಕಥನ ಹೆಣೆದಿದೆ' ಎಂದು ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

'ಅಮೆರಿಕ ನೆರವು ನೀಡಿರುವುದು ಬಾಂಗ್ಲಾದೇಶಕ್ಕೆ ಎಂಬುದನ್ನು ಅಧಿಕೃತ ದಾಖಲೆಗಳು ಸಾಬೀತುಪಡಿಸಿವೆ. ಮೋದಿ ಅವರ ಆತ್ಮೀಯ ಸ್ನೇಹಿತ ಟ್ರಂಪ್ ಬಹುಶಃ ಅರಿತೋ ಅಥವಾ ಅರಿಯದೆಯೋ ತಪ್ಪು ಮಾಹಿತಿ ನೀಡಿದ್ದಾರೆ' ಎಂದು ಹೇಳಿದ್ದಾರೆ.

'ವಿದೇಶಿ ಹಸ್ತಕ್ಷೇಪ: ಕಳವಳಕಾರಿ'

ದೇಶದಲ್ಲಿನ ಕೆಲವು ಚಟುವಟಿಕೆಗಳಿಗೆ ಯುಎಸ್‌ಏಡ್ ಧನಸಹಾಯ ಲಭಿಸಿರುವ ವಿಷಯ ಬಹಿರಂಗಗೊಂಡಿರುವುದು 'ತೀವ್ರ ಆಘಾತ' ಉಂಟುಮಾಡಿದೆ ಮತ್ತು ತನ್ನ ಆಂತರಿಕ ವ್ಯವಹಾರಗಳಲ್ಲಿ ವಿದೇಶಿ ಹಸ್ತಕ್ಷೇಪದ ಬಗ್ಗೆ ಕಳವಳಕ್ಕೆ ಕಾರಣವಾಗಿದೆ ಎಂದು ಭಾರತ ಶುಕ್ರವಾರ ಹೇಳಿದೆ.

ಅಮೆರಿಕದ ಏಜೆನ್ಸಿಗಳ ಚಟುವಟಿಕೆಗಳು ಮತ್ತು ಹಣಕಾಸಿನ ನೆರವಿಗೆ ಸಂಬಂಧಿಸಿದಂತೆ ಅಮೆರಿಕ ಸರ್ಕಾರ ನೀಡಿರುವ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗಳು ಮತ್ತು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. 'ಯುಎಸ್‌ಏಡ್‌ಗೆ ಸಂಬಂಧಿಸಿದಂತೆ ಅಮೆರಿಕವು ನೀಡಿರುವ ಮಾಹಿತಿಯನ್ನು ನಾವು ಗಮನಿಸಿದ್ದೇವೆ. ಇವು ನಿಸ್ಸಂಶಯವಾಗಿ ಬಹಳ ಕಳವಳದ ವಿಚಾರ' ಎಂದಿದ್ದಾರೆ.

ವಾಷಿಂಗ್ಟನ್‌ನಲ್ಲಿ ಸೃಷ್ಟಿಸಿದ ಸುಳ್ಳನ್ನು ಬಿಜೆಪಿಯ ಸುಳ್ಳಿನ ಸೇನೆ ಎಲ್ಲ ಕಡೆ ಹಬ್ಬಿಸಿದೆ. ಸುಳ್ಳು ಈಗ ಸಂಪೂರ್ಣ ಬಯಲಾಗಿದೆ. ಸುಳ್ಳು ಹೇಳಿದವರು ಕ್ಷಮೆ ಕೇಳುವರೇ?

ಜೈರಾಮ್ ರಮೇಶ್, ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ)

ಭಾರತವನ್ನು ದುರ್ಬಲಗೊಳಿಸಲು ವಿದೇಶಿ ಶಕ್ತಿಗಳೊಂದಿಗೆ ಶಾಮೀಲಾಗಿರುವ ರಾಹುಲ್ ಗಾಂಧಿ ಒಬ್ಬ 'ದೇಶದ್ರೋಹಿ'. ಸಂವಿಧಾನ, ದೇಶ ಮತ್ತು ಜನರಿಗೆ ಕಾಂಗ್ರೆಸ್ ದ್ರೋಹ ಬಗೆದಿದೆ

ಗೌರವ್ ಭಾಟಿಯಾ, ಬಿಜೆಪಿ ರಾಷ್ಟ್ರೀಯ ವಕ್ತಾರ

'ಕಿಕ್‌ಬ್ಯಾಕ್' ಯೋಜನೆ: ಟ್ರಂಪ್

ನ್ಯೂಯಾರ್ಕ್: ಭಾರತದಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಆರ್ಥಿಕ ನೆರವು ನೀಡಿದ್ದನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 'ಕಿಕ್‌ಬ್ಯಾಕ್' ಯೋಜನೆ ಎಂದು ಹೇಳಿದ್ದಾರೆ.

ಭಾರತಕ್ಕೆ ಹಣಕಾಸಿನ ನೆರವಿನ ವಿಚಾರದಲ್ಲಿ ಹಿಂದಿನ ಅಧ್ಯಕ್ಷ ಜೋ ಬೈಡನ್ ಆಡಳಿತದ ಮೇಲಿನ ದಾಳಿಯನ್ನು ಅವರು ಮುಂದುವರಿಸಿದ್ದಾರೆ.

ಗುರುವಾರ ರಿಪಬ್ಲಿಕನ್ ಗವರ್ನರ್ಸ್ ಅಸೋಸಿಯೇಷನ್ ಸಭೆಯಲ್ಲಿ ಮಾತನಾಡಿದ ಅವರು, 'ಭಾರತದಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ನಾವೇಕೆ 2.1 ಕೋಟಿ ಡಾಲರ್ ಕೊಡಬೇಕು? ಭಾರತದ ಮತದಾನದ ಬಗ್ಗೆ ನಾವು ಏಕೆ ಕಾಳಜಿ ವಹಿಸುತ್ತಿದ್ದೇವೆ? ನಾವು ಬಗೆಹರಿಸಬೇಕಾದ ಹಲವು ಸಮಸ್ಯೆಗಳಿವೆ. ಇದೊಂದು ಕಿಕ್‌ಬ್ಯಾಕ್ ಯೋಜನೆ' ಎಂದಿದ್ದಾರೆ.

ಏ.3ರಿಂದ ಮುಕ್ತ ಗಾಲ್ಫ್ ಟೂರ್ನಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದ ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ಏಪ್ರಿಲ್ 3ರಿಂದ 5ರವರೆಗೆ ಪ್ರಮೋಷನಲ್ ಗಾಲ್ಫ್ ಚಾಂಪಿಯನ್‌ಷಿಪ್ ಆಯೋಜಿಸಲಾಗಿದ್ದು, ಆಟಗಾರರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ.

ವಿ ಗ್ರೂಪ್ ಸಂಸ್ಥೆಯ ಆಶ್ರಯದಲ್ಲಿ ರೋಟರಿ ಬೆಂಗಳೂರು ಐಟಿ ಕಾರಿಡಾರ್‌ನ ಸಹಭಾಗಿತ್ವದಲ್ಲಿ ಟೂರ್ನಿ ಆಯೋಜಿಸಲಾಗಿದೆ. ವಿವಿಧ ರಾಜ್ಯಗಳ ಆಟಗಾರರಿಗೆ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಧಿಕೃತ ಕ್ಲಬ್‌ಗಳಲ್ಲಿ ಸದಸ್ಯತ್ವ ಪಡೆಯದವರೂ ಇಲ್ಲಿ ಸ್ಪರ್ಧಿಸಲು ಅವಕಾಶವಿದೆ. ಟೂರ್ನಿಯಿಂದ ಸಂಗ್ರಹವಾಗುವ ಮೊತ್ತವನ್ನು ರೋಟರಿ ಸಂಸ್ಥೆಯ ಸಾಮಾಜಿಕ ಯೋಜನೆಗೆ ವಿನಿಯೋಗಿಸಲಾಗುತ್ತದೆ' ಎಂದು ವಿ ಗ್ರೂಪ್ ನಿರ್ದೇಶಕ ವೆಂಕಟೇಶ್ ಕೆ. ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಗಾಲ್ಫ್ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಚೊಚ್ಚಲ ಟೂರ್ನಿ ಆಯೋಜಿಸಲಾಗಿದೆ. ಕೌಶಲವುಳ್ಳ ಆಟಗಾರರು ಈ ಅವಕಾಶ ಸದುಪಯೋಗ ಪಡೆದುಕೊಳ್ಳಬೇಕು. ವಿಜೇತರಿಗೆ ಆಕರ್ಷಕ ಬಹುಮಾನ ನೀಡಲಾಗುತ್ತದೆ. ಮುಂದಿನ ವರ್ಷಗಳಲ್ಲಿ ಮುಂಬೈ, ದೆಹಲಿ, ಹೈದರಾಬಾದ್ ಮತ್ತು ಅಹಮದಾಬಾದ್‌ಗಳಲ್ಲೂ ಟೂರ್ನಿ ನಡೆಯುವ ಯೋಜನೆಯಿದೆ' ಎಂದರು.

ಆಸಕ್ತರು ನೋಂದಣಿಗೆ ವೆಬ್‌ಸೈಟ್– www.thepgc.in, ಮೊಬೈಲ್– +916360700180 ಸಂಪರ್ಕಿಸಬಹುದು.

ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ, ವೀಕ್ಷಕ ವಿವರಣೆಕಾರ ಸುನಿಲ್ ಗಾವಸ್ಕರ್ ಅವರ ಹೆಸರನ್ನು ಕಾಸರಗೋಡು ವಿದ್ಯಾನಗರದ ನಗರಸಭೆ ಕ್ರೀಡಾಂಗಣ ರಸ್ತೆಗೆ ಶುಕ್ರವಾರ ನಾಮಕರಣ ಮಾಡಿದ ನಂತರ ಅವರನ್ನು ತೆರೆದ ಜೀಪ್‌ನಲ್ಲಿ ಚೆಟ್ಟುಂಗುಳಿಯ ಸಭಾಂಗಣಕ್ಕೆ ಮೆರವಣಿಗೆ ಮೂಲಕ ಕರೆದೊಯ್ಯಲಾಯಿತು

ಐಎಂಎಲ್: ಯುವಿ– ಸಚಿನ್ ಜೊತೆಯಾಗಿ ಕಣಕ್ಕೆ

ಮುಂಬೈ (ಪಿಟಿಐ): ಭಾರತದ ಕ್ರಿಕೆಟ್ ದಿಗ್ಗಜರಾದ ಸಚಿನ್ ತೆಂಡೂಲ್ಕರ್ ಮತ್ತು ಯುವರಾಜ್ ಸಿಂಗ್ ದಶಕದ ನಂತರ ಮತ್ತೊಮ್ಮೆ ಜೊತೆಯಾಗಿ ತಂಡದ ನೀಲಿ ಧಿರಿಸಿನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇವರನ್ನು ಒಳಗೊಂಡ ಭಾರತ ತಂಡ ಶನಿವಾರ ನಡೆಯುವ ಇಂಟರ್ ನ್ಯಾಷನಲ್ ಮಾಸ್ಟರ್ಸ್ ಲೀಗ್ ಟೂರ್ನಿಯಲ್ಲಿ ಶ್ರೀಲಂಕಾವನ್ನು ಎದುರಿಸಲಿದೆ.

ಸಚಿನ್ ಭಾರತದ ಪರ ಒಂದು ಟಿ20 ಅಂತರರಾಷ್ಟ್ರೀಯ ಪಂದ್ಯ ಆಡಿದ್ದಾರೆ. ಮತ್ತೆ ಅವರು ಭಾರತದ ಜರ್ಸಿಯಲ್ಲಿ ಕಣಕ್ಕಿಳಿಯುತ್ತಿದ್ದಾರೆ. ಯುವರಾಜ್ ಅವರು 2011ರ ವಿಶ್ವಕಪ್ ಜೊತೆಗೆ 2007ರ ಟಿ20 ವಿಶ್ವಕಪ್ ಗೆದ್ದ ತಂಡದಲ್ಲಿ ಆಡಿದ್ದರು. ಲಂಕಾ ತಂಡದಲ್ಲಿ ಕುಮಾರ ಸಂಗಕ್ಕಾರ, ಮಹೇಲ ಜಯವರ್ಧನೆ, ಚಮಿಂದ ವಾಸ್, ತಿಲಕರತ್ನೆ ದಿಲ್ಶಾನ್, ಸನತ್ ಜಯಸೂರ್ಯ ಮೊದಲಾದವರು ಆಡಲಿದ್ದಾರೆ.

ಐಎಂಎಲ್ ಟೂರ್ನಿಯ ವಿವಿಧ ತಂಡಗಳ ನಾಯಕರು. ಇಯಾನ್ ಮಾರ್ಗನ್ (ಇಂಗ್ಲೆಂಡ್), ಶೇನ್ ವ್ಯಾಟ್ಸನ್ ಆಸ್ಟ್ರೇಲಿಯಾ), ಬ್ರಯಾನ್ ಲಾರಾ (ವೆಸ್ಟ್ ಇಂಡೀಸ್), ಸಚಿನ್ ತೆಂಡೂಲ್ಕರ್ (ಭಾರತ), ಕುಮಾರ ಸಂಗಕ್ಕಾರ (ಶ್ರೀಲಂಕಾ), ಮತ್ತು ಜಾಕ್ ಕಾಲಿಸ್ (ದಕ್ಷಿಣ ಆಫ್ರಿಕಾ)

ಭಾರತ, ಲಂಕಾ ತಂಡಗಳ ಜೊತೆ ಟೂರ್ನಿಯಲ್ಲಿ ಒಟ್ಟು ಆರು ತಂಡಗಳು ಭಾಗವಹಿಸಲಿವೆ. ಆಸ್ಟ್ರೇಲಿಯಾ, ಇಂಗ್ಲೆಂಡ್, ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ ಇತರ ನಾಲ್ಕು ತಂಡಗಳು. ಪಂದ್ಯಗಳು ನವಿ ಮುಂಬೈ, ವಡೋದರ, ರಾಯಪುರದಲ್ಲಿ ನಡೆಯಲಿವೆ. ಸೆಮಿಫೈನಲ್ಸ್ ಮತ್ತು ಫೈನಲ್ ಪಂದ್ಯ ರಾಯಪುರದಲ್ಲಿ ನಡೆಯಲಿವೆ. ಫೈನಲ್ ಮಾ. 16ರಂದು ನಡೆಯಲಿದೆ.

ರಿಕೆಲ್ಟನ್ ಚೊಚ್ಚಲ ಶತಕ • ಬವುಮಾ, ವಾನ್ ಡರ್ ಡಸೆ, ಮರ್ಕರಂ ಅರ್ಧಶತಕ

ಅಫ್ಗನ್ ಪಡೆ ಮೇಲೆ ಹರಿಣಗಳ ಸವಾರಿ

ಶತಕ ಸಂಭ್ರಮ... ಶತಕ ದಾಟಿದ ಮೇಲೆ ರಯಾನ್ ರಿಕೆಲ್ಟನ್ ಸಂಭ್ರಮ ಹೀಗಿತ್ತು –ಎಎಫ್‌ಪಿ ಚಿತ್ರ

ಕರಾಚಿ (ಎಎಫ್‌ಪಿ): ಆರಂಭ ಆಟಗಾರ ರಯಾನ್ ರಿಕೆಲ್ಟನ್ ಅವರ ಚೊಚ್ಚಲ ಏಕದಿನ ಶತಕ (103, 106ಎ) ಹಾಗೂ ಬೌಲರ್‌ಗಳ ಸಂಘಟಿತ ಪ್ರಯತ್ನದಿಂದ ದಕ್ಷಿಣ ಆಫ್ರಿಕಾ ತಂಡ, ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ 'ಬಿ' ಗುಂಪಿನ ಪಂದ್ಯದಲ್ಲಿ ಶುಕ್ರವಾರ ಅಫ್ಗಾನಿಸ್ತಾನ ತಂಡವನ್ನು 107 ರನ್‌ಗಳಿಂದ ಸುಲಭವಾಗಿ ಸೋಲಿಸಿ ಶುಭಾರಂಭ ಮಾಡಿತು.

ನ್ಯಾಷನಲ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಬ್ಯಾಟ್ ಮಾಡಿದ ದಕ್ಷಿಣ ಆಫ್ರಿಕಾ ತಂಡ ರಿಕೆಲ್ಟನ್ ಶತಕದ ಜೊತೆ, ನಾಯಕ ತೆಂಬಾ ಬವುಮಾ ತೆಂಬಾ ಬವುಮಾ (58, 76 ಎಸೆತ, 5 ಬೌಂಡರಿ), ರಸಿ ವಾನ್ ಡರ್ ಡಸೆ (52, 46ಎ) ಮತ್ತು ಏಡನ್ ಮರ್ಕರಂ (ಔಟಾಗದೇ 52, 36ಎ, 4x6, 6x1) ಅವರ ಅರ್ಧ ಶತಕಗಳ ಮೂಲಕ 6 ವಿಕೆಟ್‌ಗೆ 315 ರನ್‌ಗಳ ಉತ್ತಮ ಮೊತ್ತ ಗಳಿಸಿತು.

ಮೊದಲ ಬಾರಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡುತ್ತಿರುವ ಅಫ್ಗಾನಿಸ್ತಾನ, ಈ ದೊಡ್ಡ ಮೊತ್ತದ ಎದುರು ಆರಂಭದಿಂದಲೇ ವಿಕೆಟ್‌ಗಳನ್ನು ಕಳೆದುಕೊಳ್ಳತೊಡಗಿತು. ಅಂತಿಮವಾಗಿ 43.3 ಓವರುಗಳಲ್ಲಿ 208 ರನ್‌ಗಳಿಗೆ ಆಲೌಟ್ ಆಯಿತು. ರಹಮತ್ ಶಾ (90, 92ಎ, 4x9, 6x1) ಏಕಾಂಗಿಯಾಗಿ ಹೋರಾಡಿದರು.

ಹರಿಣಗಳ ಪಡೆಯ ವೇಗದ ಬೌಲರ್‌ಗಳಾದ ಕಗಿಸೊ ರಬಾಡ (36ಕ್ಕೆ3), ವಿಯಾನ್ ಮುಲ್ಡರ್ (36ಕ್ಕೆ2), ಲುಂಗಿ ಗಿಡಿ (56ಕ್ಕೆ2) ಅವರು ಯಶಸ್ಸು ಗಳಿಸಿದರು.

ಇದಕ್ಕೆ ಮೊದಲು, 28 ವರ್ಷ ವಯಸ್ಸಿನ ಎಡಗೈ ಆಟಗಾರ ರಿಕೆಲ್ಟನ್ ಒಂದು ಸಿಕ್ಸರ್, ಏಳು ಬೌಂಡರಿಗಳಿದ್ದ 103 ರನ್ ಹೊಡೆದರು.

ಸಪಾಟಾದ ಪಿಚ್‌ನಲ್ಲಿ ಅಫ್ಗಾನಿಸ್ತಾನದ ಗುಣಮಟ್ಟದ ಸ್ಪಿನ್ ದಾಳಿಯನ್ನು ದಕ್ಷಿಣ ಆಫ್ರಿಕಾದ ಬ್ಯಾಟರ್‌ಗಳು ವಿಶ್ವಾಸದಿಂದ ನಿಭಾಯಿಸಿದರು. ಲೆಗ್ ಸ್ಪಿನ್ನರ್ ರಶೀದ್ ಖಾನ್ 10 ಓವರುಗಳಲ್ಲಿ ಒಂದೂ ವಿಕೆಟ್ ಪಡೆಯದೇ 59 ರನ್ ಕೊಟ್ಟರು.

ಆರನೇ ಓವರಿನಲ್ಲಿ ದಾಳಿಗಿಳಿದ ಸ್ಪಿನ್ನರ್ ಮೊಹಮ್ಮದ್ ನಬಿ (51ಕ್ಕೆ2) ಮೊದಲ ಎಸೆತದಲ್ಲೇ ಟೋನಿ ಡಿ ಜಾರ್ಜಿ (11) ಅವರ ವಿಕೆಟ್ ಪಡೆದರು.

ಆದರೆ ರಿಕೆಲ್ಟನ್ ಮತ್ತು ಬವುಮಾ ಎರಡನೇ ವಿಕೆಟ್‌ಗೆ 129 ರನ್ ಸೇರಿಸಿ ಬೌಲರ್‌ಗಳನ್ನು ಕಾಡಿದರು. ಬವುಮಾ ಅವರೂ ನಬಿ ಅವರಿಗೆ ವಿಕೆಟ್ ನೀಡಿದ ನಂತರ ರಸಿ ವಾನ್ ಡರ್ ಡಸೆ, ರಿಕೆಲ್ಟನ್ ಜೊತೆಗೂಡಿ ತಂಡದ ಮೊತ್ತವನ್ನು 36ನೇ ಓವರಿನಲ್ಲಿ 200 ದಾಟಿಸಿದರು. ಅದೇ ಓವರಿನಲ್ಲಿ ರಿಕೆಲ್ಟನ್ ಆಟ ರನೌಟ್ ಮೂಲಕ ಕೊನೆಗೊಂಡಿತು. ಏಕದಿನ ಪಂದ್ಯಗಳಲ್ಲಿ ರಿಕೆಲ್ಟನ್ ಅವರ ಈ ಹಿಂದಿನ ಗರಿಷ್ಠ ಮೊತ್ತ 91.

ಡಸೆ ರನ್ ವೇಗ ಹೆಚ್ಚಿಸಲು ಹೋಗಿ ಎರಡು ಸಿಕ್ಸರ್, ಮೂರು ಬೌಂಡರಿಗಳನ್ನು ಬಾರಿಸಿ 43ನೇ ಓವರಿನಲ್ಲಿ ನೂರ್ ಅಹ್ಮದ್ ಬೌಲಿಂಗ್‌ನಲ್ಲಿ ನಿರ್ಗಮಿಸಿದರು. ಇನ್ನೊಂದೆಡೆ ಮರ್ಕರಂ ಆಕ್ರಮಣಕಾರಿಯಾಗಿ ಆಡಿದರು. ಇದರಿಂದ ಕೊನೆಯ ಐದು ಓವರುಗಳಲ್ಲಿ 50 ರನ್‌ಗಳು ಹರಿದುಬಂದವು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 50 ಓವರುಗಳಲ್ಲಿ 6 ವಿಕೆಟ್‌ಗೆ 315 (ರಯಾನ್ ರಿಕ್ಕೆಲ್ಟನ್ 103, ತೆಂಬಾ ಬವುಮಾ 58, ರಸಿ ವಾನ್ ಡರ್ ಡಸೆ 52, ಏಡನ್ ಮರ್ಕರಂ ಔಟಾಗದೇ 52; ಮೊಹಮ್ಮದ್ ಬಿ 51ಕ್ಕೆ2); ಅಫ್ಗಾನಿಸ್ತಾನ: 43.3 ಓವರುಗಳಲ್ಲಿ 208 (ರಹಮತ್ ಶಾ 90, ಅಜ್ಮತ್‌ವುಲ್ಲಾ ಒಮರ್‌ಝೈ 18, ರಶೀದ್ ಖಾನ್ 18; ಕಗಿಸೊ ರಬಾಡ 36ಕ್ಕೆ3, ವಿಯಾನ್ ಮುಲ್ಡರ್ 36ಕ್ಕೆ2). **ಪಂದ್ಯದ ಆಟಗಾರ:** ರಯಾನ್ ರಿಕೆಲ್ಟನ್.

ಆಸ್ಟ್ರೇಲಿಯಾ ತಂಡದ ನಾಯಕ ಸ್ಟೀವ್ ಸ್ಮಿತ್ ಬ್ಯಾಟಿಂಗ್ ಅಭ್ಯಾಸ ನಡೆಸಿದರು



ರೋಹಿತ್ ಶರ್ಮಾ ಸ್ಪಿನ್ನರ್ ಎಸೆದ ಬಾಲ್ ಕ್ಯಾಚ್ ಮಾಡದೇ ಬಿಡುವ ಮೂಲಕ ಹ್ಯಾಟ್ರಿಕ್ ತಪ್ಪಲು ಕಾರಣವಾದರು!

ಆ್ಯಷಸ್ ಎದುರಾಳಿಗಳ ಸೆಣಸಾಟ ಇಂದು

ಜೋಸ್ ಬಟ್ಲರ್

ಲಾಹೋರ್ (ಪಿಟಿಐ): ಗಾಯಾಳುಗಳ ಅನುಪಸ್ಥಿತಿಯಲ್ಲಿ ಸೊರಗಿರುವ ಆಸ್ಟ್ರೇಲಿಯಾ ತಂಡವು, ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ 'ಬಿ' ಗುಂಪಿನ ಪಂದ್ಯದಲ್ಲಿ ಶನಿವಾರ ಇಂಗ್ಲೆಂಡ್ ತಂಡವನ್ನು ಎದುರಿಸಲಿವೆ. ಎರಡೂ ತಂಡಗಳು ಏಕದಿನ ಸರಣಿ ಸೋತು ಇಲ್ಲಿಗೆ ಬಂದಿವೆ.

ಎರಡೂ ತಂಡಗಳು ಏಕದಿನ ಸರಣಿಯಲ್ಲಿ ಇತ್ತೀಚೆಗೆ ಅಂಥ ಉತ್ತಮ ಪ್ರದರ್ಶನವನ್ನೇನೂ ನೀಡಿಲ್ಲ. ಆಸ್ಟ್ರೇಲಿಯಾ ಇತ್ತೀಚೆಗಷ್ಟೇ 0–2 ಅಂತರದಲ್ಲಿ ಲಂಕಾಕ್ಕೆ ಏಕದಿನ ಸರಣಿ ಸೋತಿದೆ. ಅದಕ್ಕೆ ಮೊದಲು ಪಾಕಿಸ್ತಾನ ಎದುರು 1–2 ಅಂತರದಲ್ಲಿ ಸರಣಿ ಕಳೆದುಕೊಂಡಿತ್ತು.

ಇಂಗ್ಲೆಂಡ್ 2023 ಏಕದಿನ ವಿಶ್ವಕಪ್ ನಂತರ ಈ ಮಾದರಿಯಲ್ಲಿ ಯಾವುದೇ ಸರಣಿ ಜಯಿಸಿಲ್ಲ. ಭಾರತ ವಿರುದ್ಧ ಇತ್ತೀಚೆಗೆ ಆಡಿದ್ದ ಸರಣಿಯಲ್ಲಿ 0–3 ಮುಖಭಂಗ ಅನುಭವಿಸಿತ್ತು. ಹೀಗಾಗಿ ವಿಶ್ವಾಸ ಸಂಪಾದನೆ ದೃಷ್ಟಿಯಿಂದ ಎರಡೂ ತಂಡಗಳಿಗೆ 'ಮಿನಿ ವಿಶ್ವಕಪ್'ನ ಈ ಪಂದ್ಯ ಮಹತ್ವದ್ದು.

ಅನುಭವಿ ವೇಗಿಗಳಾದ ಪ್ಯಾಟ್ ಕಮಿನ್ಸ್, ಜೋಶ್ ಹ್ಯಾಜಲ್‌ವುಡ್ ಮತ್ತು ಮಿಚೆಲ್ ಸ್ಟಾರ್ಕ್ ಈ ಟೂರ್ನಿ ಯಲ್ಲಿ ಆಡುತ್ತಿಲ್ಲ. ಮೊದಲ ಇಬ್ಬರು ಗಾಯಾಳಾಗಿದ್ದಾರೆ. ಮಿಚೆಲ್ ಸ್ಟಾರ್ಕ್ ವೈಯಕ್ತಿಕ ಕಾರಣ ನೀಡಿ ಹಿಂದೆಸರಿದಿದ್ದಾರೆ. ಕ್ಯಾಮರೂನ್ ಗ್ರೀನ್ ಮತ್ತು ಮಿಚೆಲ್ ಮಾರ್ಷ್ ಕೂಡ ಗಾಯಾಳಾ ಗಿದ್ದಾರೆ. ಸ್ಟೊಯಿನಿಸ್ ದಿಢೀರನೇ ಏಕದಿನ ಮಾದರಿಗೆ ವಿದಾಯ ಹೇಳಿದ್ದು, ಸ್ಟೀವ್ ಸ್ಮಿತ್ ಸಾರಥ್ಯದ ತಂಡಕ್ಕೆ ಹಿನ್ನಡೆ ಉಂಟುಮಾಡಿದೆ. ಸ್ಮಿತ್ ಜೊತೆಗೆ ಆರಂಭ ಆಟಗಾರ ಟ್ರಾವಿಸ್ ಹೆಡ್ ಅವರ ಮೇಲೆ ಹೆಚ್ಚಿನ ಭಾರವಿದೆ. ಐಸಿಸಿಯ ಪ್ರಮುಖ ಪಂದ್ಯಗಳಲ್ಲಿ ಟ್ರಾವಿಸ್ ಹೆಡ್ ಗಮನ ಸೆಳೆದಿದ್ದಾರೆ.

ಇಂಗ್ಲೆಂಡ್ ತಂಡ ವೇಗಿಗಳಾದ ಜೋಫ್ರಾ ಆರ್ಚರ್, ಮಾರ್ಕ್ ವುಡ್ ಮತ್ತು ಬ್ರೈಡನ್ ಕಾರ್ಸ್ ಅವರನ್ನು ಒಳಗೊಂಡ ವೇಗದ ದಾಳಿಯ ಮೇಲೆ ಭರವಸೆ ಇಟ್ಟುಕೊಂಡಿದೆ. ವಿಶ್ವದ ಶ್ರೇಷ್ಠ ಸ್ಪಿನ್ನರ್ ಆದಿಲ್ ರಶೀದ್ ಅವರ ನಿರ್ವಹಣೆಯೂ ತಂಡದ ಪಾಲಿಗೆ ನಿರ್ಣಾಯಕ.

ಬೆನ್ ಡಕೆಟ್ ಮತ್ತು ಜೋ ರೂಟ್, ಜೋಸ್ ಬಟ್ಲರ್ ಬ್ಯಾಟಿಂಗ್ ಬೆನ್ನೆಲುಬಾಗಿದ್ದಾರೆ. ಇಂಗ್ಲೆಂಡ್ ಮೊದಲ ಬಾರಿ ಈ ಟೂರ್ನಿಯನ್ನು ಗೆಲ್ಲಲು ಪ್ರಯತ್ನಿಸುತ್ತಿದೆ.

ಪಂದ್ಯ ಆರಂಭ: ಮಧ್ಯಾಹ್ನ 2.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಅರ್ಧ ಶತಕ ಬಾರಿಸಿದ ನಾಯಕಿ ಹರ್ಮನ್‌ಪ್ರೀತ್ ಕೌರ್

ಹರ್ಮನ್–ಅಮನ್ ಜೊತೆಯಾಟಕ್ಕೆ ಗೆಲುವು

• ಗಿರೀಶ ದೊಡ್ಡಮನಿ

ಇಂದಿನ ಪಂದ್ಯ
ಡೆಲ್ಲಿ ಕ್ಯಾಪಿಟಲ್ಸ್ Vs ಯುಪಿ ವಾರಿಯರ್ಸ್
ಪಂದ್ಯ ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಅರ್ಧ ಶತಕ ಬಾರಿಸಿದ ನಾಯಕಿ ಹರ್ಮನ್ ಪ್ರೀತ್ ಕೌರ್ ಪ್ರಜಾವಾಣಿ ಚಿತ್ರ:ಪ್ರಶಾಂತ್ ಎಚ್‌.ಜಿ.

ಮಹಿಳಾ ಪ್ರೀಮಿಯರ್ ಲೀಗ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ಕಿಕ್ಕಿರಿದು ಸೇರಿದ್ದ ಅಭಿಮಾನಿಗಳಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯದ ಸಂಭ್ರಮ ಆಚರಿಸುವ ಅವಕಾಶ ಸಿಗಲಿಲ್ಲ. ಮುಂಬೈ ಇಂಡಿಯನ್ಸ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಅಮನ್ಜೋತ್ ಕೌರ್ ಅವರ ಜೊತೆಯಾಟಕ್ಕೇ ಜಯ ಒಲಿಯಿತು.

ಇಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯ 3ನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವು 4 ವಿಕೆಟ್‌ಗಳಿಂದ ರೋಚಕ ಜಯ ಸಾಧಿಸಿದಾಗ, ಇನಿಂಗ್ಸ್‌ನಲ್ಲಿ ಇನ್ನೊಂದು ಎಸೆತ ಮಾತ್ರ ಬಾಕಿ ಇತ್ತು. ವಡೋದರಾದಲ್ಲಿ ನಡೆದಿದ್ದ ಟೂರ್ನಿಯ ಮೊದಲ ಸುತ್ತಿನ ಎರಡು ಪಂದ್ಯಗಳಲ್ಲಿ ಆರ್‌ಸಿಬಿ ಜಯಿಸಿತ್ತು. ತವರಿನಂಗಳದಲ್ಲಿ ಆಡಿದ ಮೊದಲ ಪಂದ್ಯದಲ್ಲಿಯೂ ಗೆದ್ದ ಹ್ಯಾಟ್ರಿಕ್ ಸಾಧಿಸುವ ವಿಶ್ವಾಸದಲ್ಲಿತ್ತು.

168 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಮುಂಬೈ ತಂಡದ ಆರಂಭ ಉತ್ತಮವಾಗಿರಲಿಲ್ಲ. ಮೊದಲ ವಿಕೆಟ್ ಪತನವಾದಾಗ 9 ರನ್‌ಗಳಷ್ಟೇ ತಂಡದ ಖಾತೆಯಲ್ಲಿದ್ದವು. ಹೆಲಿ ಮ್ಯಾಥ್ಯೂಸ್ (15 ರನ್) ಮತ್ತು ನ್ಯಾಟ್ ಶಿವರ್ ಬ್ರಂಟ್ (42; 21ಎ, 4X9) ಚೇತರಿಕೆ ನೀಡಿದರು. ಇದರಿಂದಾಗಿ ಪವರ್‌ಪ್ಲೇನಲ್ಲಿಯೇ ತಂಡವು 66 ರನ್ ಗಳಿಸಿ 2 ವಿಕೆಟ್ ಕಳೆದುಕೊಂಡಿತು.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ನಾಯಕಿ ಹರ್ಮನ್ ಲಯ ಕಂಡುಕೊಂಡರು. ಆದರೆ ಕಿಮ್ ಗಾರ್ಥ್ ಅವರ ಓವರ್ ನಲ್ಲಿ ಬ್ರಂಟ್ ಮತ್ತು ಜಾರ್ಜಿಯಾ ಬೌಲಿಂಗ್‌ನಲ್ಲಿ ಅಮೆಲಿಯಾ ಕೆರ್ ಔಟಾದರು. ಇದರಿಂದಾಗಿ ರನ್ ಗಳಿಕೆ ವೇಗ ಕುಂಠಿತವಾಯಿತು.

ಹರ್ಮನ್ ಜೊತೆಗೂಡಿದ ಅಮನ್ ಅವರು 5ನೇ ವಿಕೆಟ್ ಜೊತೆಯಾಟದಲ್ಲಿ 62 ರನ್ ಸೇರಿಸಿ ತಂಡದಲ್ಲಿ ಗೆಲುವಿನ ಭರವಸೆ ಮೂಡಿಸಿದರು.

ಜಾರ್ಜಿಯಾಗೂ ತಪ್ಪಿದ ಹ್ಯಾಟ್ರಿಕ್: 18ನೇ ಓವರ್‌ನಲ್ಲಿ ಜಾರ್ಜಿಯಾ ಅವರು ಸತತ ಎರಡು ಎಸೆತಗಳಲ್ಲಿ ಹರ್ಮನ್‌ಪ್ರೀತ್ (50; 38ಎ, 4X8) ಮತ್ತು ಸಜೀವನ್ ಸಜನಾ ಅವರ ವಿಕೆಟ್ ಗಳಿಸಿದರು. ನಂತರದ ಎಸೆತದಲ್ಲಿ ಅವರಿಗೆ ಹ್ಯಾಟ್ರಿಕ್ ಗಳಿಸುವ ಅವಕಾಶವನ್ನು ಯುವ ಬ್ಯಾಟರ್ ಜಿ. ಕಮಲಿನಿ ತಪ್ಪಿಸಿದರು. ಅಮನ್ (ಔಟಾಗದೆ 34; 27ಎ, 4X2, 6X2) ಮತ್ತು ಕಮಲಿನಿ (ಔಟಾಗದೇ 11) ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಕೊನೆಯ ಎರಡು ಓವರ್‌ಗಳಲ್ಲಿ 22 ರನ್‌ಗಳ ಅವಶ್ಯಕತೆ ಮುಂಬೈಗೆ ಇತ್ತು. ಕನಿಕಾ ಅಹುಜಾ ಹಾಕಿದ ಈ ಓವರ್‌ನ ಮೊದಲ ಹಾಗೂ ಕೊನೆಯ ಎಸೆತದಲ್ಲಿ ಸಿಕ್ಸರ್ ಬಾರಿಸಿದ ಅಮನ್ ಗೆಲುವಿಗೆ ಮತ್ತಷ್ಟು ಹತ್ತಿರವಾದರು. ಕೊನೆಯ ಓವರ್‌ನಲ್ಲಿ ಬೇಕಾದ 6 ರನ್ ಬೇಕಾಗಿದ್ದವು. ಇಬ್ಬರೂ ಬ್ಯಾಟರ್‌ಗಳು ತಾಳ್ಮೆಯಿಂದ ಗುರಿ ಸಾಧಿಸಿದರು.

ಸಂಕ್ಷಿಪ್ತ ಸ್ಕೋರು: ರಾಯಲ್ ಚಾಲೆಂಜರ್ಸ್ ಬೆಂಗಳೂರು: 20 ಓವರ್‌ಗಳಲ್ಲಿ 7ಕ್ಕೆ 167 (ಸ್ಮೃತಿ ಮಂದಾನ 26, ಎಲಿಸ್ ಪೆರಿ 81, ರಿಚಾ ಘೋಷ್ 28, ಶಬ್ನಿಮ್ ಇಸ್ಮಾಯಿಲ್ 36ಕ್ಕೆ1, ನ್ಯಾಟ್ ಶಿವರ್ ಬ್ರಂಟ್ 40ಕ್ಕೆ1, ಹೆಲಿ ಮ್ಯಾಥ್ಯೂಸ್ 37ಕ್ಕೆ1, ಸಂಸ್ಕೃತಿ ಗುಪ್ತಾ 3ಕ್ಕೆ1, ಅಮನಜ್ಯೋತ್ ಕೌರ್ 22ಕ್ಕೆ3) ಮುಂಬೈ ಇಂಡಿಯನ್ಸ್ : 19.5 ಓವರ್‌ಗಳಲ್ಲಿ 6ಕ್ಕೆ170 (ಶಿವರ್ ಬ್ರಂಟ್ 42, ಹರ್ಮನ್‌ಪ್ರೀತ್ ಕೌರ್ 50, ಅಮನ್ಜೋತ್ ಕೌರ್ ಔಟಾಗದೇ 34, ಜಿ. ಕಮಲಿನಿ ಔಟಾಗದೇ 11, ಗಾರ್ಥ್ 30ಕ್ಕೆ2, ವೇರ್‌ಹ್ಯಾಮ್ 21ಕ್ಕೆ3) **ಫಲಿತಾಂಶ:** ಮುಂಬೈ ಇಂಡಿಯನ್ಸ್‌ಗೆ 4 ವಿಕೆಟ್ ಜಯ. **ಪಂದ್ಯದ ಆಟಗಾರ್ತಿ: ಅಮನ್ಜೋತ್ ಕೌರ್**

ಪೆರಿ ಬ್ಯಾಟಿಂಗ್ ಭರ್ಜರಿ

ಎಲಿಸ್ ಪೆರಿ (81; 43ಎಸೆತ) ಅವರ ಅಮೋಘ ಬ್ಯಾಟಿಂಗ್ ಬಲದಿಂದ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 167 ರನ್ ಗಳಿಸಿತು.

ಟಾಸ್ ಗೆದ್ದ ಮುಂಬೈ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಇನಿಂಗ್ಸ್ ಆರಂಭಿಸಿದ ಆರ್‌ಸಿಬಿ ನಾಯಕಿ ಸ್ಮೃತಿ ಮಂದಾನ ಬೀಸಾಟವಾಡಿದರು. ಅವರಿಗೆ ವ್ಯಾಟ್ ಹಾಜ್ ಕೂಡ ಜೊತೆ ನೀಡಿದರು. ಇದರಿಂದಾಗಿ ಕೇವಲ ಎರಡು ಓವರ್‌ಗಳಲ್ಲಿಯೇ 28 ರನ್‌ಗಳು ಹರಿದುಬಂದವು. ಆದರೆ ಮೂರನೇ ಓವರ್‌ನಲ್ಲಿ ಶಬ್ನಿಮ್ ಎಸೆತವನ್ನು ಆಡುವ ಭರದಲ್ಲಿ ಯಸ್ತಿಕಾ ಭಾಟಿಯಾಗೆ ಕ್ಯಾಚ್ ಕೊಟ್ಟ ಸ್ಮೃತಿ ಪೆವಿಲಿಯನ್‌ಗೆ ಮರಳಿದರು. ನಂತರ ಪೆರಿ 30 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಒಟ್ಟು 11 ಬೌಂಡರಿ ಮತ್ತು 2 ಸಿಕ್ಸರ್ ಸಿಡಿಸಿದರು.

ರೋಚಕ ಹೋರಾಟದಲ್ಲಿ ಕೇರಳ ಫೈನಲ್ ಪ್ರವೇಶ

ಅಹಮದಾಬಾದ್ (ಪಿಟಿಐ): ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶುಕ್ರವಾರ ಮುಕ್ತಾಯವಾದ ಕೇರಳ ಮತ್ತು ಗುಜರಾತ್ ನಡುವಣ ಸೆಮಿಫೈನಲ್ ಪಂದ್ಯವು ರೋಚಕ ಡ್ರಾ ಆಯಿತು. ಆದರೆ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಲು ನಡೆದ ಹಣಾಹಣಿಯು ಕ್ರಿಕೆಟ್‌ಪ್ರಿಯರ ಮೈನವಿರೇಳಿಸಿತು. ಹತ್ತಾರು ನಾಟಕೀಯ ತಿರುವುಗಳನ್ನು ಕಂಡ ಆಟದಲ್ಲಿ ಕೇರಳವು ಕೇವಲ 2 ರನ್ ಮುನ್ನಡೆ ಸಾಧಿಸಿತು.

ಕೇರಳ ತಂಡವು ದೇಶಿ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ 68 ವರ್ಷಗಳ ನಂತರ ಇದೇ ಮೊದಲ ಸಲ ಪ್ರಶಸ್ತಿ ಸುತ್ತಿಗೆ ಕಾಲಿಟ್ಟಿತು. ಕೇರಳ ತಂಡವು ಮೊದಲ ಇನಿಂಗ್ಸ್‌ನಲ್ಲಿ 457 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ನಾಲ್ಕನೇ ದಿನವಾದ ಗುರುವಾರದ ಅಂತ್ಯಕ್ಕೆ ಆತಿಥೇಯ ತಂಡವು 7 ವಿಕೆಟ್‌ಗಳಿಗೆ 429 ರನ್ ಗಳಿಸಿತ್ತು. ಪಂದ್ಯದ ಐದನೇ ಮತ್ತು ಕೊನೆಯ ದಿನ ಗುಜರಾತ್ ತಂಡಕ್ಕೆ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಲು 29 ರನ್ ಮತ್ತು ಕೇರಳಕ್ಕೆ 3 ವಿಕೆಟ್ ಗಳಿಸುವ ಅಗತ್ಯವಿತ್ತು.

ಗುಜರಾತ್ ತಂಡದ ಬಾಲಂಗೋಚಿ ಬ್ಯಾಟರ್‌ಗಳು ಕೇರಳ ಬೌಲರ್‌ಗಳಿಗೆ ಕಠಿಣ ಪರೀಕ್ಷೆಯೊಡ್ಡಿದರು. ಕ್ರೀಸ್‌ನಲ್ಲಿ ಉಳಿದಿದ್ದ ಜಯಮೀತ್ ಪಟೇಲ್ ಮತ್ತು ಸಿದ್ಧಾರ್ಥ್ ದೇಸಾಯಿ ಅವರಿಬ್ಬರೂ ತಾಳ್ಮೆಯಿಂದ ಒಂದೊಂದೇ ರನ್ ಹೆಕ್ಕುತ್ತ ಆಡಿದರು. ಗುರುವಾರದ ಮೊತ್ತಕ್ಕೆ 17 ರನ್ ಸೇರುವಷ್ಟರಲ್ಲಿ ಇಬ್ಬರೂ ಬ್ಯಾಟರ್‌ಗಳಿಗೆ ಪೆವಿಲಿಯನ್ ದಾರಿ ತೋರುವಲ್ಲಿ ಕೇರಳದ ಎಡಗೈ ಸ್ಪಿನ್ನರ್ ಆದಿತ್ಯ ಸರವಟೆ ಯಶಸ್ವಿಯಾದರು.

ಆದರೆ ಕೊನೆಯ ವಿಕೆಟ್ ಜೊತೆಯಾಟದಲ್ಲಿ 9 ರನ್ ಗಳಿಸಿದ ಅರ್ಜನ್ ನಾಗವಸ್ವಲ್ಲಾ (10; 48ಎ, 4X1) ಮತ್ತು ಪ್ರಿಯಜೀತ್‌ಸಿಂಗ್ ಜಡೇಜ (ಔಟಾಗದೇ 3; 30ಎ) ಅವರು ಜಿಗುಟುತನದ ಆಟವಾಡಿದರು. ಇವರಿಬ್ಬರೂ ಸೇರಿ 10 ಓವರ್‌ಗಳನ್ನು ಆಡಿದರು. ಬಿಗಿಯಾದ ಕ್ಷೇತ್ರರಕ್ಷಣೆಯ ನಡುವೆಯೂ ತಾಳ್ಮೆಯಿಂದ ಆಡಿ ರನ್ ಗಳಿಸಿದರು. 2 ರನ್ ಅಗತ್ಯವಿದ್ದ ಸಂದರ್ಭದಲ್ಲಿ ನಾಗಸ್ವಲ್ಲಾ ಅವರು ಬೀಸಿ ಹೊಡೆಯುವ ಯತ್ನದಲ್ಲಿ ಚೆಂಡು ಶಾರ್ಟ್ ಲೆಗ್ ಫೀಲ್ಡರ್ ಸಲ್ಮಾನ್ ನಿಜರ್ ಅವರ ಹೆಲ್ಮೆಟ್‌ಗೆ ಅಪ್ಪಳಿಸಿ ಮೇಲಕ್ಕೆ ಹಾರಿತು. ಮೊದಲ ಸ್ಲಿಪ್‌ನಲ್ಲಿದ್ದ ನಾಯಕ ಸಚಿನ್ ಬೇಬಿ ಕ್ಯಾಚ್ ಕೈತುಂಬಿಕೊಂಡರು. ಕೇರಳದ ಪಾಳೆಯದಲ್ಲಿ ಸಂಭ್ರಮ ಮುಗಿಲುಮುಟ್ಟಿತು. ಗುಜರಾತ್ ಬಳಗದಲ್ಲಿ ಮಂಕು ಕವಿಯಿತು. ಕ್ವಾರ್ಟರ್‌ಫೈನಲ್‌ನಲ್ಲಿಯೂ ಕೇರಳ ತಂಡವು ಜಮ್ಮು– ಕಾಶ್ಮೀರದ ಎದುರು ಕೇವಲ 1 ರನ್ ಇನಿಂಗ್ಸ್ ಮುನ್ನಡೆ ಸಾಧಿಸಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕೇರಳ: 187 ಓವರ್‌ಗಳಲ್ಲಿ 457. ಗುಜರಾತ್: 174.4 ಓವರ್‌ಗಳಲ್ಲಿ 455 (ಜಯಮೀತ್ ಪಟೇಲ್ 79, ಸಿದ್ಧಾರ್ಥ್ ದೇಸಾಯಿ 30,

ಕೇರಳ ಎರಡನೇ ಇನ್ನಿಂಗ್ಸ್ 46 ಓವರುಗಳಲ್ಲಿ 4 ವಿಕೆಟ್‌ಗೆ 114 (ರೋಹನ್ ಕುನ್ನುಮಾಳ್ 32, ಜಲಜ್ ಸಕ್ಸೇನ ಔಟಾಗದೇ 37; ಸಿದ್ಧಾರ್ಥ ದೇಸಾಯಿ 45ಕ್ಕೆ2, ಮನನ್ ಹಿಂಗ್ರೇಜಿಯಾ 22ಕ್ಕೆ2)

ಫಲಿತಾಂಶ: ಡ್ರಾ. ಮೊದಲ ಇನಿಂಗ್ಸ್‌ನಲ್ಲಿ 2 ರನ್ ಮುನ್ನಡೆ ಗಳಿಸಿದ ಕೇರಳ ಫೈನಲ್‌ಗೆ. ಪಂದ್ಯದ ಆಟಗಾರ: ಮೊಹಮ್ಮದ್ ಅಜರುದ್ದೀನ್.

ಫೈನಲ್‌ಗೆ ವಿದರ್ಭ: ಹಾಲಿ ಚಾಂಪಿಯನ್ ಮುಂಬೈ ಔಟ್

ವಿದರ್ಭ ತಂಡದ ಹರ್ಷ ದುಬೆ ಐದು ವಿಕೆಟ್ ಸಂಭ್ರಮ –ಪಿಟಿಐ ಚಿತ್ರ

ನಾಗಪುರ (ಪಿಟಿಐ): ವಿದರ್ಭ ಎದುರಿನ ಸೆಮಿಫೈನಲ್‌ನಲ್ಲಿ ಬೆಟ್ಟದಂತಹ ಗುರಿಯನ್ನು ಬೆನ್ನಟ್ಟಿದ್ದ ಮುಂಬೈ ತಂಡದ ಹೋರಾಟಕ್ಕೆ ಫಲ ಸಿಗಲಿಲ್ಲ. ಮುಂಬೈ ಆಲ್‌ರೌಂಡರ್ ಶಾರ್ದೂಲ್ ಠಾಕೂರ್ (66; 124ಎ, 4X5, 6X1) ಅವರು ಅರ್ಧಶತಕ ಗಳಿಸಿದರು.

ಅಕ್ಷಯ್ ವಾಡಕರ್ ನಾಯಕತ್ವದ ವಿದರ್ಭ ತಂಡವು 80 ರನ್‌ಗಳಿಂದ ಜಯಿಸಿ ಫೈನಲ್ ಪ್ರವೇಶಿಸಿತು. ಇದೇ 26ರಂದು ಪ್ರಶಸ್ತಿಗಾಗಿ ಆರಂಭವಾಗುವ ಅಂತಿಮ ಹಣಾಹಣಿಯಲ್ಲಿ ವಿದರ್ಭವು ಕೇರಳವನ್ನು ಎದುರಿಸಲಿದೆ.

ನಾಲ್ಕರ ಘಟ್ಟದ ಪಂದ್ಯದಲ್ಲಿ 406 ಪಂದ್ಯಗಳ ಗೆಲುವಿನ ಗುರಿಯನ್ನು ಮುಂಬೈ ಬೆನ್ನಟ್ಟಿತ್ತು. ಆದರೆ ಅಗ್ರ ಹಾಗೂ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಮತ್ತೆ ವೈಫಲ್ಯ ಅನುಭವಿಸಿದರು. ಆಕಾಶ್ ಆನಂದ್ ಬಿಟ್ಟರೆ ಉಳಿದವರು ಹೆಚ್ಚು ಹೊತ್ತು ನಿಲ್ಲಲಿಲ್ಲ. ಎಂದಿನಂತೆ ಕೆಳಕ್ರಮಾಂಕದ ಬ್ಯಾಟರ್‌ಗಳೇ ಹೆಚ್ಚು ಹೋರಾಟ ಮಾಡಿದರು.

ಅದರಲ್ಲೂ ಶಾರ್ದೂಲ್ ಠಾಕೂರ್ ಹಾಗೂ ಶಮ್ಸ್ ಮುಲಾನಿ (46; 94ಎ) ತಂಡದ ಗೆಲುವಿಗಾಗಿ ಹೋರಾಡಿದರು. ಕೊನೆಯಲ್ಲಿ ಮೋಹಿತ್ ಅವಸ್ಥಿ (34; 43ಎ) ಮತ್ತು ರಾಯ್‌ಸ್ಟನ್ ಡಯಾಸ್ (ಔಟಾಗದೆ 23) ಅವರ ಆಟವೂ ಗಮನ ಸೆಳೆಯಿತು. ಆದರೆ, ವಿದರ್ಭ ತಂಡದ ಹರ್ಷ ದುಬೆ (127ಕ್ಕೆ5) ಅವರ ದಾಳಿಯ ಮುಂದೆ ಮುಂಬೈ ಕುಸಿಯಿತು. 42 ಬಾರಿಯ ಚಾಂಪಿಯನ್ ತಂಡವು ನಾಲ್ಕರ ಘಟ್ಟದಲ್ಲಿಯೇ ಹೊರಬಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 383. ಮುಂಬೈ: 270. ಎರಡನೇ ಇನಿಂಗ್ಸ್: ವಿದರ್ಭ: 292. ಮುಂಬೈ: 97.5 ಓವರ್‌ಗಳಲ್ಲಿ 325 (ಆಕಾಶ್ ಆನಂದ್ 39, ಶಮ್ಸ್ ಮುಲಾನಿ 46, ಶಾರ್ದೂಲ್ ಠಾಕೂರ್ 66, ತನುಷ್ ಕೋಟ್ಯಾನ್ 26, ಮೋಹಿತ್ ಅವಸ್ಥಿ 34, ರಾಯಸ್ಟನ್ ಡಯಾಸ್ ಔಟಾಗದೆ 23; ಹರ್ಷ ದುಬೆ 127ಕ್ಕೆ5, ಯಶ್ ಠಾಕೂರ್ 43ಕ್ಕೆ2, ಪಾರ್ಥ್ ರೇಖಡೆ 70ಕ್ಕೆ2) ಫಲಿತಾಂಶ: ವಿದರ್ಭ ತಂಡಕ್ಕೆ 80 ರನ್ ಜಯ. ಪಂದ್ಯದ ಆಟಗಾರ: ಯಶ್ ರಾಥೋಡ್.

ಗೋಲು ದಾಖಲಿಸಿದ ಬೆಂಗಳೂರು ಎಫ್‌ಸಿ ಆಟಗಾರರ ಸಂಭ್ರಮ –ಎಕ್ಸ್ ಚಿತ್ರ

ಬಿಎಫ್‌ಸಿಗೆ ಮಣಿದ ನಾರ್ತ್‌ಈಸ್ಟ್

ಶಿಲ್ಲಾಂಗ್ (ಪಿಟಿಐ): ಬೆಂಗಳೂರು ಎಫ್‌ಸಿ ತಂಡ, ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಶುಕ್ರವಾರ ನಾರ್ತ್‌ಈಸ್ಟ್ ಯುನೈಟೆಡ್ ತಂಡವನ್ನು 2–0 ಗೋಲುಗಳಿಂದ ಸೋಲಿಸಿತು. ಈ ಮೂಲಕ ಲೀಗ್‌ನಲ್ಲಿ ಹತ್ತನೇ ಗೆಲುವಿನಿಂದ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿತು.

ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವಿರಾಮದ ವೇಳೆ ಬ್ಲೂಸ್ ತಂಡ 1–0 ಗೋಲಿನಿಂದ ಮುಂದಿತ್ತು. ಮೂರನೇ ನಿಮಿಷವೇ ಆಲ್ಬರ್ಟೊ ನೊಗುಯೇರಾ ಪಾಸ್‌ನಲ್ಲಿ ರಯಾನ್ ವಿಲಿಯಮ್ಸ್ ತಂಡಕ್ಕೆ ಮುನ್ನಡೆ ಒದಗಿಸಿದರು. 81ನೇ ನಿಮಿಷ ಆಲ್ಬರ್ಟೊ ನೊಗುಯೇರಾ ಸ್ವತಃ ಗೋಲು ಗಳಿಸಿ ಗೆಲುವಿನ ಅಂತರ ಹೆಚ್ಚಿಸಿದರು.

21 ಪಂದ್ಯಗಳನ್ನು ಆಡಿರುವ ಸುನಿಲ್ ಚೆಟ್ರಿ ಪಡೆ 10 ಗೆದ್ದು, ನಾಲ್ಕು ಡ್ರಾ ಮಾಡಿಕೊಂಡಿದ್ದು, ಏಳರಲ್ಲಿ ಸೋತಿದ್ದು ಒಟ್ಟು 34 ಪಾಯಿಂಟ್‌ಗಳೊಡನೆ ನಾಲ್ಕನೇ ಸ್ಥಾನಕ್ಕೇರಿತು. ಈ ಹಿಂದೆ ನಾಲ್ಕನೇ ಸ್ಥಾನದಲ್ಲಿದ್ದ ನಾರ್ತ್‌ಈಸ್ಟ್ (32 ಪಾಯಿಂಟ್ಸ್) ಐದನೇ ಸ್ಥಾನಕ್ಕೆ ಸರಿಯಿತು.

ಮೋಹನ್ ಬಾಗನ್ (49 ಪಾಯಿಂಟ್ಸ್), ಎಫ್‌ಸಿ ಗೋವಾ (39), ಜಮ್ಷೆಡ್‌ಪುರ (37) ಕ್ರಮವಾಗಿ ಮೊದಲ ಮೂರು ಸ್ಥಾನದಲ್ಲಿವೆ.

ರಾಷ್ಟ್ರೀಯ ಕಬಡ್ಡಿ: ಕರ್ನಾಟಕ ತಂಡ ಶುಭಾರಂಭ

ಕಟಕ್ (ಪಿಟಿಐ): ಅಚ್ಚುಕಟ್ಟಾದ ಆಟದ ಪ್ರದರ್ಶನ ನೀಡಿದ ಕರ್ನಾಟಕ ತಂಡ, ಸೀನಿಯರ್ ರಾಷ್ಟ್ರೀಯ ಕಬಡ್ಡಿ ಚಾಂಪಿಯನ್‌ಷಿಪ್‌ನ 'ಜಿ' ಗುಂಪಿನ ಪಂದ್ಯದಲ್ಲಿ ಶುಕ್ರವಾರ ಉತ್ತರಾಖಂಡ ತಂಡವನ್ನು 46–26 ಪಾಯಿಂಟ್‌ಗಳಿಂದ ಸೋಲಿಸಿತು.

ಇಲ್ಲಿನ ಜವಾಹರಲಾಲ್ ನೆಹರೂ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಚಾಂಪಿಯನ್‌ಷಿಪ್‌ನಲ್ಲಿ ಪಂಜಾಬ್ ಮತ್ತು ಪಶ್ಚಿಮ ಬಂಗಾಳ ತಂಡಗಳೂ 'ಜಿ' ಗುಂಪಿನಲ್ಲಿವೆ. ಪಂಜಾಬ್ ಇನ್ನೊಂದು ಪಂದ್ಯದಲ್ಲಿ 49–24 ರಿಂದ ಬಂಗಾಳ ತಂಡವನ್ನು ಮಣಿಸಿತು.

ಪ್ರೊ ಲೀಗ್ ಹಾಕಿ: ಜರ್ಮನಿಗೆ ಮಣಿದ ವನಿತೆಯರು

ಭಾರತ ಪುರುಷರ ತಂಡಕ್ಕೆ ಅರ್ಹ ಜಯ

ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ಹಾಕಿ ತಂಡದ ಆಟಗಾರರು –ಎಕ್ಸ್ ಚಿತ್ರ

ಭುವನೇಶ್ವರ, (ಪಿಟಿಐ): ಆರಂಭಿಕ ಹಿನ್ನಡೆಯಿಂದ ಚೇತರಿಸಿದ ಭಾರತ ತಂಡ, ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಶುಕ್ರವಾರ ಐರ್ಲೆಂಡ್ ತಂಡವನ್ನು 3–1 ಗೋಲುಗಳಿಂದ ಸೋಲಿಸಿತು. ಇದು ತವರಿನಲ್ಲಿ ಅಭಿಯಾನ ಆರಂಭಿಸಿರುವ ಭಾರತ ಪುರುಷರ ತಂಡಕ್ಕೆ ಐದು ಪಂದ್ಯಗಳಲ್ಲಿ ಮೂರನೇ ಗೆಲುವಾಗಿದೆ.

ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಂಟನೇ ನಿಮಿಷ ಜೆರೆಮಿ ಡಂಕನ್ ಗಳಿಸಿದ ಫೀಲ್ಡ್ ಗೋಲಿನ ನೆರವಿನಿಂದ ಐರ್ಲೆಂಡ್ ತಂಡ ಮುನ್ನಡೆ ಪಡೆದಿತ್ತು.

ಆದರೆ ಎಎರಡನೇ ಕ್ವಾರ್ಟರ್‌ನಲ್ಲಿ, ಪಂದ್ಯದ 22ನೇ ನಿಮಿಷ ಮನ್‌ದೀಪ್ ಸಿಂಗ್ ಗೋಲು ಗಳಿಸಿ ಸ್ಕೋರ್ ಸಮ ಮಾಡಲು ನೆರವಾದರು. ಜರ್ಮನ್‌ಪ್ರೀತ್ ಸಿಂಗ್ (45ನೇ ನಿಮಿಷ) ಮತ್ತು ಸುಖಜೀತ್ ಸಿಂಗ್ (58ನೇ ನಿಮಿಷ) ಅವರು ಗೋಲು ಗಳಿಸಿ ಭಾರತ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಭಾರತ ಶನಿವಾರ ನಡೆಯುವ ರಿಟರ್ನ್ ಲೆಗ್ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಮತ್ತೆ ಎದುರಿಸಲಿದೆ. ಭಾರತ ಐದು ಪಂದ್ಯಗಳಿಂದ 9 ಪಾಯಿಂಟ್ಸ್ ಕಲೆಹಾಕಿ ಐದನೇ ಸ್ಥಾನಕ್ಕೇರಿತು.

ಮಹಿಳೆಯರಿಗೆ ನಿರಾಸೆ: ನಿರಾಶಾದಾಯಕ ಪ್ರದರ್ಶನ ಮುಂದುವರಿಸಿದ ಭಾರತ ಮಹಿಳಾ ಹಾಕಿ ತಂಡ ಶುಕ್ರವಾರ ನಡೆದ ಪಂದ್ಯದಲ್ಲಿ ಜರ್ಮನಿ ತಂಡಕ್ಕೆ 0–4 ಗೋಲುಗಳಿಂದ ಮಣಿಯಿತು. ಇದು ಭಾರತ ತಂಡಕ್ಕೆ ಸತತ ನಾಲ್ಕನೇ ಸೋಲು.

ಮೂರು ಫೀಲ್ಡ್ ಗೋಲುಗಳನ್ನು ಹೊಡೆದು ಜರ್ಮನಿ ಪಂದ್ಯದಲ್ಲಿ ಹಿಡಿತ ಸಾಧಿಸಿತು. ಅಮೇಲಿ ವೊರ್ಟ್‌ಮ್ಯಾನ್ (3ನೇ ನಿಮಿಷ), ಸೋಫಿಯಾ ಶ್ವಾಬೆ (18ನೇ ಮತ್ತು 47ನೇ ನಿಮಿಷ) ಮತ್ತು ಕೊನೆಯಲ್ಲಿ ಹಾಕೆನ್‌ಬರ್ಗ್ (59ನೇ ನಿಮಿಷ) ಪೆನಾಲ್ಟಿ ಕಾರ್ನರ್‌ನಲ್ಲಿ ಚೆಂಡನ್ನು ಗುರಿ ಸೇರಿಸಿದರು.

ಭಾರತ ತಂಡವು ಶನಿವಾರ ಜರ್ಮನಿ ವಿರುದ್ಧ ರಿಟರ್ನ್ ಲೆಗ್ ಪಂದ್ಯ ಆಡಲಿದೆ. ಅಂಕಪಟ್ಟಿಯಲ್ಲಿ ಭಾರತ ಮಹಿಳಾ ತಂಡ ಆರನೇ ಸ್ಥಾನದಲ್ಲಿದೆ.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

EXECUTIVE AD SALES

Job Location : Bangalore (MG Road)

Key Responsibilities:
- Sales Strategy & Client Acquisition
- Client Relationship Management
- Campaign Development & Coordination
- Market Research & Trends
- Performance Analysis

Requirements :
- Any Graduate
- 3+ years of experience in PR, advertising sales in print media, radio, digital or native advertising.
- Stakeholder management.

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in